

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 12 ಬುಧವಾರ 2023

ಸಂಪುಟ: 44 | ಸಂಚಿಕೆ: 87 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಪಿಯುಸಿಯಲ್ಲಿ ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ

20 ಆಂತರಿಕ ಅಂಕ

2023–24ನೆ ಸಾಲಿನಲ್ಲೇ ಭಾಷಾ, ಪ್ರಮುಖ ವಿಷಯಗಳಿಗೆ ಅನ್ವಯ



ಬೆಂಗಳೂರು, ಜು.11– ಪಿಯುಸಿ ಪರೀಕ್ಷೆಗೆ ಸರ್ಕಾರ ಹೊಸ ಅಂಕ ಮಾದರಿ ಜಾರಿಗೊಳಿಸಿದೆ. 2023–24ನೇ ಸಾಲಿನಿಂದಲೇ ಹೊಸ ನಿಯಮ ಜಾರಿಗೆ ಬರಲಿದೆ. ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ ಇನ್ನು ಮುಂದೆ 20 ಆಂತರಿಕ ಅಂಕ ನೀಡಲು ಸರ್ಕಾರ ನಿರ್ಧಾರ ಮಾಡಿದೆ. ಭಾಷಾ ಮತ್ತು ಪ್ರಮುಖ ವಿಷಯಗಳಿಗೆ ಈ ನಿಯಮ ಅನ್ವಯ ಆಗಲಿದೆ.

ಇಷ್ಟು ದಿನ ವಿಜ್ಞಾನ ವಿಷಯಗಳಿಗೆ 30 ಅಂಕಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಯುತ್ತಿತ್ತು. 70 ಅಂಕಕ್ಕೆ ಥಿಯರಿ ಇತ್ತು. ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ ಇನ್ನು ಮುಂದೆ ಆಂತರಿಕ ಅಂಕ ನೀಡಲು ನಿರ್ಧಾರ ಮಾಡಲಾಗಿದೆ. 100 ಅಂಕಕ್ಕೆ ಇದ್ದ ನಿಯಮ ಬದಲಾವಣೆ ಮಾಡಿ 80 ಅಂಕ ಥಿಯರಿ, 20 ಆಂತರಿಕ ಅಂಕ ನೀಡುವ ನಿಯಮ ಜಾರಿ ಮಾಡಲಾಗಿದೆ. ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿಗೆ ಈ ನಿಯಮ ಅನ್ವಯ ಆಗಲಿದೆ. ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ನಿಯಮ ಜಾರಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಹೊಸ ನಿಯಮದಲ್ಲಿ ಏನಿದೆ: ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ 20 ಅಂಕ ಆಂತರಿಕ ಅಂಕವಾಗಿ ನೀಡಲಾಗುತ್ತದೆ. ಭಾಷಾ ವಿಷಯ ಮತ್ತು ಕೋರ್ ವಿಷಯಗಳಿಗೆ ಈ ನಿಯಮ ಅನ್ವಯ ಆಗಲಿದೆ. 2023–24ನೇ ಸಾಲಿನಿಂದಲೇ ಹೊಸ ನಿಯಮ ಜಾರಿ ಆಗಲಿದೆ. ಪ್ರಾಯೋಗಿಕ ವಿಷಯಗಳಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ,



▶ 8ನೇ ಪುಟಕ್ಕೆ

ಕೆಬಿಜಿಯವರ ಛೂಮಂತ್ರ.. ಛೂಮಂತ್ರ..



ತಂದೆ–ತಾಯಂದಿರು ಹಾಗೂ ಹಿರಿಯ ನಾಗರಿಕರಿಗೆ ಕಾನೂನು 'ಆಧಾರ'

■ ಪುಟ–4

ಮಾಸಾಂತ್ಯದೊಳಗೆ ಅರ್ಹ ರೈತರಿಗೆ ಯಶಸ್ವಿನಿ ಕಾರ್ಡ್ ವಿತರಣೆ

ತಾಲೂಕು ಮಟ್ಟದಲ್ಲೂ ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ಯಶಸ್ವಿನಿ ಕಾರ್ಡ್‌ದಾರರಿಗೆ ಉಚಿತ ಚಿಕಿತ್ಸೆ



ಬೆಂಗಳೂರು, ಜು.11(ಕೆಎಂಶಿ)– ರಾಜ್ಯದ ಎಲ್ಲಾ ಅರ್ಹ ರೈತರಿಗೆ ಈ ತಿಂಗಳ ಅಂತ್ಯದ ವೇಳೆಗೆ ಯಶಸ್ವಿನಿ ಕಾರ್ಡ್ ವಿತರಣೆ ಮಾಡಲಾಗುವುದು ಎಂದು ಸಹಕಾರ ಸಚಿವ ಕೆಎನ್. ರಾಜಣ್ಣ ವಿಧಾನಪರಿಷತ್ತಿಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಪ್ರತಾಪ್ ಸಿಂಹ ನಾಯಕ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ▶ 8ನೇ ಪುಟಕ್ಕೆ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ

ಅಪಘಾತಗಳಿಗೆ ರಹದಾರಿಯಾಗಿದೆ!

- ವಿಧಾನಸಭೆಯಲ್ಲಿ ಗೃಹ ಸಚಿವ ಡಾ. ಪರಮೇಶ್ವರ್ ವಿಷಾದ
- ಉದ್ಘಾಟನೆಯಾದ ನಾಲ್ಕು ತಿಂಗಳಲ್ಲೇ 132 ಮಂದಿ ಬಲಿ
- ಎಡಿಜಿಪಿ ವರದಿ ಆಧರಿಸಿ ಅಪಘಾತ ತಡೆಗೆ ಕ್ರಮ; 35 ಕಿ.ಮೀ.ಗೊಂದರಂತೆ ಹೆದ್ದಾರಿ ಗಸ್ತು ವಾಹನ ನಿಯೋಜನೆ





ಬೆಂಗಳೂರು, ಜು.11(ಕೆಎಂಶಿ) – ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಗೊಂದಲಗಳಿಂದ ಕೂಡಿದ್ದು, ಅಪಘಾತಗಳಿಗೆ ರಹದಾರಿ ಮಾಡಿಕೊಡುತ್ತಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು. ಜನರಿಗೆ ಅನುಕೂಲವಾಗುವ ಬದಲಾಗಿ ಸಾಕಷ್ಟು ನ್ಯೂನತೆಗಳಿಂದ ಕೂಡಿದೆ. ಒಂದು ರಾಷ್ಟ್ರೀಯ ಹೆದ್ದಾರಿಗೆ ಅನುಸರಿಸಬೇಕಾದ ಮಾನದಂಡಗಳನ್ನು ರಸ್ತೆ ನಿರ್ಮಿಸಿದ ಗುತ್ತಿಗೆದಾರರು ಅನುಸರಿಸಿಲ್ಲ ಎಂದು ಕಿಡಿಕಾರಿದರು. ಪ್ರಶ್ನೋತ್ತರ ವೇಳೆಯಲ್ಲಿ ಹಿರಿಯ ಸದಸ್ಯ ಎಸ್. ಸುರೇಶ್‌ಕುಮಾರ್, ಜಿ.ಟಿ.ದೇವೇಗೌಡ ಮತ್ತಿತರರು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ▶ 8ನೇ ಪುಟಕ್ಕೆ







ಹತ್ಯೆಗೀಡಾದ ವೇಣುಗೋಪಾಲ್ ನಿವಾಸಕ್ಕೆ ಬಿಜೆಪಿ ಸತ್ಯ ಪರಿಶೀಲನಾ ತಂಡ ಭೇಟಿ; ಮಾಹಿತಿ ಸಂಗ್ರಹ

ತಿ.ನರಸೀಪುರ. ಜು,11(ಎಸ್‌ಕೆ)–ತಿ.ನರಸೀಪುರದಲ್ಲಿ ಕೊಲೆಯಾಗಿರುವ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಮನೆಗೆ ಮಂಗಳವಾರ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೇತೃತ್ವದ ಸತ್ಯಪರಿಶೀಲನಾ ತಂಡ ಭೇಟಿ ನೀಡಿ, ಮಾಹಿತಿ ಸಂಗ್ರಹಿಸುವುದರೊಂದಿಗೆ ಕುಟುಂಬದವರಿಗೆ ಸಾಂತ್ವನ ಹೇಳಿತು. ತಿ.ನರಸೀಪುರದ



ಲಾಲ್ ಬಹದ್ದೂರ್ ಶಾಸ್ತ್ರಿನಗರದ ಶ್ರೀರಾಮ ಕಾಲೋನಿಯಲ್ಲಿರುವ ಮೃತ ವೇಣುಗೋಪಾಲ್ ಮನೆಗೆ ಭೇಟಿ ನೀಡಿದ ತಂಡ, ಕುಟುಂಬಸ್ಥರಿಗೆ ಸಾಂತ್ವನ ಹೇಳಿತು. ಈ ವೇಳೆ ಮಗನನ್ನು ಕಳೆದುಕೊಂಡಿರುವ ವೇಣುಗೋಪಾಲ್ ತಾಯಿ ಗೋಳಾಡಿದರು. ಯಾರು ಎಷ್ಟೇ ಸಮಾಧಾನ ಮಾಡಿದರೂ, ▶ 8ನೇ ಪುಟಕ್ಕೆ

ಯುವ ಬ್ರಿಗೇಡ್ ಕಾರ್ಯಕರ್ತನ ಕೊಲೆ ಪ್ರಕರಣ

ಎಲ್ಲಾ ಆರು ಆರೋಪಿಗಳ ಬಂಧನ



ತಿ.ನರಸೀಪುರ, ಜು.11(ಬಿಎಲ್‌ಯು, ಎಸ್‌ಕೆ)– ಮೈಸೂರು ಜಿಲ್ಲೆಯ ತಿ.ನರಸೀಪುರದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಇಬ್ಬರನ್ನು ಬಂಧಿಸಿದ್ದ ಪೊಲೀಸರು ಇಂದು ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ವೇಣುಗೋಪಾಲ್ ಕೊಲೆ ಪ್ರಕರಣ ಭೇದಿಸಲು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಅವರು ಎರಡು ವಿಶೇಷ ತಂಡಗಳನ್ನು ರಚಿಸಿದ್ದರು. ಸೋಮವಾರ ಮಣಿಕಂಠ ಮತ್ತು ಸಂದೇಶ್‌ನನ್ನು ಬಂಧಿಸಿದ್ದರು. ಇಂದು ಉಳಿದ ನಾಲ್ವರು ಆರೋಪಿಗಳಾದ ಶಂಕರ್ ಅಲಿಯಾಸ್ ತುಪ್ಪ, ಅನಿಲ್, ಮಂಜು ಹಾಗೂ ಹ್ಯಾರಿಸ್‌ನನ್ನು ಬಂಧಿಸಿದ್ದಾರೆ. ಈ ಮಧ್ಯೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್. ಈ ಕೊಲೆ ಪ್ರಕರಣ ಸಂಬಂಧ ಇನ್ನು ಹಲವರನ್ನು ಬಂಧಿಸುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಡಿವೈಎಸ್ಪಿ ಗೋವಿಂದರಾಜು ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ವೇಣುಗೋಪಾಲ್ ಕೊಲೆ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಗಳನ್ನು ಕಲೆ ಹಾಕಿರುವ ಪೊಲೀಸರು ಈ ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿದ್ದಾರೆಯೇ ಎಂಬ ಬಗ್ಗೆ ಮಾಹಿತಿಯನ್ನು ಕಲೆ ಹಾಕುತ್ತಿದ್ದಾರೆ



ಜೈನ ಮುನಿಗಳ ಹತ್ಯೆಗೆ ಸುತ್ತೂರು ಶ್ರೀಗಳ ವಿಷಾದ



ಸುತ್ತೂರು ಶ್ರೀ

ಮೈಸೂರು,ಜು.11–ಬೆಳಗಾವಿ ಜಿಲ್ಲೆಯ ಹಿರೇಕೋಡಿಯ ನಂದಿ ಪರ್ವತ ಆಶ್ರಮದ ಜೈನ ಮುನಿ ಶ್ರೀ ಕಾಮಕುಮಾರ ನಂದಿ ಮಹಾರಾಜರ ಬರ್ಬರ ಹತ್ಯೆ ಸುದ್ದಿ ಆಘಾತ ಉಂಟು ಮಾಡುವುದಾಗಿದೆ. 25 ವರ್ಷಗಳ ಸನ್ಯಾಸ ಜೀವನ ನಡೆಸಿದ ಶ್ರೀಗಳಿಗೆ ಇಂಥ ದಾರುಣ ಅಂತ್ಯ ಅದೂ ಅವರ ಸಮೀಪದವರಿಂದಲೇ ಆಗಿದೆ. ಅಹಿಂಸಾ ತತ್ವವನ್ನು ಬೋಧಿಸುವ, ಪಾಲಿಸುವ ಇಂಥ ಸನ್ಯಾಸಿಗಳನ್ನೇ ಕೊಲೆ ಮಾಡುವಂಥ ಮನಃಸ್ಥಿತಿ ದುಃಖಕರವಾದುದು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದ್ದಾರೆ.

ಸರ್ಕಾರವು ಕೂಲಂಕುಷ ತನಿಖೆ ನಡೆಸಿ ಈ ದೌರ್ಜನ್ಯ ಎಸಗಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಂಡು ಮುಂದೆ ಇಂಥ ಕೃತ್ಯಗಳಿಗೆ ಅವಕಾಶವಾಗದಂತೆ ಗಮನ ಹರಿಸಿ, ಅಗತ್ಯವಿರುವೆಡೆಗಳಿಗೆ ಸೂಕ್ತ ಬಂದೋಬಸ್ತ್ ನೀಡಿ ರಾಜ್ಯದಲ್ಲಿ ಶಾಂತಿಯಿಂದ ಬದುಕುವುದಕ್ಕೆ ಸೂಕ್ತ ವಾತಾವರಣ ನಿರ್ಮಿಸಬೇಕಾದುದು ಅಗತ್ಯ.

ದಿವಂಗತರ ಆತ್ಮಕ್ಕೆ ಶಾಂತಿಯನ್ನು, ರಾಜ್ಯದ ಎಲ್ಲ ಜೈನ ಬಂಧುಗಳಿಗೆ–ವಿಶೇಷವಾಗಿ ಅವರ ಭಕ್ತಸಮುದಾಯಕ್ಕೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತ, ಈ ದುಃಖದ ಸಮಯದಲ್ಲಿ ಜೈನ ಬಂಧುಗಳೊಂದಿಗಿದ್ದೇವೆ ಎಂದು ಸುತ್ತೂರು ಶ್ರೀಗಳು ಅಭಿಪ್ರಾಯಪಟ್ಟಿದ್ದಾರೆ.

ಸಾಧುಗಳಿಗೆ ಸರ್ಕಾರ ರಕ್ಷಣೆ ನೀಡಲಿ

ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಆಗ್ರಹ



ಮೈಸೂರು,ಜು.11–ಜೈನಮುನಿ ಕಾಮಕುಮಾರ ನಂದಿ ಸ್ವಾಮೀಜಿ ಮಹಾರಾಜರ ಹತ್ಯೆ ಇಡೀ ಸಮಾಜಕ್ಕೆ ಆಘಾತ ಉಂಟು ಮಾಡಿದೆ. ಅಹಿಂಸಾ ಪರಮೋಧರ್ಮ ಎಂದು ಬದುಕುತ್ತಿರುವ ಜೈನ ಮುನಿಗಳು ಹಾಗೂ ಸಾಧುಗಳಿಗೆ ಸರ್ಕಾರ ರಕ್ಷಣೆ ನೀಡಬೇಕು ಎಂದು ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸರ್ಕಾರಕ್ಕೆ ಆಗ್ರಹಿಸಿದರು.

ಮೈಸೂರಿನ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಬೆಳಗಾಂನಲ್ಲಿ ಕಿಡಿಗೇಡಿಗಳಿಂದ ಹತ್ಯೆಗೊಳಗಾದ ಜೈನಮುನಿ ಕಾಮಕುಮಾರ ನಂದಿ ಮಹಾರಾಜ ಶ್ರೀಗಳಿಗೆ ಅಪೂರ್ವ ಸ್ನೇಹ ಬಳಗದ ವತಿಯಿಂದ ಸಂತಾಪ ಸಭೆಯಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಮಾತನಾಡಿದ ಅವರು, ಮುನಿಗಳ ಹತ್ಯೆ ಮಾಡಿದವರಿಗೆ ಸರ್ಕಾರ ಕಾನೂನಾತ್ಮಕವಾಗಿ ಕಠಿಣ ಶಿಕ್ಷೆ ವಿಧಿಸಬೇಕು. ಇಂತಹ ಕೃತ್ಯಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದರು.

ನಗರಪಾಲಿಕೆ ಸದಸ್ಯ ಮಾ.ವಿ.ರಾಂಪ್ರಸಾದ್ ಮಾತನಾಡಿ, ಜೈನ ಸಮಾಜ ಶಾಂತಿ ಪ್ರಿಯ ಸಮಾಜ. ಅಹಿಂಸಾ ಮಾರ್ಗ ಸಮಾಜದ ಮೂಲಮಂತ್ರ. ಆದರೆ ಜೈನ ಮುನಿಗಳಿಗೆ ಕರೆಂಟ್ ಶಾಕ್ ನೀಡಿ, ಕೊಲೆ ಮಾಡಿ, ಮೃತದೇಹವನ್ನು ತುಂಡರಿಸಿ ಬೋರ್‌ವೆಲ್‌ನಲ್ಲಿ ತುಂಬಿದ್ದಾರೆ. ಇದು ಅತ್ಯಂತ ಅಮಾನವೀಯ ಕೃತ್ಯ ಸದಾ ಸಮಾಜದ ಒಳಿತಿಗೆ ಶ್ರಮಿಸುವ ಜೈನ ಸಮಾಜದ ಮುನಿಗಳ ಹತ್ಯೆ ಆಗಿರುವುದು ಖಂಡನೀಯ. ಸರ್ಕಾರ ಮಠಾಧೀಶರಿಗೆ, ಮುನಿಗಳಿಗೆ ಭದ್ರತೆ ನೀಡಬೇಕು ಎಂದರು.

ಅಪೂರ್ವ ಸುರೇಶ್, ಒಕ್ಕಲಿಗ ಸಂಘದ ಮಾಜಿ ನಿರ್ದೇಶಕ ಮೈಲಾ.ವಿಜಯ್‌ಕುಮಾರ್, ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿ ಶಮಾನಂದ್ ಸಾಗರ್, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಉದ್ಯಮಿ ಜಯರಾಮ್, ಧರ್ಮರಾಜ್, ನಾಗೇಶ್, ಸಂದೀಪ್, ಎಸ್.ಎನ್.ರಾಜೇಶ್, ಚಿನ್ನ ಬೆಳ್ಳಿ ವ್ಯಾಪಾರ ನೌಕರರ ಸಂಘದ ಅಧ್ಯಕ್ಷರಾದ ಸುರೇಶ್ ಗೋಲ್ಡ್, ಭೈರತಿ ಲಿಂಗರಾಜು, ಸುಚೇಂದ್ರ, ಧರ್ಮೇಂದ್ರ, ಬಸವರಾಜು, ಇನ್ನಿತರರು ಭಾಗವಹಿಸಿದ್ದರು.

ಜು.16ರಂದು ವೈದ್ಯಶ್ರೀ ಪ್ರಶಸ್ತಿ ಪ್ರದಾನ

ಮೈಸೂರು,ಜು.11–ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ರಾಷ್ಟ್ರೀಯ ವೈದ್ಯರ ದಿನಾಚರಣೆ ಮತ್ತು ಸಾಧಕ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ ಮಾಡುವ ಸಮಾರಂಭವನ್ನು ಶ್ರೀ ವಿಶ್ವಪ್ರಸನ್ನ ತೀರ್ಥಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ಜು.16ರ ಭಾನುವಾರ ಸಂಜೆ 4.45ಕ್ಕೆ ಮೈಸೂರಿನ ಕುವೆಂಪು ನಗರದ ಗಾನಭಾರತಿ ಸಭಾಂಗಣ (ವೀಣೆ ಶೇಷಣ್ಣ ಭವನ)ದಲ್ಲಿ ಏರ್ಪಡಿಸಲಾಗಿದೆ.

ವಿಧಾನಪರಿಷತ್ ಸದಸ್ಯರಾದ ವೈದ್ಯರತ್ನ, ಡಾ.ಡಿ.ತಿಮ್ಮಯ್ಯ ಅಧ್ಯಕ್ಷತೆಯಲ್ಲಿ, ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಸದಾನಂದ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಹೇಮಂತ್‌ಕುಮಾರ್, ಅನ್ವೇಷಣಾ ಸೇವಾ ಟ್ರಸ್ಟ್‌ನ ಡಾ.ಎಂ.ಜಿ.ಆರ್. ಅರಸ್, ಅಮರನಾಥ್‌ರಾಜೇ ಅರಸ್ ಮತ್ತು ಶತಮಾನೋತ್ಸವ ಸಂಭ್ರಮದ ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್ ಪಾಲ್ಗೊಳ್ಳುವರು. ವೈದ್ಯಕೀಯ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಎಂ.ಎ.ಶೇಖರ್, ಮೈಸೂರು ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ. ಕೆ.ಆರ್.ದಾಕ್ಷಾಯಿಣಿ, ಉದರ ರೋಗ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ.ರಾಮಕೃಷ್ಣ ಹೆಚ್.ಡಿ. ಕೋಟೆಯ ಪಿಹೆಚ್ ವೈದ್ಯಾಧಿಕಾರಿ ಡಾ.ಎಂ.ಚಂದ್ರಕಲಾ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಡಾ.ಲಕ್ಷ್ಮಿನಾರಾಯಣ ಶೆಣೈ ಮತ್ತು ಜಯದೇವ ಹೃದ್ರೋಗ ಸಂಸ್ಥೆಯ ಸಹಾಯಕ ಪ್ರೊಫೆಸರ್ ಡಾ.ಅರ್ಪಿತ ಅರಸ್ ಅವರಿಗೆ ವೈದ್ಯಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಮೈಸೂರು ಅರಮನೆ ಪ್ರವಾಸಿ ಗೈಡ್‌ಗಳಿಗೆ ಏನೂ ತೊಂದರೆ ಆಗಿಲ್ಲ: ಸ್ಪಷ್ಟನೆ

ಮೈಸೂರು, ಜು.11(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಕಲ್ಪಿಸಿರುವ ಆಡಿಯೋ ಹಾಗೂ ವರ್ಚುವಲ್ ಗೈಡ್ ಸೌಲಭ್ಯದಿಂದ ಪ್ರವಾಸಿ ಮಾರ್ಗದರ್ಶಿಗಳಿಗೆ ಯಾವುದೇ ತೊಂದರೆ ಆಗಿಲ್ಲ ಎಂದು ಮೈಸೂರು ಅನುಮೋದಿತ ಪ್ರವಾಸಿ ಮಾರ್ಗದರ್ಶಿಗಳ ಸಂಸ್ಥೆಯ ಕಾರ್ಯದರ್ಶಿ ರಮೇಶ್ ಸ್ಪಷ್ಟಪಡಿಸಿದ್ದಾರೆ.

'ಮೈಸೂರು ಮಿತ್ರ'ನ ಜುಲೈ 10ರ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಮೈಸೂರು ಅರಮನೆಯಲ್ಲಿ ಆಡಿಯೋ, ವರ್ಚುವಲ್ ಗೈಡ್ ಭರಾಟೆ, ಪ್ರವಾಸಿ ಮಾರ್ಗದರ್ಶಿಗಳಿಗೆ ಸಂಕಷ್ಟ' ಶೀರ್ಷಿಕೆಯ ವರದಿಗೆ ರಮೇಶ್ ಸ್ಪಷ್ಟನೆ ನೀಡಿದ್ದಾರೆ.

ಮೈಸೂರು ಅರಮನೆಯಲ್ಲಿ ಪ್ರವಾಸಿ ಮಾರ್ಗದರ್ಶಿಗಳಿಗೆ ಬೇಡಿಕೆ ಇರುವ ಕಾರಣ ಮೈಸೂರು ಅರಮನೆ ಮಂಡಳಿಯಿಂದಲೇ ಹೊಸ ಪ್ರವಾಸಿ ಮಾರ್ಗದರ್ಶಿಗಳಿಗೆ ತರಬೇತಿ ನೀಡಲಾಗಿದೆ. ಇದು 20 ಪ್ರವಾಸಿ ಮಾರ್ಗದರ್ಶಿಗಳಿಗೆ ಆಸರೆಯಾಗಿದೆ ಎಂದಿದ್ದಾರೆ. ಅರಮನೆ ಮಂಡಳಿಯಿಂದ ನಮಗೆ ಅನುಕೂಲವಾಗಿದೆ. ಬಹಳಷ್ಟು ಪ್ರವಾಸಿಗರಿಗೆ ಆಡಿಯೋ ಹಾಗೂ ವರ್ಚುವಲ್ ಗೈಡ್‌ನಿಂದ ಮಾಹಿತಿ ಬೇಕಾಗಿದೆ ಅಷ್ಟೆ ಎಂದು ರಮೇಶ್ ತಿಳಿಸಿದ್ದಾರೆ.



ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ಡಾನ್ ಬೋಸ್ಕೋ ಸಂಸ್ಥೆ ವತಿಯಿಂದ ಗಾಂಧಿನಗರದ ಆದಿಜಾಂಬವ ಪ್ರಾಥಮಿಕ ಶಾಲೆ ಆವರಣ, ಎನ್.ಆರ್.ಮೊಹಲ್ಲಾದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಡಾನ್ ಬೋಸ್ಕೋ ಸಂಸ್ಥೆಯ ನಿರ್ದೇಶಕರು, ಸಿಬ್ಬಂದಿ ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.11– ಜು.12ರ ಬುಧವಾರ ಬೆಳಗ್ಗೆ 11ರಿಂದ ಸಂಜೆ 4ರವರೆಗೆ ತುರ್ತು ನಿರ್ವಹಣಾ ಕಾರ್ಯ ನಿಮಿತ್ತ ಇನಾಂ ಉತ್ತನಹಳ್ಳಿ, ಎಂ.ಸಿ.ಹುಂಡಿ, ಕೀಳನಪುರ, ಸಿದ್ದರಾಮನಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ ಲಕ್ಷ್ಮೀಪುರ, ಪಿ.ಜಿ ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೆಗಾಲ, ವರಕೋಡು ಪೇಪರ್ ಮಿಲ್, ಎಸ್.ಆರ್.ಇಂಡಸ್ಟ್ರೀಸ್, ಜಾಗ್ವಾರಿ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ.

ಚಾಮುಂಡಿಬೆಟ್ಟದ ದೇವಾಲಯದಲ್ಲಿ ವಿಜೃಂಭಣೆಯ ದರ್ಬಾರ್ ಉತ್ಸವ

● ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭಾಗಿ ● ಮುಗಿಲು ಮುಟ್ಟಿದ ಜೈಕಾರದೊಂದಿಗೆ ನೆರವೇರಿದ ಪೂಜಾ ಕಾರ್ಯ

ಮೈಸೂರು,ಜು.11(ಎಂಟಿವೈ)– ನಾಡದೇವಿ ಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವದ ಅಂಗವಾಗಿ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ದರ್ಬಾರ್ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಬೆಟ್ಟದ ದೇವಾಲಯದ ಪ್ರಾಂಗಣದಲ್ಲಿರುವ ರುದ್ರಾಕ್ಷಿ ಮಂಟಪದಲ್ಲಿ ನಾಡದೇವಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಶಾಸ್ತ್ರೋಕ್ತವಾಗಿ ಪೂಜಾ ಕಾರ್ಯಕ್ರಮ ನೆರವೇರಿಸಿ, ದರ್ಬಾರ್ ಉತ್ಸವ ನೆರವೇರಿಸಲಾಯಿತು. ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ನಡೆದ ದರ್ಬಾರ್ ಉತ್ಸವದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪಾಲ್ಗೊಂಡಿದ್ದರು.

ರುದ್ರಾಕ್ಷಿ ಮಂಟಪದಲ್ಲಿ ರಾತ್ರಿ 8.30ಕ್ಕೆ ನಾಡದೇವಿಗೆ ಉತ್ಸವ ಫಲಪೂಜೆ ನಡೆಸಲಾಯಿತು. ಎಲ್ಲಾ ಧಾರ್ಮಿಕ ಕೈಂಕರ್ಯ ನೆರವೇರಿದ ಬಳಿಕ, ರಾತ್ರಿ 8.45ಕ್ಕೆ ದರ್ಬಾರ್ ಉತ್ಸವ ನೆರವೇರಿಸಲಾಯಿತು. ನಂತರ ಪ್ರಮೋದಾದೇವಿ ಒಡೆಯರ್ ಅವರು ಪೂಜೆ ಸಲ್ಲಿಸಿದರು. ಆ ಮೂಲಕ ವರ್ಧಂತಿ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು.




ಚಾಮುಂಡಿಬೆಟ್ಟದ ದೇವಾಲಯದಲ್ಲಿ ನಡೆದ ದರ್ಬಾರ್ ಉತ್ಸವದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪಾಲ್ಗೊಂಡಿದ್ದರು.

'ಟೂಲ್ ರೂಂ ಮೆಶಿನಿಸ್ಟ್' ಕೋರ್ಸಿಗೆ ಅರ್ಜಿ ಆಹ್ವಾನ

ಮೈಸೂರು: ಜಿಟಿಟಿಸಿ ಮೈಸೂರು ಕೇಂದ್ರದಲ್ಲಿ ನಡೆಸುತ್ತಿರುವ 1 ವರ್ಷ ಅವಧಿಯ ಟೂಲ್ ರೂಮ್ ಮೆಶಿನಿಸ್ಟ್ ಕೋರ್ಸ್‌ನಲ್ಲಿ ಸಾಂಪ್ರದಾಯಿಕ ಹಾಗೂ ಅತ್ಯಾಧುನಿಕವಾಗಿ ಟರ್ನಿಂಗ್, ಮಿಲ್ಲಿಂಗ್, ಗ್ರೈಂಡಿಂಗ್ ವಿಭಾಗದಲ್ಲಿ ಪರಿಣತರಿಂದ ಸಿದ್ಧಾಂತ ಮತ್ತು ಪ್ರಾಯೋಜಿತ ತರಬೇತಿ ನೀಡಲಾಗುವುದು. ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ ಜಿಟಿಟಿಸಿಯಲ್ಲಿ ಉಚಿತವಾಗಿ ತರಬೇತಿಯನ್ನು ಎಐಟಿಟಿ ಯೋಜನೆಯಡಿ ನೀಡಲಾಗುವುದು ಹಾಗೂ ತರಬೇತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ) ಸ್ಟೈಫಂಡ್ ನೀಡಲಾಗುವುದು. ಜು.12ರಿಂದ ತರಗತಿಗಳು ಆರಂಭವಾಗಲಿದ್ದು, ಎಸ್‌ಎಸ್‌ಎಲ್‌ಸಿ ಪಾಸ್ ಅಥವಾ ಫೇಲ್ ಆದವರು ಅರ್ಜಿ ಸಲ್ಲಿಸಬಹುದು. ಪರಿಶಿಷ್ಟ ಜಾತಿ, ಪಂಗಡದ ಅಭ್ಯರ್ಥಿಗಳನ್ನು ಹೊರತುಪಡಿಸಿ ಇತರೆ ಅಭ್ಯರ್ಥಿಗಳು ಶುಲ್ಕ 18,100 ರೂ.ಗಳನ್ನು ಪಾವತಿಸಬೇಕು. ಮಾಹಿತಿಗೆ ಮೊ.ಸಂ. 99454 42654, 9945349638, 994547 9700,9449929667 ಸಂಪರ್ಕಿಸಿ.


ಬೋನಿಗೆ ಬಿದ್ದ ಹೆಣ್ಣು ಚಿರತೆ



ಮೈಸೂರು,ಜು.11(ಎಂಟಿವೈ)– ತಿ.ನರಸೀಪುರ ತಾಲೂಕಿನ ಮುತ್ತತ್ತಿಹಳ್ಳಿ ಗ್ರಾಮದ ಜಮೀನೊಂದರಲ್ಲಿಡಲಾಗಿದ್ದ ಬೋನ್‌ಗೆ ಹೆಣ್ಣು ಚಿರತೆಯೊಂದು ಸೆರೆ ಸಿಕ್ಕಿದೆ.

ಕಳೆದ ರಾತ್ರಿ ಮುತ್ತತ್ತಿಹಳ್ಳಿ ಗ್ರಾಮದ ಇನಾಯತ್ ಹುಸೈನ್ ಎಂಬುವರ ಜಮೀನೊಂದರಲ್ಲಿಟ್ಟಿದ್ದ ಬೋನಿಗೆ 2 ವರ್ಷದ ಹೆಣ್ಣು ಚಿರತೆ ಬಿದ್ದಿದೆ. ಸ್ಥಳಕ್ಕೆ ಆರ್‌ಎಫ್‌ಓ ಸೈಯದ್ ನದೀಮ್ ಹಾಗೂ ಸಿಬ್ಬಂದಿ ತೆರಳಿ ಬೋನಿನಲ್ಲಿದ್ದ ಚಿರತೆಯನ್ನು ವಶಕ್ಕೆ ಪಡೆದು, ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಿದ್ದಾರೆ. ತಿ.ನರಸೀಪುರ ತಾಲೂಕಿನ ಹಲವು ಗ್ರಾಮಗಳಲ್ಲಿ ಚಿರತೆ ಉಪಟಳದ ಬಗ್ಗೆ ದೂರುಗಳು ಬರುತ್ತಲೇ ಇವೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಚಿರತೆ ಹೆಜ್ಜೆಯ ಜಾಡು ದೃಢಪಡಿಸಿಕೊಂಡು ಆಯ್ದ ಗ್ರಾಮಗಳಲ್ಲಿ ಬೋನ್ ಇರಿಸಿದೆ. ಕಳೆದ ವಾರವಷ್ಟೇ ತಾಲೂಕಿನ ಬೊಮ್ಮನಾಯಕನಹಳ್ಳಿ ಗ್ರಾಮದಲ್ಲಿ 4 ವರ್ಷದ ಗಂಡು ಚಿರತೆ ಸೆರೆ ಸಿಕ್ಕಿತ್ತು.

ಟೈಗರ್ ಡೇ: ವನ್ಯಜೀವಿ ಛಾಯಾಚಿತ್ರ ಸ್ಪರ್ಧೆಗೆ ಆಹ್ವಾನ



● ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಿಂದ ಸ್ಪರ್ಧೆ ● ಒಂದು ವರ್ಷದ ಅವಧಿಯಲ್ಲಿ ತೆಗೆದ ಚಿತ್ರಗಳಿಗೆ ಮಾತ್ರ ಅವಕಾಶ ● ಜು.21ರಂದು ಫೋಟೋ ಸಲ್ಲಿಸಲು ಕೊನೆ ದಿನ

ಮೈಸೂರು,ಜು.11(ಎಂಟಿವೈ)– ಅಂತಾರಾಷ್ಟ್ರೀಯ ಹುಲಿ ದಿನದ ಅಂಗವಾಗಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದ ಛಾಯಾಚಿತ್ರ ಸ್ಪರ್ಧೆ ಆಯೋಜಿಸಲು ನಿರ್ಧರಿಸಲಾಗಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದ ವನ್ಯಜೀವಿ ಛಾಯಾಚಿತ್ರ ಸ್ಪರ್ಧೆ ನಡೆಸಲು ಉದ್ದೇಶಿಸಲಾಗಿದೆ.

ಸ್ಪರ್ಧೆಯನ್ನು ಮೂರು ವಿಭಾಗದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆವಾಸಸ್ಥಾನ (ಹ್ಯಾಬಿಟೆಟ್), ಪ್ರಾಣಿಗಳ ವರ್ತನೆ (ಅನಿಮಲ್ ಬಿಹೇವಿಯರ್), ಸಂರಕ್ಷಣೆ (ಕನ್ಸರ್ವೇಷನ್) ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಈ ಮೂರು ವಿಭಾಗಕ್ಕೂ ಪ್ರತ್ಯೇಕವಾಗಿ ಪ್ರಥಮ ಬಹುಮಾನ 20 ಸಾವಿರ ರೂ., ದ್ವಿತೀಯ ಬಹುಮಾನ 10 ಸಾವಿರ ರೂ.ನಗದು ಬಹುಮಾನ ನೀಡಲಾಗುತ್ತದೆ. ವರ್ಷದ ಅವಧಿಯಲ್ಲಿ ನಾಗರಹೊಳೆ ಅರಣ್ಯದಲ್ಲೇ ತೆಗೆದ ಛಾಯಾಚಿತ್ರಗಳನ್ನು ಮಾತ್ರ ಸ್ಪರ್ಧೆಗೆ ಪರಿಗಣಿಸಲಾಗುತ್ತದೆ. ಛಾಯಾಚಿತ್ರ ಸಲ್ಲಿಸಲು ಜು.21 ಕೊನೆ ದಿನವಾಗಿದೆ. ಜು.22ರಿಂದ ಸಲ್ಲಿಕೆಯಾದ ಛಾಯಾಚಿತ್ರಗಳ ಮೌಲ್ಯಮಾಪನ ನಡೆಯಲಿದ್ದು, ಜು.29ರಂದು ವಿಜೇತರ ಹೆಸರನ್ನು ಪ್ರಕಟಿಸಲಾಗುತ್ತದೆ. ಎ–3 ಅಳತೆಯ 3 ಛಾಯಾಚಿತ್ರವನ್ನು ಅಂತರಸಂತೆ ಆರ್‌ಎಫ್‌ಓ ಕಚೇರಿ, ಹುಣಸೂರು ಆರ್‌ಎಫ್‌ಓ ಕಚೇರಿ ಹಾಗೂ ನಾಗರಹೊಳೆ ಆರ್‌ಎಫ್‌ಓ ಕಚೇರಿ(ಪೊನ್ನಂಪೇಟೆ)ಗೆ ಕಳುಹಿಸಬಹುದಾಗಿದೆ. ಅಲ್ಲದೆ, ಸಾಫ್ಟ್ ಕಾಪಿಯನ್ನು ntrphotocontest@gmail.com ಮೇಲ್ ಮಾಡಬಹುದಾಗಿದೆ. ಸ್ಪರ್ಧೆಗೆ ಕೆಲವು ನಿಬಂಧನೆಗಳು ವಿಧಿಸಲಾಗಿದ್ದು, ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಸಮತೋಲನ, ಆರ್ಥಿಕ ಶಿಸ್ತು ಹೊಂದಿರುವ ಬಜೆಟ್

ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ



ಮೈಸೂರು, ಜು.11(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ಈ ಬಾರಿಯ ಬಜೆಟ್ ಸಮತೋಲನದಿಂದ ಕೂಡಿದೆ. ಗ್ಯಾರಂಟಿಗಳಿಗೆ ಆದ್ಯತೆ ನೀಡಿರುವ ಬಜೆಟ್ ಆಗಿದ್ದರೂ ಆರ್ಥಿಕ ಶಿಸ್ತು ಕಾಪಾಡಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗೆ ಹೆಚ್ಚಿನ ಅನುದಾನ ದೊರಕಿರುವುದರಿಂದ ಬೇರೆ ಕ್ಷೇತ್ರಗಳಿಗೆ ಅನುದಾನ ಕಡಿಮೆ ಸಿಕ್ಕಿದೆ. ಬಜೆಟ್‌ನಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು, ಎಪಿಎಂಸಿ ಕಾಯ್ದೆ ವಾಪಸ್ ಪಡೆದಿದ್ದು ಸ್ವಾಗತಾರ್ಹ. ಆದರೆ, ಕೃಷಿ ಉತ್ಪನ್ನಗಳ ಬೆಲೆಯನ್ನು ಸರ್ಕಾರ ನಿಗದಿ, ಜಾನುವಾರು ಹತ್ಯೆ ಕಾಯ್ದೆಯನ್ನು ವಾಪಸ್ ಪಡೆಯಬೇಕಿತ್ತು. ಭೂಸುಧಾರಣೆ ತಿದ್ದುಪಡಿ ಕಾಯ್ದೆ ವಾಪಸ್ ಪಡೆದಿಲ್ಲ. ಈ ಸಂಬಂಧ ಸದ್ಯದಲ್ಲೇ ಸಿಎಂ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಒತ್ತಾಯಿಸಲಾಗುತ್ತದೆ ಎಂದು ತಿಳಿಸಿದರು.

ಕೃಷಿ ಕ್ಷೇತ್ರಕ್ಕೆ ಶೂನ್ಯ ಬಡ್ಡಿ ದರದಲ್ಲಿ 5 ಲಕ್ಷ ಸಾಲ ನೀಡುವುದು ಸ್ವಾಗತಾರ್ಹ. ಎಪಿಎಂಸಿ ಬಲಪಡಿಸಿ ರೈತ ಸ್ನೇಹಿಯಾಗಿಸಬೇಕು. ಸಾಲವು ಹೆಚ್ಚು ರೈತರಿಗೆ ದೊರೆಯುವಂತೆ ಸ್ಕೇಲ್ ಆಫ್ ಫೈನಾನ್ಸ್ ಏರಿಸಬೇಕು. ಕೃಷಿ ಉತ್ಪನ್ನದ ಬೆಲೆ ಆಯೋಗಕ್ಕೆ ಶಾಸನಾತ್ಮಕ ಅಧಿಕಾರ ನವೋದ್ಯಮ ಸ್ಪರ್ಶ ನೀಡುವ ವಿಷಯದಲ್ಲಿ ಸೂಕ್ತ ನೀಲನಕ್ಷೆ ಮಾಡಬೇಕು ಎಂದು ಒತ್ತಾಯಿಸಿದರು.

ನರಗುಂದ ನವಲುಗುಂದ ರೈತ ಬಂಡಾಯಕ್ಕೆ 43 ವರ್ಷ ಸಂದಿದ್ದು, ಜುಲೈ 21ರಂದು ಧಾರವಾಡದ ಎಂಜಿ ಹಿರೇಮಠ ಕಲ್ಯಾಣ ಮಂಟಪದಲ್ಲಿ ಹುತಾತ್ಮ ದಿನಾಚರಣೆ ಮತ್ತು ರೈತ ಚಳವಳಿಯ ಮುಂದಿನ ಹೋರಾಟದ ಘೋಷಣಾ ಸಮಾವೇಶ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ತಾಲೂಕು ಗೌರವಾಧ್ಯಕ್ಷ ವಿಜೇಂದ್ರ, ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ನಂಜನಗೂಡು ತಾಲೂಕು ಘಟಕದ ಅಧ್ಯಕ್ಷ ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಹೆಜ್ಜಿಗೆ ಪ್ರಕಾಶ್, ಮುಖಂಡರಾದ ಬೊಕ್ಕಳ್ಳಿ ನಂಜುಂಡಸ್ವಾಮಿ ಗುರುಲಿಂಗೇಗೌಡ, ಪಿ.ಮರಂಕಯ್ಯ ಉಪಸ್ಥಿತರಿದ್ದರು.

> ಪಡಿತರ ವ್ಯವಸ್ಥೆಗೆ ರಾಜ್ಯದ ರೈತರಿಂದಲೇ ಆಹಾರ ಉತ್ಪನ್ನಗಳನ್ನು ಎಂಎಸ್‌ಪಿ ಖಾತರಿಯೊಂದಿಗೆ ಖರೀದಿಸಬೇಕು. ಈ ಸಾಧ್ಯತೆ ಬಗ್ಗೆ ಚರ್ಚಿಸಲು ರೈತ ಸಂಘದ ಯುವ ಘಟಕವು ಜೊತೆಗೆ ಜು.23ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಸಂವಾದ ಕಾರ್ಯಕ್ರಮ ನಡೆಸಲಿದೆ. ಹಾಗೆಯೇ ಕೊಬ್ಬರಿಗೆ ಕ್ವಿಂಟಾಲ್‌ಗೆ 20,000 ಬೆಂಬಲ ಬೆಲೆ ನಿಗದಿ ಮಾಡಬೇಕು. ರಾಜ್ಯ ಸರ್ಕಾರವು 5,000 ಸಹಾಯಧನ ನೀಡಬೇಕು ಈ ಬಗ್ಗೆ ಜು.24ರಂದು ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ರೈತರ ದುಂಡು ಮೇಜಿನ ಸಭೆ ನಡೆಯಲಿದೆ.
>
> –ಬಡಗಲಪುರ ನಾಗೇಂದ್ರ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.7.2023 ಬುಧವಾರ, ಮಳೆ ನಕ್ಷತ್ರ: ಪುನರ್ವಸು 06.07.2023ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ,
ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್:** ಅಂತರ ಕಾಲೇಜು ಮೈಸೂರು ವಿಭಾಗದ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್ ಪುರುಷ ಮತ್ತು ಮಹಿಳಾ ಚಾಂಪಿಯನ್‌ಶಿಪ್ 2023–24, ಉದ್ಘಾಟನೆ: ಕರ್ನಾಟಕ ಟೇಬಲ್ ಟೆನಿಸ್ ಆಟಗಾರ ಮತ್ತು ಒಲಿಂಪಿಕ್ ಟೇಬಲ್ ಟೆನಿಸ್ ಅಕಾಡೆಮಿ ತರಬೇತುದಾರ ಅಕ್ಷಯ್ ಮಹಾಂತ, ಅಧ್ಯಕ್ಷತೆ: ಎನ್‌ಐಇ ಉಸ್ತುವಾರಿ ಪ್ರಾಂಶುಪಾಲ ಡಾ.ಕೆ.ಸಿ.ಮಂಜುನಾಥ್, ಉಪಸ್ಥಿತರು: ಡಾ.ಎಂ.ಪಿ.ಮುರುಳೀಧರ್, ಸ್ಥಳ: ಎನ್‌ಐಇ ವಜ್ರ ಮಹೋತ್ಸವ ಒಳಾಂಗಣ ಕ್ರೀಡಾ ಸಂಕೀರ್ಣ, ಬೆಳಗ್ಗೆ 9.30ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರ ವಿಕಾರಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ:** ಮೈಸೂರು ವಿಭಾಗ ಮಟ್ಟದ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಒಂದು ದಿನದ ಮಾಹಿತಿ ಶಿಬಿರ, ಉದ್ಘಾಟನೆ: ಪದವಿಪೂರ್ವ ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ಗುಬ್ಬಿಗೂಡು ರಮೇಶ್, ಅಧ್ಯಕ್ಷತೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ನಾಗಮ್ಮ, ಉಪಸ್ಥಿತರು: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಮುಖ್ಯ ಆಯುಕ್ತ ಪಿ. ವಿಶ್ವನಾಥ್, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಬೆಳಗ್ಗೆ 10ಕ್ಕೆ.

■ **ಭಾವಸಾರ ಕ್ಷತ್ರಿಯ ಸಂಘ :** 27ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಮಹಾಮಂಗಳಾರತಿ, ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ವಿಸರ್ಜನೆ ಕಾರ್ಯಕ್ರಮ, ಸ್ಥಳ: ಸಂಘದ ಆವರಣ, ಬನ್ನಿಮಂಟಪ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಪ್ರೊ. ಬಿ.ಶೇಕ್ ಆಲಿ ಹಯಾತ್ ಔರ್ ಕಿದ್‌ಮತ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಉರ್ದು ಕವಿ ಡಾ. ಮಹೇರ್ ಮನ್ಸೂರ್, ಸ್ಥಳ: ಕಾವೇರಿ ಸಭಾಂಗಣ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಬೆಳಗ್ಗೆ 10.30ಕ್ಕೆ.


■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ:** ದಿವಂಗತ ಕೆ.ಹೆಚ್.ರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ ಅವರ ಸಮಾಧಿಗೆ ಪೂಜೆ, ಸಾನ್ನಿಧ್ಯ: ಶ್ರೀ ಸಿದ್ಧರಾಮ ಚೈತನ್ಯ ಮಹಾಸ್ವಾಮೀಜಿ, ಸ್ಥಳ: ಕೆ.ಹೆಚ್.ರಾಮಯ್ಯನವರ ಸಮಾಧಿ, ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 11.30ಕ್ಕೆ.

■ **ಧರ್ಮಪ್ರಕಾಶ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ:** ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ ಜನ್ಮ ದಿನಾಚರಣೆ, ಅಧ್ಯಕ್ಷತೆ: ಪ್ರೌಢಶಾಲಾ ಮುಖ್ಯ ಶಿಕ್ಷಕ ಎಚ್.ಎಸ್.ತಿಪ್ಪೇಸ್ವಾಮಿ, ಮುಖ್ಯ ಅತಿಥಿಗಳು: ಸಾಹಿತಿ ಬನ್ನೂರು ಕೆ.ರಾಜು, ಉದ್ಘಾಟನೆ: ಪತ್ರಕರ್ತ ದೊಡ್ಡಹುಂಡಿ ರಾಜಣ್ಣ, ಬಹುಮಾನ ವಿತರಣೆ: ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ.ಕಾವೇರಿಯಮ್ಮ, ಸ್ಥಳ: ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಸಯ್ಯಾಜಿರಾವ್ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ದಿವಂಗತ ಕೆ.ಹೆಚ್. ರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ ಬಾಲ ವಿಕಾಸ ಶ್ರೀ, ಯುವ ವಿಕಾಸ ಶ್ರೀ ಮತ್ತು ವಿಕಾಸ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಸಿದ್ಧರಾಮ ಚೈತನ್ಯ ಮಹಾಸ್ವಾಮೀಜಿ, ಅಧ್ಯಕ್ಷತೆ : ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ. ರಾಮು, ಕಾರ್ಯಕ್ರಮ ಕುರಿತು : ವೇದಿಕೆ ರಾಜ್ಯಾಧ್ಯಕ್ಷೆ ಶ್ರೀಮತಿ ಹೆಚ್.ಎಲ್. ಯಮುನಾ, ವಿಶೇಷ ಆಹ್ವಾನಿತರು : ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಪ್ರೊ. ಪುರುಷೋತ್ತಮ ಬಿಳಿಮಲೆ, ಸಮಾಜ ಸೇವಕ ರಾಮಕೃಷ್ಣೇಗೌಡ, ಮಾಜಿ ಅಧ್ಯಕ್ಷ ಡಾ. ಅಪ್ಪಾಜಿಗೌಡ, ಸ್ಥಳ: ಪುರಭವನ, ದೊಡ್ಡ ಗಡಿಯಾರ ಪಕ್ಕ, ಮಧ್ಯಾಹ್ನ 3.30ಕ್ಕೆ.

■ **ಸ್ವರಾಲಯ ಸಂಗೀತ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಸ್ವರಾಲಯ ಸಾಂಸ್ಕೃತಿಕ ಹಬ್ಬ, ಉದ್ಘಾಟನೆ: ಕಲಾದೀಪ್ತಿ ವಿದ್ವಾನ್ ಡಾ.ಹೆಚ್.ಎಸ್.ತಾಂಡವಮೂರ್ತಿ, ಮುಖ್ಯ ಅತಿಥಿಗಳು : ಸಂಗೀತ ಶಿಕ್ಷಕ ವಿದ್ವಾನ್ ರಾವ್ ಆರ್.ಶರತ್, ಅಧ್ಯಕ್ಷತೆ: ಸ್ವರಾಲಯ ಸಂಗೀತ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ಡಾ.ಸುಮಾಹರಿನಾಥ್, ಸಂಸ್ಥೆಯ ವಿದ್ಯಾರ್ಥಿಗಳಿಂದ ವೃಂದಗಾನ, ಕು. ಕೆ.ಎಂ.ರಮ್ಯ ಅವರಿಂದ ದಾಸರ ಪದಗಳ ಗಾಯನ, ವಿದ್ವಾನ್ ಸಿ. ಚೇತನ್–ವಯೋಲಿನ್, ವಿದ್ವಾನ್ ವಿ.ಶ್ಯಾಮ್–ಮೃದಂಗ, ವಿದುಷಿ ಮಿತ್ರ ನವೀನ್ ಅವರ ಶಿಷ್ಯ ವೃಂದದವರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ:ಗಾನಭಾರತಿ (ವೀಣೆ ಶೇಷಣ್ಣ ಭವನ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ. ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ– ಪ್ರೊ. ಲಕ್ಷ್ಮೀನಾರಾಯಣ ಅರೋರಾ, 7.15 ಭಾವಗೀತೆ– ಎಂ.ವಿ.ಅನಂತಕುಮಾರ್, ಶಿವಮೊಗ್ಗ ಸುಬ್ಬಣ್ಣ ಮತ್ತು ವೃಂದ, 9.05 ವಸುದೈವ ಕುಟುಂಬಕಂ –ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ವೃತ್ತಿ ಮಾರ್ಗದರ್ಶನ–ತೋಟಗಾರಿಕಾ ಶಿಕ್ಷಣದ ಪ್ರಾಮುಖ್ಯತೆ ಕುರಿತು ತೋಟಗಾರಿಕಾ ಮಹಾವಿದ್ಯಾಲಯದ ಡೀನ್ ಡಾ.ವಿಷ್ಣುವರ್ಧನ್ ಅವರೊಂದಿಗೆ ಸಂದರ್ಶನ, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ–ನರಸಿಂಹಲು ವಡವಟ್ಟಿ–ಕ್ಲಾರಿಯೋ ನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎಂ.ಎ. ಶೋಭ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಜಯಂತಿ ವಿ.ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ– ಸ್ತ್ರೀ ಚೇತನ, ಭಾಗವಹಿಸುವವರು–ನಾಟಕ ಕಲಾವಿದೆ ಲೀಲಮ್ಮ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಎಸ್.ಈಶ್ವರ ಭಟ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್ ವಾಣಿ–ಸಾವಯವ ಸಂಪದ–ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ. ಸಾವಯವ ಕೃಷಿಯ ಮಹತ್ವ ಮತ್ತು ಅವಕಾಶಗಳು ಕುರಿತು ಡಾ.ಎನ್.ದೇವಕುಮಾರ್ ಅವರೊಡನೆ ಸಂದರ್ಶನ, ಪರಿಕಲ್ಪನೆ ಹಾಗೂ ನಿರ್ಮಾಣ– ಎನ್.ಕೇಶವಮೂರ್ತಿ, 9.30 ಹಿಂದೂಸ್ಥಾನಿ ಸಂಗೀತ–ಮುಸ್ತಫಾ ಖಾನ್–ಗಾಯನ, 10.00ಜನಪದ ಸಂಗೀತ–ಭಾಗವಹಿಸುವವರು ಬಸವರಾಜಯ್ಯ ಮತ್ತು ಸಂಗಡಿಗರು, 10.30 ಸವಿನೆನಪು

ಮೈಸೂರು ಮಿತ್ರ ಬುಧವಾರ 12 ಜುಲೈ 2023

ಮೈಸೂರಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಸೂಕ್ತ 48 ಎಕರೆ ಜಾಗವಿದ್ದರೂ ಪರಿಗಣಿಸದ ಜಿಲ್ಲಾಡಳಿತ

● ವಿದೇಶಿಯರಿಗೆ ಮಾರಾಟ ಮಾಡಿ, ನಂತರ ಜಪ್ತಿ ಮಾಡಿರುವ ಸುವಿಶಾಲ ಜಾಗ ಸ್ಟೇಡಿಯಂಗೆ ಹೇಳಿಮಾಡಿಸಿದಂತಿದೆ ● ಆದರೆ ಈ ಜಾಗದಲ್ಲಿ ಅಕ್ರಮ ಸಾಗುವಳಿ ನಡೆಯುತ್ತಿರುವುದಕ್ಕೆ ಸಾತಗಳ್ಳಿ 'ಬಿ' ಜೋನ್ ನಿವಾಸಿಗಳ ಆಕ್ಷೇಪ ● ಕೈಯಲ್ಲಿ ಬೆಣ್ಣೆ ಇರಿಸಿಕೊಂಡು ತುಪ್ಪಕ್ಕೆ ಹುಡುಕುತ್ತಿರುವ ಜಿಲ್ಲಾಡಳಿತದ ನಿಲುವಿನ ಬಗ್ಗೆ ಅನುಮಾನ

■ ಮೋಹನ್ ಕಾಯಕ



ಮೈಸೂರು, ಜು.11– ಮೈಸೂರಿನಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಅತ್ಯಂತ ಸೂಕ್ತ ಹಾಗೂ ವಿಶಾಲ ವಾಗಿರುವ ಸರ್ಕಾರಿ ಜಾಗವೊಂದಿದೆ.

ಈಗಾಗಲೇ ಗುರ್ತಿಸಲಾಗಿರುವ ಹಂಚ್ಯಾ–ಸಾತ ಗಳ್ಳಿ ಬಿ–ವಲಯ ವ್ಯಾಪ್ತಿಯ(ವಿಟಿಯು ಕಾಲೇಜು ಹಿಂಭಾಗ) 20.8 ಎಕರೆ ಜಾಗದಲ್ಲಿ 2.20 ಎಕರೆಯ 'ಕಟ್ಟೆ' ಇದೆ. ಇಲ್ಲಿನ ಮರಗಳ ತೆರವಿಗೆ ಪರಿಸರವಾದಿಗಳು ವಿರೋಧಿಸುತ್ತಿರುವ ಬೆನ್ನಲ್ಲೇ ಸುಮಾರು 48 ಎಕರೆಯ ವಿಶಾಲ ಪ್ರದೇಶವನ್ನು ಸ್ಥಳೀಯ ನಿವಾಸಿಗಳು ಪತ್ತೆ ಮಾಡಿ, ಇದೇ ಸ್ಥಳದಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಒತ್ತಾಯಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಹಂಚ್ಯಾ ಬಿ–ವಲಯದಲ್ಲಿರುವ ವಿಶಾಲ ಪ್ರದೇಶ ಇದಾಗಿದೆ. 122, 123, 125(1), 130, 131, 132, 133, 134, 134, 135, 135(2), 136, 136(1) ಹಾಗೂ 139(1) ಸರ್ವೆ ನಂಬರ್‌ಗಳ ವ್ಯಾಪ್ತಿಯ ಸುಮಾರು 48 ಎಕರೆ ಪ್ರದೇಶ ಖಾಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಸೂಕ್ತ ಸ್ಥಳವಾಗಿದೆ.

1993–94ರ ಅವಧಿಯಲ್ಲಿ ವಿದೇಶಿ ವ್ಯಕ್ತಿಗಳಾದ (ಆರ್‌ಟಿಸಿಯಲ್ಲಿರುವಂತೆ) ಓಜಿಯನ್ ಏಶೆ, ಓಜೇನ್ ಯಶೆ, ಓಜೇಸ್ ಯಷಿ, ಲೊಬ್ಸಂಗ್ ಚಾಪೆಲ್ ಎಂಬುವರಿಗೆ ಮಾರಾಟ ಮಾಡಲಾಗಿದೆ. ಆದರೆ 2005–06ರಲ್ಲಿ ಕೇಂದ್ರ ಗೃಹ ಮಂತ್ರಾಲಯದ ವಿದೇಶಿ ನೋಂದಣಿ(ನಿಯಂತ್ರಣ) ಕಾಯ್ದೆ 1976 ಸೆಕ್ಷನ್ 16ರಡಿ ಸದರಿ ಜಮೀನನ್ನು 39,89,996 ರೂ.ಗಳಿಗೆ ಜಪ್ತಿ ಮಾಡಿದ(ಸಂ.z121022/ 8(5)/94-FCRA.I.(MU) ರಾಜ್ಯ ಸರ್ಕಾರ ಈ ಸಂಬಂಧ ಸ್ಥಳದಲ್ಲಿ ಬೋರ್ಡ್ ಅಳವಡಿಸಿದೆ.

ಮರೆಮಾಚುವ ಯತ್ನ: ಸರ್ಕಾರ ಜಪ್ತಿ ಮಾಡುವ ಮುನ್ನ ಖರೀದಿಸಿದ್ದ ವಿದೇಶಿ ವ್ಯಕ್ತಿಗಳು, ಅಷ್ಟೂ ಪ್ರದೇಶದ ಸುತ್ತಲೂ ಕಾಂಪೌಂಡ್ ಹಾಗೂ ಫೆನ್ಸಿಂಗ್ ಅಳವಡಿಸಿದ್ದು, ಜಪ್ತಿಯಾದ ನಂತರವೂ ಕಾವಲು ಗಾರರನ್ನಿರಿಸಿದ್ದಾರೆ. ಅಲ್ಲದೆ ಮಾವಿನ ತೋಟ ಮಾಡಿ, ಬೇಸಾಯ ನಡೆಸುತ್ತಿದ್ದಾರೆ. ಆದರೆ ಸಂಬಂಧ ಪಟ್ಟ ಅಧಿಕಾರಿಗಳು ಜಪ್ತಿ ಮಾಡಿರುವ ಮಾಹಿತಿಯುಳ್ಳ ಬೋರ್ಡ್ ಅನ್ನು ರಸ್ತೆ ಬದಿ ಕಾಣುವಂತೆ ಅಳವಡಿಸದೆ ಸಾರ್ವಜನಿಕರಿಂದ ಮರೆಮಾಚುವ ಯತ್ನ ನಡೆಸುವುದರ ಜೊತೆಗೆ ಬೇಸಾಯಕ್ಕೂ ಅವಕಾಶ ಮಾಡಿಕೊಟ್ಟಿದ್ದಾರೆ ಎಂಬ ದೂರುಗಳು ಕೇಳಿ ಬಂದಿವೆ.

ರಿಂಗ್ ರಸ್ತೆ ಸಮೀಪ: ಈಗಾಗಲೇ ಗುರ್ತಿಸಲಾಗಿರುವ ಹಂಚ್ಯಾ–ಸಾತಗಳ್ಳಿ ಬಿ–ವಲಯ ವ್ಯಾಪ್ತಿಯ 20.8 ಎಕರೆ ಜಾಗವು ರಿಂಗ್ ರಸ್ತೆ ಬದಿಯಲ್ಲಿದ್ದು, ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಸೂಕ್ತವಾಗಿದೆ. ಆದರೆ 'ಕಟ್ಟೆ' ಇದೆ ಎಂಬ ಕಾರಣಕ್ಕೆ ಗೊಂದಲ ಮೂಡಿವೆ. ಆದ್ದರಿಂದ ವಿದೇಶಿ ವ್ಯಕ್ತಿಗಳಿಂದ ಜಪ್ತಿ ಮಾಡಿರುವ ಸುಮಾರು 48 ಎಕರೆ ಪ್ರದೇಶದಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಸೂಕ್ತವಾಗಿದೆ. ಈ ಜಾಗವು ರಿಂಗ್ ರಸ್ತೆಯಿಂದ ಕೇವಲ ಒಂದೂವರೆ ಕಿಲೋ ಮೀಟರ್ ದೂರದಲ್ಲಿದ್ದು, ಬನ್ನೂರು ಮುಖ್ಯರಸ್ತೆ (ವಿದ್ಯಾ ವಿಕಾಸ ಕಾಲೇಜು ಎದುರು)ಯಿಂದಲೂ ಸಂಪರ್ಕ ಹೊಂದಿದೆ. ಹತ್ತಿರದಲ್ಲೇ ಸ್ಟಾರ್ ಹೋಟೆಲ್ ಹಾಗೂ ರೆಸಾರ್ಟ್‌ಗಳಿವೆ. ಆಸ್ಪತ್ರೆ ಹಾಗೂ ಶಾಲಾ–ಕಾಲೇಜುಗಳಿದ್ದು, ಸ್ಟೇಡಿಯಂ ನಿರ್ಮಾಣವಾದರೆ ಇನ್ನಷ್ಟು ಅಭಿವೃದ್ಧಿಯಾಗುತ್ತದೆ. ವಿಶಾಲ ಸ್ಟೇಡಿಯಂ ನಿರ್ಮಾಣದ ಜೊತೆಗೆ ಪಾರ್ಕಿಂಗ್, ಮ್ಯೂಸಿಯಂ ನಿರ್ಮಾಣಕ್ಕೂ ಅನುಕೂಲಕರವಾದ ವಿಶಾಲ ಪ್ರದೇಶ ಇದಾಗಿದ್ದು, ಸರ್ಕಾರ ಈ ಕೂಡಲೇ ಈ ಸ್ಥಳದ ಬಗ್ಗೆ ಗಮನ ಹರಿಸಬೇಕು ಎಂದು ಸಾತಗಳ್ಳಿ 'ಬಿ' ಜೋನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಒತ್ತಾಯಿಸಿದೆ.

ಸ್ಟೇಡಿಯಂ ದೂರ ಮಾಡುವ ಹುನ್ನಾರ: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾಗಬೇಕು ಎಂಬುದು ಬಹು ಬೇಡಿಕೆಯ ವಿಚಾರವಾಗಿದೆ. ಮೈಸೂರಿನಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಸ್ಟೇಡಿಯಂ ಆಗುವುದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಮೈಸೂರು ಮತ್ತಷ್ಟು ಪ್ರಖ್ಯಾತಿ ಪಡೆಯಲಿದೆ. ಪ್ರವಾಸೋದ್ಯಮಕ್ಕೆ ಹೊಸ ಆಯಾಮ ನೀಡಿದಂತಾಗುತ್ತದೆ. ಆದರೆ ಸ್ಟೇಡಿಯಂ ನಿರ್ಮಾಣ ಸಂಬಂಧ 'ಕಟ್ಟೆ' ವಿಚಾರ ತೆಗೆದು ಸ್ಥಳ ಬದಲಾವಣೆ ಮಾಡಲು ಮುಂದಾಗಿರುವುದರ ಹಿಂದೆ ಮೈಸೂರಿನಿಂದಲೇ ಕ್ರಿಕೆಟ್ ಸ್ಟೇಡಿಯಂ ದೂರ ಮಾಡುವ ಹುನ್ನಾರ ನಡೆದಿದೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

ಇಲವಾಲದ ಬಳಿ ಸ್ಟೇಡಿಯಂ ನಿರ್ಮಾಣ ಮಾಡಲು ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಮೈಸೂರು–ಬೆಂಗಳೂರು ನಡುವೆ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾದರೆ ಸಾಕಷ್ಟು ಅನುಕೂಲವಾಗಲಿದೆ. ಅಲ್ಲದೆ ಒಂದು ಸ್ಟೇಡಿಯಂ ಸುತ್ತಮುತ್ತ ಇರಬೇಕಾದ ಎಲ್ಲಾ ಸೌಕರ್ಯಗಳು ಲಭ್ಯವಿವೆ. ಒಂದೆರಡು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ವಿಟಿಯು ಸೇರಿದಂತೆ ಸುಮಾರು 10 ಕಾಲೇಜುಗಳು, ನಾರಾಯಣ ಹೃದಯಾಲಯ, ಕಾವೇರಿ ಆಸ್ಪತ್ರೆ, ಮಣಿಪಾಲ್ ಸೇರಿದಂತೆ ಹಲವು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು, ಲಲಿತಮಹಲ್, ರ‍್ಯಾಡಿಸನ್ ಬ್ಲೂ ಸೇರಿದಂತೆ ಸ್ಟಾರ್ ಹೋಟೆಲ್‌ಗಳಿದ್ದು, ಪ್ರವಾಸಿಗರಿಗೆ ಅತ್ಯಂತ ಅನುಕೂಲಕರವಾಗಿದೆ. ಇಷ್ಟೆಲ್ಲಾ ಅನುಕೂಲತೆಗಳಿರುವ ಸ್ಥಳವನ್ನು ಬಿಟ್ಟು ಅಭಿವೃದ್ಧಿಯೇ ಕಾಣದ ಸ್ಥಳದಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ.

ಜನಪ್ರತಿನಿಧಿಗಳು, ಅಧಿಕಾರಿಗಳ ಕೈವಾಡ....!

ವಿದೇಶಿಗರಿಗೆ ಮಾರಾಟ ಮಾಡಿದ್ದಲ್ಲದೇ ನಂತರ ಜಪ್ತಿ ಮಾಡಿರುವ ಸುಮಾರು 48 ಎಕರೆ ಜಾಗವನ್ನು ಪುನಃ ಅವರ ಅನುಬೋಗಕ್ಕೆ ಬಿಟ್ಟಿರುವುದರಲ್ಲಿ ಜನಪ್ರತಿನಿಧಿಗಳ ಹಾಗೂ ಪ್ರಮುಖ ಅಧಿಕಾರಿಗಳ ಕೈವಾಡವಿದೆ. ಸ್ಥಳೀಯ ಭೂಮಿಯನ್ನು ವಿದೇಶಿ ವ್ಯಕ್ತಿಗಳಿಗೆ ಮಾರಾಟ ಮಾಡುವಂತಿಲ್ಲ ಎಂದು ತಿಳಿದಿದ್ದರೂ ಮಾರಾಟ ಮಾಡಲಾಗಿದೆ. ಜಪ್ತಿ ಮಾಡಿ 7 ವರ್ಷಗಳೇ ಕಳೆದರೂ ಯಾರಿಗೂ ತಿಳಿಯದಂತೆ ಮರೆ ಮಾಡಲಾಗಿದ್ದು, ಜಪ್ತಿ ಮಾಹಿತಿಯುಳ್ಳ ಬೋರ್ಡ್‌ಗಳನ್ನು ಸಾರ್ವಜನಿಕರಿಗೆ ಕಾಣಿಸದಂತೆ ಖಾಲಿ ಜಾಗದ ಮಧ್ಯದಲ್ಲಿ ಅಳವಡಿಸಲಾಗಿದೆ. ಅಲ್ಲದೆ ವಿದೇಶಿ ವ್ಯಕ್ತಿಗಳನ್ನು ಆ ಜಾಗದಿಂದ ತೆರವುಗೊಳಿಸದೆ ಬೇಸಾಯ ಮಾಡಲು ಅವಕಾಶ ಮಾಡಿಕೊಡಲಾಗಿದೆ ಎಂದು ಸಾತಗಳ್ಳಿ 'ಬಿ' ಜೋನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಜಯಸ್ವಾಮಿ, ಚೆಲುವೇಗೌಡ, ತಿರುಮಲಾಚಾರ್ 'ಮೈಸೂರು ಮಿತ್ರ'ನಲ್ಲಿ ದೂರಿದರು.

ಮನವಿಗೆ ನಿರ್ಧಾರ: ಮೈಸೂರು ನಗರಕ್ಕೆ ಹತ್ತಿರದಲ್ಲಿರುವ ಹಾಗೂ ರಿಂಗ್ ರೋಡ್ ಸಮೀಪದಲ್ಲಿರುವ ಹಂಚ್ಯಾ–ಸಾತಗಳ್ಳಿ ಬಿ–ವಲಯದಲ್ಲಿ ಗುರುತಿಸಿರುವ ಸ್ಥಳದಲ್ಲಿ(ವಿಟಿಯು ಕಾಲೇಜು ಹಿಂಭಾಗ) ಅಥವಾ ವಿದೇಶಿ ವ್ಯಕ್ತಿಗಳಿಂದ ಜಪ್ತಿ ಮಾಡಿರುವ ಜಾಗದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಸ್ಟೇಡಿಯಂ ಆಗಬೇಕು ಎಂದು ಸರ್ಕಾರಕ್ಕೆ ಮನವಿ ನೀಡಲು ನಿರ್ಧರಿಸಲಾಗಿದೆ ಎಂದರು.

ಸದ್ಯಕ್ಕೆ ಸ್ಥಗಿತವಾಗಿದೆ...



"ಹಂಚ್ಯಾ–ಸಾತಗಳ್ಳಿ ಬಿ–ವಲಯದಲ್ಲಿ(ವಿಟಿಯು ಹಿಂಭಾಗ) ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಗುರ್ತಿಸಲಾಗಿರುವ ಸ್ಥಳವನ್ನು ಈಗಾಗಲೇ ಕೆಎಸ್‌ಸಿಎ(ಕರ್ನಾಟಕ ರಾಜ್ಯ ಕ್ರಿಕೆಟ್ ಸಂಘ) ಪದಾಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಲಾಗಿದೆ. ಅವರೂ ಕೂಡ ಸ್ಥಳ ನೋಡಿ ಸ್ಟೇಡಿಯಂ ನಿರ್ಮಾಣಕ್ಕೆ ಸಮ್ಮತಿ ಸೂಚಿಸಿದ್ದಾರೆ. ಆದರೆ 20.8 ಎಕರೆ ಪ್ರದೇಶದ 2.20 ಎಕರೆ ಜಾಗದಲ್ಲಿ 'ಕಟ್ಟೆ' ಇದ್ದು, ಸ್ಟೇಡಿಯಂ ನಿರ್ಮಾಣಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಕಟ್ಟೆಯನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ಸಲಹೆ ನೀಡಿದ್ದಾರೆ. ಮುಡಾದಿಂದಲೂ ಸಿಎ ಸೈಟ್ ಹಂಚಿಕೆ ಮಾದರಿಯಲ್ಲಿ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಕುರಿತು ಚಿಂತನೆ ನಡೆಸಲಾಗಿತ್ತು. ಆದರೆ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಈ ಸಂಬಂಧ ಯಾವ ನಿರ್ಧಾರವನ್ನು ಕೈಗೊಂಡಿಲ್ಲ. ಸದ್ಯಕ್ಕೆ ಅಂತರರಾಷ್ಟ್ರೀಯ ಸ್ಟೇಡಿಯಂ ವಿಚಾರ ಸ್ಥಗಿತವಾಗಿದೆ.

–ಯಶಸ್ವಿ ಎಸ್.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ

ಜೈನ ಮುನಿ ಹತ್ಯೆ ಪ್ರಕರಣ

ಕರೆಂಟ್ ಶಾಕ್ ಕೊಟ್ಟರೂ ಸ್ವಾಮೀಜಿ ಪ್ರಾಣಪಕ್ಷಿ ಹಾರಿ ಹೋಗಿರಲಿಲ್ಲ



ಎಫ್‌ಐಆರ್‌ನಲ್ಲಿ ಸ್ಫೋಟಕ ರಹಸ್ಯ

ಚಿಕ್ಕೋಡಿ: ಜೈನ ಮುನಿ ಕಾಮ ಕುಮಾರ ನಂದಿ ಮಹಾರಾಜರ ಹತ್ಯೆ ಪ್ರಕರಣಕ್ಕೆ ದಿನಕ್ಕೊಂದು ಟ್ವಿಸ್ಟ್ ಸಿಗುತ್ತಿದ್ದು, ಇದೀಗ ಎಫ್‌ಐಆರ್ ಮೂಲಕ ಜೈನಮುನಿಯ ಕೊಲೆ ರಹಸ್ಯ ಬಯಲಾಗಿದೆ. ಕರೆಂಟ್ ಶಾಕ್ ನೀಡಿ ಸ್ವಾಮೀಜಿ ಹತ್ಯೆಗೈದ ಹಂತಕರು ಬಳಿಕ ಅವರ ದೇಹವನ್ನು ತುಂಡು ತುಂಡು ಮಾಡಿ ಕೊಳವೆ ಬಾವಿಗೆ ಎಸೆದಿದ್ದರು. ಕೊಲೆ ಮಾಡಿದ್ದು ನಾರಾಯಣ ಮಾಳಿ ಮಾತ್ರ ಎಂದು ಬಿಂಬಿಸುವ ಕಾರ್ಯ ನಡೆದಿತ್ತು. ಸದ್ಯ ಹಸನ್ ಡಾಲಾಯತ್ ಹಾಗೂ ನಾರಾಯಣ ಮಾಳಿ ಸೇರಿ ಹತ್ಯೆ ಮಾಡಿದ್ದಾರೆ ಎಂಬ ಸ್ಫೋಟಕ ಸುದ್ದಿ ಎಫ್‌ಐಆರ್ ಮೂಲಕ ಬಹಿರಂಗವಾಗಿದೆ. ಕರೆಂಟ್ ಶಾಕ್ ಕೊಟ್ಟರೂ ಸ್ವಾಮೀಜಿ ಪ್ರಾಣಪಕ್ಷಿ ಹಾರಿ ಹೋಗಿರಲಿಲ್ಲ. ಕರೆಂಟ್ ಶಾಕ್ ಕೊಟ್ಟು ಚಿತ್ರಹಿಂಸೆ ನೀಡಿದ ನಂತರ ಸ್ವಾಮೀಜಿಯ ಟವೆಲ್‌ನಿಂದಲೇ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದಾರೆ.

ಹಣ ವಾಪಸ್ ನೀಡುವಂತೆ ಪದೇ ಪದೆ ಸ್ವಾಮೀಜಿ ಪೀಡಿಸುತ್ತಿದ್ದು, ಇದರಿಂದ ಕೋಪಗೊಂಡ ನಾರಾಯಣ ಮಾಳಿ ತನ್ನ ಸ್ನೇಹಿತ ಹಸನ್ ಡಾಲಾಯತ್ ಜೊತೆ ಸೇರಿ ಕೊಲೆ ಮಾಡಿದ್ದಾನೆ. ಕೋಣೆಯಲ್ಲಿ ಜೈನ ಮುನಿಗೆ ಮೊದಲು ಕರೆಂಟ್ ಶಾಕ್ ನೀಡಿ ಚಿತ್ರ ಹಿಂಸೆ ನೀಡಿದ್ದು, ಬಳಿಕ ಕೊಲೆ ಮಾಡಿ ಗೋಣಿಚೀಲದಲ್ಲಿ ಶವ ಸಾಗಿಸಿದ್ದಾರೆ. ಹೀರೆಕುಡಿಯಿಂದ ಖಟಕ ಬಾವಿಯವರೆಗೂ ಬೈಕ್ ಮೇಲೆ ಶವ ಸಾಗಾಟ ಮಾಡಿ ಖಟಕಬಾವಿಯ ಕೊಳವೆ ಬಾವಿ ಬಳಿ ದೇಹ ಪೀಸ್ ಪೀಸ್ ಮಾಡಿದ್ದಾರೆ. ನಂತರ ಕೊಳವೆ ಬಾವಿಯಲ್ಲಿ ಶವ ಎಸೆದು ಹೋಗಿರುವ ವಿಚಾರ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ

ಸಿಬಿಐಗೆ ವಹಿಸುವ ಅವಶ್ಯಕತೆ ಇಲ್ಲ



ಜೈನ ಮುನಿ ಕಾಮಕುಮಾರನಂದಿ ಮಹಾರಾಜರ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸುವ ಅವಶ್ಯಕತೆ ಇಲ್ಲ. ಪ್ರಕರಣದ ತನಿಖೆ ನಡೆಸಲು ನಮ್ಮ ಪೊಲೀಸರು ಸಮರ್ಥವಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಗೆ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಪ್ರತಿಪಕ್ಷ ಬಿಜೆಪಿ ನಾಯಕರು ಜೈನಮುನಿ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿದ್ದರು. ಹತ್ಯೆ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲಿದೆ. ಜೈನ ಮುನಿಯ ಹತ್ಯೆ ಅಮಾನುಷ ಕಗ್ಗೊಲೆಯಾಗಿದೆ. ಇಬ್ಬರು ಆರೋಪಿಗಳ ಹೆಸರು ಎಫ್‌ಐಆರ್‌ನಲ್ಲಿ ಇದೆ. ಇಬ್ಬರು ಆರೋಪಿಗಳ ಬಂಧನವೂ ಆಗಿದೆ. ಮೃತದೇಹವನ್ನು ಪತ್ತೆ ಹಚ್ಚಲಾಗಿದೆ ಪೊಲೀಸರ ತಪ್ಪು ಎಲ್ಲಿದೆ ಎಂದು ಪ್ರಶ್ನಿಸಿದರು. ಜೈನ ಮುನಿಗಳ ಹತ್ಯೆ ಪ್ರಕರಣದಲ್ಲಿ ಪೊಲೀಸರು ಸಮರ್ಥವಾಗಿ ಕೆಲಸ ಮಾಡಿದ್ದಾರೆ. ಇದರ ಹಿಂದೆ ಎಷ್ಟೇ ಪ್ರಭಾವಿಗಳು ಇದ್ದರೂ ಶಿಕ್ಷೆ ಕೊಡಿಸುವ ಕೆಲಸ ಮಾಡುತ್ತೇವೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಆಗಲಿದೆ ಎಂದು ಸಿಎಂ ಭರವಸೆ ನೀಡಿದರು.

ಜು.17ರಿಂದ ಆರ್ಟ್ ಆಫ್ ಲಿವಿಂಗ್ ಕಾರ್ಯಾಗಾರ



ಮೈಸೂರು, ಜು.11– ಆರ್ಟ್ ಆಫ್ ಲಿವಿಂಗ್ ವತಿಯಿಂದ ಜು.17ರಿಂದ 22ರ ವರೆಗೆ ಆರೋಗ್ಯಕರ ಜೀವನ, ಧ್ಯಾನ, ಉಸಿರಾಟ ಕುರಿತು 'ಆರ್ಟ್ ಆಫ್ ಲಿವಿಂಗ್ ಕಾರ್ಯಾಗಾರ' ಆಯೋಜಿಸಲಾಗಿದೆ. ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಹಿನಕಲ್ ಸಮೀಪದ ದಿ ರೂಸ್ಟ್‌ನಲ್ಲಿ ಶಿಬಿರ ನಡೆಯಲಿದ್ದು, ಆರೋಗ್ಯದಿಂದ ಸಂತೋಷದೆಡೆಗೆ, ಆತ್ಮವಿಶ್ವಾಸ ಮೂಡಿಸುವುದು, ವೈಜ್ಞಾನಿಕವಾಗಿ ಸಾಬೀತಾಗಿರುವ ಉಸಿರಾಟದ ತಂತ್ರಗಳನ್ನು ಹೇಳಿಕೊಡಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ.ನಂ.9342111970, 9845685892ಗೆ ಸಂಪರ್ಕಿಸುವಂತೆ ಕೋರಲಾಗಿದೆ.

ನಾಳೆ ಕೌನ್ಸಿಲ್ ಸಭೆ

ಮೈಸೂರು,ಜು.11–ಮೈಸೂರು ಮಹಾನಗರಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಜು.13ರಂದು ಮಧ್ಯಾಹ್ನ 3 ಗಂಟೆಗೆ ಜುಲೈ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆ ಏರ್ಪಡಿಸಲಾಗಿದೆ.

ಅಮೆರಿಕದ ಮಹಿಳಾ ರಾಯಭಾರಿಯಾಗಿ ಭಾರತ ಮೂಲದ ಗೀತಾ ರಾವ್ ನೇಮಕ



ಗೀತಾ ರಾವ್ ಗುಪ್ತಾ

ವಾಷಿಂಗ್ಟನ್: ಜಾಗತಿಕವಾಗಿ ಮಹಿಳಾ ಸಂಬಂಧಿತ ವಿಷಯಗಳ ರಾಯಭಾರಿಯಾಗಿ ಭಾರತ ಮೂಲದ ಅಮೆರಿಕದ ನಿವಾಸಿ ಗೀತಾ ರಾವ್ ಗುಪ್ತಾ ಅವರನ್ನು ಅಮೆರಿಕ ನೇಮಿಸಿದೆ. ಗೀತಾ ಅವರಿಗೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಪ್ರಮಾಣವಚನ ಬೋಧಿಸಿದರು.

ಇವರ ನೇಮಕ ಪ್ರಸ್ತಾವವನ್ನು ಅಮೆರಿಕದ ಸೆನೆಟ್ ಇದೇ ವರ್ಷದ ಮೇ ತಿಂಗಳಲ್ಲಿ 51–47 ಮತಗಳಿಂದ ಅಂಗೀಕರಿಸಿತ್ತು. ಮಹಿಳೆಯರು ಇಂದು ವಿಶ್ವದಾದ್ಯಂತ ಅಸಮಾನತೆ ಎದುರಿಸುತ್ತಿದ್ದಾರೆ. ಅವರ ಘನತೆಗೆ ಧಕ್ಕೆಯಾಗುವ ಬೆಳವಣಿಗೆಗಳು, ಆಕೆ ಪೂರ್ಣ ಪ್ರಮಾಣದಲ್ಲಿ ಆರ್ಥಿಕತೆಯಲ್ಲಿ ಭಾಗಿ ಆಗುವುದನ್ನು ತಡೆಯುತ್ತಿವೆ ಎಂದು ಗೀತಾ ರಾವ್ ಅವರು ಅಭಿಪ್ರಾಯಪಟ್ಟರು.

ಮಹಿಳೆಗೆ ಇಂದು ನಿತ್ಯವೂ ಸುರಕ್ಷತೆಯ ಭಯ ಹಾಗೂ ಹಿಂಸೆಯ ಭೀತಿ ಕಾಡುತ್ತಿದೆ. ಆಕೆ ಮುಕ್ತವಾಗಿ ಸಂಚರಿಸಲೂ ಆಗುತ್ತಿಲ್ಲ. ತುರ್ತು ಹಾಗೂ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಆಕೆಯೇ ಹೆಚ್ಚು ಸಮಸ್ಯೆಗೆ ಗುರಿಯಾಗುತ್ತಾಳೆ ಎಂದು ಪ್ರಮಾಣ ವಚನ ಸ್ವೀಕಾರದ ನಂತರ ಹೇಳಿದರು.

ತಾವು ಮೊದಲ ವಲಸಿಗರ ಪೀಳಿಗೆಗೆ ಸೇರಿದವರು ಎಂದು ತಮ್ಮನ್ನು ಬಣ್ಣಿಸಿಕೊಂಡ ಅವರು, ನಾನು ವೃತ್ತಿಪರ ಕುಟುಂಬ ಹಿನ್ನೆಲೆಯಿಂದ ಬಂದಿದ್ದು, ಕುಟುಂಬದ ಸದಸ್ಯರು ಸಮುದಾಯದ ಸೇವೆಗೆ ಬದ್ಧರಾಗಿದ್ದಾರೆ. ಪುರುಷ ಸದಸ್ಯರು ಬೆಂಬಲ ನೀಡುತ್ತಿದ್ದಾರೆ ಎಂದರು.

ನಾನು ಭಾರತದಲ್ಲಿ ಪಿಎಚ್.ಡಿ ಮಾಡಿದ್ದು, ಮಹಿಳೆಯರು ತಮ್ಮ ವೃತ್ತಿ ಬದುಕಿನಲ್ಲಿ ಎದುರಿಸುವ ಸಮಸ್ಯೆಗಳ ಅರಿವಿದೆ. ಆ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಒತ್ತು ನೀಡುತ್ತೇನೆ' ಎಂದು ಸೆನೆಟ್ ಸದಸ್ಯರಿಗೆ ಭರವಸೆ ನೀಡಿದರು.

ನಾಳೆಯಿಂದ ತೆರಿಗೆದಾರರಿಗೆ ಮಾಹಿತಿ ನೀಡುವ ಟ್ಯಾಕ್ಸ್ ಕ್ಲಿನಿಕ್

ಮೈಸೂರು,ಜು.11–ಆದಾಯ ತೆರಿಗೆ ಪಾವತಿ ಹಾಗೂ ಇತರೆ ತೆರಿಗೆ ಸಂಬಂಧಿ ಪ್ರಶ್ನೆಗಳು, ಗೊಂದಲಗಳನ್ನು ನಿವಾರಿಸಲು ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆ (ICAI) ಇದೇ 13 ಮತ್ತು 14ರಂದು ದೇಶಾದ್ಯಂತ "ಟ್ಯಾಕ್ಸ್ ಕ್ಲಿನಿಕ್" ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಮೈಸೂರಿನ ಬೋಗಾದಿಯಲ್ಲಿರುವ ICAI ಭವನದಲ್ಲಿ ಇದೇ 13, 14 ಟ್ಯಾಕ್ಸ್ ಕ್ಲಿನಿಕ್ ಆಯೋಜಿಸಲಾಗಿದೆ. ತೆರಿಗೆದಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಆರ್ಥಿಕ ತಜ್ಞರು ಹಾಗೂ ತೆರಿಗೆ ತಜ್ಞರಿಂದ ತಮ್ಮ ಗೊಂದಲಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಆದಾಯ ತೆರಿಗೆ ಇಲಾಖೆ ಪ್ರಧಾನ ಆಯುಕ್ತ ಕೆ.ದೇವರತ್ನಕುಮಾರ್ ಟ್ಯಾಕ್ಸ್ ಕ್ಲಿನಿಕ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಒಟ್ಟು 165 ಶಾಖೆಗಳು ಹಾಗೂ 5 ಪ್ರಾದೇಶಿಕ ಮಂಡಳಿ ಕಚೇರಿಗಳಲ್ಲಿ ಈ ಟ್ಯಾಕ್ಸ್ ಕ್ಲಿನಿಕ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11ರಿಂದ ಸಂಜೆ 6ರವರೆಗೆ ತೆರಿಗೆದಾರರು ಭೇಟಿ ನೀಡಿ ವಿಷಯ ತಜ್ಞರಿಂದ ಮಾಹಿತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಿದ್ದರೆ ICAI ಮೈಸೂರು ಕೇಂದ್ರವನ್ನು ಭೇಟಿ ಮಾಡಿ ಪಡೆಯ ಬಹುದಾಗಿದೆ. ದೂರವಾಣಿ ಸಂಖ್ಯೆ: 0821–2598000 ಕೂಡ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವೈದ್ಯ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ರಂಗ ತರಬೇತಿ ಅವಶ್ಯ

ರಂಗಕರ್ಮಿ, ಚಲನಚಿತ್ರ ನಟ ಮಂಡ್ಯ ರಮೇಶ್ ಅಭಿಮತ



ಮೈಸೂರು, ಜು.11(ಎಂಕೆ)– ರಂಗಭೂಮಿ ಜಗತ್ತಿನ ಸರ್ವಶ್ರೇಷ್ಠ ಮಾಧ್ಯಮವಾಗಿದ್ದು, ವೈದ್ಯಕೀಯ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ಜಾನಪದ ಹಾಗೂ ರಂಗಶಿಕ್ಷಣ ಕಡ್ಡಾಯವಾಗಬೇಕು ಎಂದು ರಂಗಕರ್ಮಿ ಮಂಡ್ಯ ರಮೇಶ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಸಹಕಾರದೊಂದಿಗೆ ಆಯೋಜಿಸಿದ್ದ 15 ದಿನಗಳ ರಂಗ ಮತ್ತು ನೃತ್ಯ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ರಂಗಶಿಕ್ಷಣದಲ್ಲಿ ಹಲವು ವಿಷಯಗಳು ಮಿಳಿತಗೊಂಡಿದೆ. ನಾಟಕ ಮಾಡಲು ಮುಖಕ್ಕೆ ಏನೇನೋ ಹಚ್ಚಿಕೊಳ್ಳುವಂತಿಲ್ಲ. ರಾಸಾಯನಶಾಸ್ತ್ರ ಬಗ್ಗೆ ತಿಳಿದುಕೊಳ್ಳಬೇಕು. ರಂಗದ ಮೇಲೆ ನೃತ್ಯ ಮಾಡಲು, ಅತ್ತಿತ್ತಾ ಓಡಾಡಲು, ಜಂಪ್ ಮಾಡಲು ಭೂಗೋಳ ಶಾಸ್ತ್ರದ ಬಗ್ಗೆ ಗೊತ್ತಿರಬೇಕು. ರಾಮಾಯಣ ಕುರಿತು ನಾಟಕ ಮಾಡುತ್ತೇವೆ ಎಂದರೆ ಪುರಾಣ ತಿಳಿದುಕೊಂಡಿರಬೇಕು. ಪ್ರತಿಯೊಬ್ಬ ಕವಿಯ ಬಗ್ಗೆಯೂ ಓದಿಕೊಳ್ಳುವುದರ ಜೊತೆಗೆ ಸಂಗೀತದ ಜ್ಞಾನವೂ ಇರಬೇಕು. ಸಸ್ಯಶಾಸ್ತ್ರ, ಸಾಹಿತ್ಯ ಸೇರಿದಂತೆ ಅನೇಕ ವಿಷಯಗಳು ತಿಳಿಯುತ್ತದೆ. ಆದ್ದರಿಂದಲೇ ರಂಗಭೂಮಿ ಜಗತ್ತಿನ ಸರ್ವಶ್ರೇಷ್ಠ ಮಾಧ್ಯಮವಾಗಿ ಉಳಿದಿದೆ. ಈ ಕ್ಷೇತ್ರದಿಂದ ಹೋದವರೆಲ್ಲರೂ ದೊಡ್ಡ ಸಾಧನೆ ಮಾಡಿದ್ದಾರೆ ಎಂದರು.

ಜಾನಪದ ಮೂಲಕ ರಂಗಭೂಮಿಯನ್ನು ಸುಲಭವಾಗಿ ಪ್ರವೇಶಿಸಬಹುದು. ಜಾನಪದದಲ್ಲಿ ಮಾತನಾಡುವ, ಅಭಿನಯಿಸುವ, ಹಾಡುವ ಕಲೆಗಾರಿಕೆ ಲಭಿಸುತ್ತದೆ. ಹಾಗೆಯೇ ಜಾನಪದ, ರಂಗಭೂಮಿಯಲ್ಲಿ ಬೆಳೆದ ಮಕ್ಕಳು ಪ್ರಬುದ್ಧತೆ ಸಾಧಿಸುವುದರಲ್ಲಿ ಯಾವುದೇ ಸಂದೇಹವಿಲ್ಲ. ಅವರಿಗೆ ಸಾಹಿತ್ಯದ ನೆಲೆಗಟ್ಟು ಸಿಗುತ್ತದೆ. ಡಾ.ರಾಜಕುಮಾರ್ ಅವರು 4ನೇ ತರಗತಿ ಓದಿದ್ದರೂ ಅವರ ಹಿಂದೆ ವೃತ್ತಿ ರಂಗಭೂಮಿ ಎಂಬ ದೊಡ್ಡ ವಿಶ್ವವಿದ್ಯಾನಿಲಯವಿತ್ತು. ರಾಮಾಯಣ, ಮಹಾಭಾರತ, ವೇದ, ಉಪನಿಷತ್ ಮುಂತಾದ ಕುರಿತು ಅಪಾರ ಜ್ಞಾನ ಅವರಲ್ಲಿತ್ತು. ಪ್ರತಿನಿತ್ಯ ಪುಸ್ತಕಗಳನ್ನು ಓದುತ್ತಿದ್ದರು. ರಾಜಕುಮಾರ್ ಅವರಿಗೆ ಅವರೇ ಸಾಟಿ. ಅಂತಹ ಮತ್ತೊಬ್ಬ ನಟ ಹುಟ್ಟಲು ಸಾಧ್ಯವೇ ಇಲ್ಲ ಎಂದು ಹೇಳಿದರು.

ಜಗತ್ತಿನ ಅತ್ಯಂತ ದೊಡ್ಡ ಪ್ರತಿಭಟನಾ ಅಸ್ತ್ರ ರಂಗಭೂಮಿ. ಇದನ್ನು ಮುಂದುವರೆಸಿಕೊಂಡು ಹೋಗಬೇಕು. ಶಾಸಕರೆಲ್ಲರೂ ಜಾನಪದ ಕಲೆಯ ಹಿನ್ನೆಲೆ ಹೊಂದಿದ್ದರೆ ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಪ್ರಮುಖ ಅವಕಾಶ ಸಿಗುತ್ತಿತ್ತು. ಓದುವುದು ದೊಡ್ಡ ಶಕ್ತಿಯಾಗಿದ್ದು, ನಾವು ಕನ್ನಡ, ಹಿಂದಿ, ಸಂಸ್ಕೃತ, ಮಲೆಯಾಳಂ ಸೇರಿದಂತೆ ಎಲ್ಲಾ ಭಾಷೆಗಳನ್ನು ಕಲಿತು, ಕನ್ನಡದಲ್ಲಿ ಬದುಕಬೇಕು. ಯಾರು ಏನೇ ಹೇಳಿದರೂ ಕೇಳಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ರಂತ ತರಬೇತಿ ಪಡೆಯುವ ಅವಕಾಶ ದೊರಕಿರುವುದು ನಿಮ್ಮ ಸೌಭಾಗ್ಯ. ಅದನ್ನು ಮುಂದುವರೆಸಿಕೊಂಡು ಹೋಗಿ ಎಂದು ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಮಾರೋಪ ಭಾಷಣ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಎಲ್ಲಾ ಕಲಾ ಪ್ರಕಾರಗಳಿಗೂ ಮೂಲವಾಗಿರುವ ಜಾನಪದ ಕಲಿಯುವುದು ವಿಶೇಷ ಪದವಿ ಪಡೆದಂತೆ. ಡಾ.ರಾಜ್‌ಕುಮಾರ್ ಅವರು ಶಾಲೆಯಲ್ಲಿ ಓದಿದ್ದು, 4ನೇ ತರಗತಿಯಾದರೂ ಒಂದು ವಿಶ್ವವಿದ್ಯಾನಿಲಯದಂತೆ ಬೆಳೆದರು. ಆದ್ದರಿಂದ ಇಂತಹ ಜಾನಪದ ತರಬೇತಿ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು. ಬಳಿಕ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಇ.ಗೋವಿಂದೇಗೌಡ, ದೇಶಿರಂಗ ಸಾಂಸ್ಕೃತಿಕ ಸಂಸ್ಥೆ ಕಾರ್ಯದರ್ಶಿ ಕೃಷ್ಣ ಜನಮನ ಉಪಸ್ಥಿತರಿದ್ದರು.

ರಂಗ ಶಿಕ್ಷಕರ ಸಂಖ್ಯೆ ಹೆಚ್ಚಾಗಲಿ

"ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸಂಗೀತ ಶಿಕ್ಷಕರನ್ನು ತಗೆದುಕೊಳ್ಳುವುದಾಗಿ ಹೇಳುತ್ತಿದ್ದಾರೆ. ಆದರೆ ಎಷ್ಟು ಮಂದಿ ಶಿಕ್ಷಕರು ಸಿಗುತ್ತಾರೆ. ಶುದ್ಧ ಸಂಗೀತ, ನಾಟಕ, ಜಾನಪದ ಕಲಿಸಲು ಶಿಕ್ಷಕರು ಸಿಗುತ್ತಿಲ್ಲ. ಸೂಕ್ಷ್ಮವಾದ, ಸಾತ್ವಿಕರು, ಸರಳ, ಸಜ್ಜನಿಕೆಯ ಗುರುಗಳೂ ಮುಖ್ಯ. ಅಂತಹವರ ಸಂಖ್ಯೆ ಹೆಚ್ಚಾಗಬೇಕು. –ಮಂಡ್ಯ ರಮೇಶ್, ರಂಗಕರ್ಮಿ

ಅರ್ಜಿ ಆಹ್ವಾನ

ಮೈಸೂರು,ಜು.11–2023ನೇ ಸಾಲಿನ ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದ್ದು, ಅರ್ಹ ಶಿಕ್ಷಕರು, ಉಪನ್ಯಾಸಕರು, ಮುಖ್ಯಶಿಕ್ಷಕರು, ಪ್ರಾಂಶುಪಾಲರು https://nationalawardstote chers.education.gov.in ಮೂಲಕ ಅರ್ಜಿ ಸಲ್ಲಿಸಬಹುದು. ಜು.15ರೊಳಗೆ ಅರ್ಜಿ ನೋಂದಾಯಿಸಿಕೊಂಡು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಮೈಸೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜು. 11–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.13ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮೋಡಗಳು ಏಕೆ ಕಪ್ಪಾಗಿರುತ್ತವೆ?
ಗುಂಡ : ಸ್ವಲ್ಪ ಹೊತ್ತು ನಾವೇ ಬಿಸಿಲಲ್ಲಿ ತಿರುಗಾಡಿದ್ರೆ ಕಪ್ಪಾಗುತ್ತೀವಿ. ಇನ್ನು ದಿನಾ ಬಿಸಿಲಲ್ಲೇ ತೇಲಾಡೋ ಮೋಡಗಳು ಕಪ್ಪಾಗಲ್ವಾ ಮೇಷ್ಟ್ರೆ!?

ಮೈಸೂರು ಮಿತ್ರ
ಬುಧವಾರ, 12 ಜುಲೈ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮೌನ ಆವರಿಸುವವರೆಗೆ ಬುದ್ಧಿವಂತನಾದವನು ಮಾತನಾಡಲು ಮುಂದಾಗುವುದಿಲ್ಲ. – ಬಸವರಾಜ ಕಟ್ಟೀಮನಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧಾನ್ಯ ಹೆಚ್ಚಿದವನಿಗೆ ಮಾನ್ಯ ಹೆಚ್ಚು

ನಿಮ್ಮ ಪತ್ರಗಳು

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿನ ಅತಿರೇಕ ವರ್ತನೆಯ ಅಪಘಾತಗಳು

ಮಾನ್ಯರೆ,


ಉತ್ತಮ ಉದ್ದೇಶವಿರಿಸಿಕೊಂಡು ನಿರ್ಮಿಸಿದ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯಲ್ಲಿನ ಕಳೆದ ಒಂದು ವರುಷಗಳ ಅವಧಿಯಲ್ಲಿನ ಅಪಘಾತಗಳ ಸಾವು–ನೋವುಗಳ ಅಂಕಿ ಅಂಶಗಳು ನಿಜಕ್ಕೂ ಕಳವಳಕಾರಿ ಮತ್ತು ಆಘಾತಕಾರಿ ಕೂಡ. ರಸ್ತೆಯನ್ನು ಹೇಗೆ ಬಳಸಿಕೊಂಡರೆ ಸಾರ್ಥಕ ಎನ್ನುವ ವಿವೇಚನೆಯಿಲ್ಲದ ಜನ, ಹಲವಾರು ರೀತಿಯಲ್ಲಿ ರಾಜಕೀಯ ಬಣ್ಣ ಬಳಿದು ಕೊನೆಗೆ ರಸ್ತೆ ನಿರ್ಮಿಸಿದ ಮೂಲ ಉದ್ದೇಶವನ್ನೇ ಹಾಳುಗೆಡವಲು ಹೊರಟಂತಿದೆ.

ಕಳೆದ ವಾರ ಇದರ ನೈಜ ಸ್ಥಿತಿ ತಿಳಿಯುವ ಸಲುವಾಗಿ ಖುದ್ದು ಈ ರಸ್ತೆಯಲ್ಲಿ ಎರಡು ಬಾರಿ ಸಂಚರಿಸಿದಾಗ ತಿಳಿದು ಬಂದದ್ದು ಹೀಗೆ. ಹಲವಾರು ಉತ್ಕೃಷ್ಟ ದರ್ಜೆಯ ಕಾರುಗಳು ಸುಮಾರು ನೂರಾ ನಲವತ್ತು ಕಿಮೀನಲ್ಲಿ ಸಂಚರಿಸುವುದು. ಕೆಲವು ಕಾರುಗಳು ನೂರಿಪ್ಪತ್ತಕ್ಕೂ ಮೀರಿದ ಅತಿವೇಗದಲ್ಲಿ ಸಾಗುವಾಗ ಅಕ್ಕ ಪಕ್ಕದ ಸರ್ವಿಸ್ ರಸ್ತೆಯ ಕಡೆಯ ವಾಹನಗಳು ಮುಖ್ಯರಸ್ತೆಗೆ ಸೇರುವಾಗ ಗಮನಿಸದೇ ಡಿಕ್ಕಿಯಾಗುವುದು. ಮತ್ತೆ ಕೆಲವು ಕಡೆ ಅತಿವೇಗದ ಚಾಲನೆಯಿಂದಾಗಿ ಓವರ್‌ಟೇಕ್ ಮಾಡುವಾಗ ಡಿವೈಡರ್‌ಗೆ ತಾಕುವುದು, ಮತ್ತೆ ಕೆಲವು ಕಡೆಗಳಲ್ಲಿ ಎಲ್ಲಿ ಯಾವಾಗ ಹೇಗೆ ಓವರ್‌ಟೇಕ್ ಮಾಡಬೇಕು ಎಂದು ಗೊತ್ತಿಲ್ಲದೇ ನುಗ್ಗುವುದು, ಕೆಲವು ಕಡೆಗಳಲ್ಲಿ ಸ್ಥಳೀಯರು ಬೇಕಾಬಿಟ್ಟಿ ರಸ್ತೆಯ ಅಂಚಿನಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವುದು ಮತ್ತು ರಾತ್ರಿಯ ವೇಳೆ ದೀಪವಿಲ್ಲದೆ ಸಂಚರಿಸುವುದು, ಎಲ್ಲಕ್ಕೂ ಮಿಗಿಲಾಗಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡುವುದನ್ನು ಗಮನಿಸಿದೆ.

ಇದಕ್ಕೆ ಪರಿಹಾರವೆಂದರೆ, ಸದರಿ ಹೈವೇಯಲ್ಲಿ ಮುಖ್ಯ ಕಡೆಗಳಲ್ಲಿ ಬೆಂಗಳೂರಿನಲ್ಲಿ ಅಳವಡಿಸಿರುವಂತೆ ವೇಗದ ಮಿತಿ ತೋರಿಸುವ ವಿದ್ಯುನ್ಮಾನ ಮಾಪನಗಳ ಅಳವಡಿಕೆ. ಇದು ಕೆಂಪು ತೋರಿಸಿದರೆ, ಇದರಿಂದ ಚಾಲಕರಿಗೆ ತಮ್ಮ ವೇಗದ ಮಿತಿ ತಿಳಿಯುತ್ತದೆ ಹಾಗೆಯೇ ಸರ್ವಿಸ್ ರಸ್ತೆಗಳಿಗೆ ಸೇರುವಾಗ ಮತ್ತು ಬರುವಾಗ ಆ ರಸ್ತೆಗಳಿಗೆ ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ, ವೇಗದ ಮಿತಿ ಮೀರುವ ವಾಹನಗಳಿಗೆ ಮೈಸೂರು–ಬೆಂಗಳೂರು ಸೇರುವ ಮುಂಚೆಯೇ ದಂಡ ವಿಧಿಸುವುದು, ಈ ರಸ್ತೆಯಲ್ಲಿ ದ್ವಿಚಕ್ರ, ತ್ರಿಚಕ್ರ ವಾಹನ ಚಾಲನೆ ನಿಷೇಧಿಸುವುದು, ಮತ್ತು ಜನ ರಸ್ತೆ ಇರುವುದು ಸುಗಮವಾಗಿ ಓಡಾಡಲು ಮಾತ್ರ, ರೇಸ್ ಚಾಲನೆಗಲ್ಲ ಎಂಬುದರ ಬಗ್ಗೆ ತಿಳಿಹೇಳುವುದು. ಜನಗಳೂ ಇದನ್ನು ಅರಿತು ತಮ್ಮ ಅಮೂಲ್ಯ ಜೀವ ಕಾಪಾಡಿಕೊಳ್ಳುವುದು ಒಳಿತು.

–ವಿಜಯ್ ಹೆಮ್ಮಿಗೆ, ಮೈಸೂರು

ಇಂತಹ ಪ್ರೀತಿ ಇಂದೆಲ್ಲಿ ಸಿಗುವುದು?


The Palace
Mysore.
8th August 1927.

On this day, when I complete the twenty-fifth year of my reign, I send my loving greetings to each one of my dear people, with a heart full of solicitude for their happiness. With unceasing effort I shall, while life lasts, endeavour to promote their welfare and prosperity, and I pray that God may give me light and strength to achieve this, the supreme object of my life and rule.

Krishnaraja Wadiyar.

ಮಾನ್ಯರೆ,

ಮಾದರಿ ಮೈಸೂರಿನ ಜನಕರೆನಿಸಿಕೊಂಡಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿ ಬೆಳ್ಳಿಹಬ್ಬವನ್ನಾಚರಿಸಿಕೊಂಡ ಸಂದರ್ಭದಲ್ಲಿ ಅವರು ಪ್ರಜೆಗಳಿಗೆ ನೀಡಿದ ಸಂದೇಶವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಮಹಾರಾಜರ ಪ್ರೀತಿ ತುಂಬಿದ ಮಾತುಗಳೂ ಮಾದರಿಯಾಗಿಯೇ ಇದ್ದು, ಇಂದಿನ ರಾಜಕಾರಣಿಗಳಿಗೆ ಪಾಠ ಹೇಳುವಂತಿದೆ. ರಾಜಕಾರಣಿಗಳೇ ಮಹಾರಾಜರ ಮಾತುಗಳನ್ನು ಹತ್ತು ಸಲ ಓದಿ. ಸಾಧ್ಯವಾದರೆ ನೀವೂ ರೂಢಿಸಿಕೊಳ್ಳಿ

–ಕೊ.ಸು. ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.


ಕನ್ನಡ ಭಾಷೆಯನ್ನೇ ಗೌರವಿಸದ ಕರ್ನಾಟಕ ಸಾರಿಗೆ ಸಂಸ್ಥೆ



ಮಾನ್ಯರೇ,

ಕಳೆದ ವಾರ ಮೈಸೂರಿನ ಗ್ರಾಮಾಂತರ ಸಾರಿಗೆ ಬಸ್ ನಿಲ್ದಾಣದಲ್ಲಿ ನಡೆದು ಹೋಗುತ್ತಿದ್ದ ವೇಳೆ ಆಕಸ್ಮಿಕವಾಗಿ ಈ ಬಸ್ ಬೋರ್ಡ್ ಗಮನಿಸಿದೆ. ಮೊದಲಿಗೆ ಕೇರಳ ಬಸ್ ಇರಬೇಕು ಎಂದು ಭಾವಿಸಿ ಹತ್ತಿರ ಹೋಗಿ ಗಮನಿಸಿದಾಗ ತಿಳಿದದ್ದು ಇದು ನಮ್ಮ ರಾಜ್ಯದ ಸಾಂಸ್ಕೃತಿಕ ರಾಜಧಾನಿ ಮೈಸೂರಿನ ಬನ್ನಿಮಂಟಪ ವಿಭಾಗದ ಬಸ್ ಎಂದು. ದುರಂತವೆಂದರೆ ಆ ಬಸ್ಸಿನ ಚಾಲಕ, ನಿರ್ವಾಹಕರಾಗಲಿ, ಟಿಸಿ ಆಗಲಿ ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂಬುದು. ಕನ್ನಡ ನೆಲದ ಅನ್ನ ತಿಂದು, ನೀರು ಕುಡಿದು ಕನ್ನಡ ಭಾಷೆಯನ್ನೇ ಗೌರವಿಸದ ಸಾರಿಗೆ ಸಂಸ್ಥೆಯ ಮೈಸೂರು ವಿಭಾಗದ ಈ ನಡೆ ಖಂಡನೀಯ. ಇನ್ನಾದರೂ ಇಂತಹ ತಪ್ಪನ್ನು ತಿದ್ದಿಕೊಂಡು ಭಾಷೆಯನ್ನು ಗೌರವಿಸಬೇಕು ಎಂದು ಈ ಮೂಲಕ ಸಂಬಂಧಪಟ್ಟವರಲ್ಲಿ ಮನವಿ ಮಾಡುತ್ತೇನೆ.


–ನಾಯಕ ಎಸ್. ಆರ್., ಮೈಸೂರು



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ತಂದೆ–ತಾಯಂದಿರು ಹಾಗೂ ಹಿರಿಯ ನಾಗರಿಕರಿಗೆ ಕಾನೂನು 'ಆಧಾರ'



ವೃದ್ಧಾಪ್ಯದ ಸಮಸ್ಯೆಗಳು ಅಥವಾ ತೊಂದರೆಗಳು ಬೆಟ್ಟಗಳಷ್ಟೇ ಪುರಾತನವಾಗಿವೆ. ಆರಂಭಿಕ ಶತಮಾನಗಳಲ್ಲಿ 60 ವರ್ಷ ಮೀರಿದಂತಹ ಜನರನ್ನು ಕಾಣುವುದು ಕೋಳಿಯ ಹಲ್ಲನ್ನು ಹುಡುಕುವಂತೆಯೇ ವಿರಳವಾಗಿತ್ತು. ನೀವು ಮಹಾನ್ ಚಕ್ರವರ್ತಿ ಅಲೆಕ್ಸಾಂಡರ್ ಅಥವಾ ಮಹಾ ಸಂತ ಸ್ವಾಮಿ ವಿವೇಕಾನಂದರೇ ಆಗಿದ್ದರೂ ಮನುಷ್ಯನ ಜೀವಿತ ಪ್ರಮಾಣವು ಮಾತ್ರ ಕಡಿಮೆ ಇರುತ್ತಿತ್ತು. ಇದಕ್ಕೆ ಹಲವಾರು ಕಾರಣಗಳು ಇದ್ದಿರಬಹುದು. ಇದು ತಳಿಶಾಸ್ತ್ರಕ್ಕೆ ಸಂಬಂಧಿಸಿರಬಹುದು, ಅನೈರ್ಮಲ್ಯಯುತ ಜೀವನ ಸ್ಥಿತಿಗತಿಗಳು, ಕಳಪೆ ಗುಣಮಟ್ಟದ ಆಹಾರ (ಸಸ್ಯಾಹಾರ ಇಲ್ಲವೇ ಮಾಂಸಾಹಾರ), ಮಾರಣಾಂತಿಕ ವ್ಯಾಧಿಯಂತಹ ಪ್ಲೇಗು ಹಾಗೂ ಯುರೋಪಿನಲ್ಲಿ ಸಾಂಕ್ರಾಮಿಕ ರೋಗಗಳಿಂದ ಮಿಲಿಯನ್‌ಗಟ್ಟಲೆ ಜನರು ಸಾಮೂಹಿಕವಾಗಿ ಮಹಾ ವ್ಯಾಧಿಗಳಿಗೆ ಬಲಿಯಾದ ಹಾಗೆ.

ಹಾಗೂ ದೇಶ–ದೇಶಗಳ ನಡುವೆ ನಡೆದ ಯುದ್ಧಗಳು ಅಥವಾ ಆಕ್ರಮಣಕಾರರು ನಡೆಸಿದ ಯುದ್ಧಗಳನ್ನು ನಾವು ಹೇಗೆ ತಾನೇ ಮರೆಯಲು ಸಾಧ್ಯ. ಧರ್ಮ ಅಥವಾ ಭೂಮಿಗಾಗಿ ಬುಡಕಟ್ಟಿನ ಜನರು ಹಾಗೂ ಜನಾಂಗಗಳ ನಡುವೆ ಯುದ್ಧ ನಡೆಯುತ್ತಲೇ ಇತ್ತು. ಟ್ರಾಯ್ (TROY) ದೇಶದ ಹೆಲೆನ್ ಅಥವಾ ಈಜಿಪ್ಟಿನ ಕ್ಲಿಯೋಪಾತ್ರರಂತಹ ಸುಂದರ ಮಹಿಳೆಯರಿಗಾಗಿ ನಡೆದ ಯುದ್ಧಗಳನ್ನು ಸಹ ಇತಿಹಾಸ ದಾಖಲಿಸಿದೆ. ಈ ಎಲ್ಲಾ ಯುದ್ಧಗಳಲ್ಲಿ ಲಕ್ಷಗಟ್ಟಲೆ ಜನ ಚಿಕ್ಕ ಪ್ರಾಯದಲ್ಲೇ ಸಾಯುತ್ತಿದ್ದರು.

ಇಂದಿನ ಕಾಲವಮಾನಕ್ಕೆ ಹೋಲಿಸಿದರೆ, ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿದ್ದ ಆ ಕಾಲದಲ್ಲಿಯೇ ಅನೇಕ ಯುವ ಜನರು ಇಂತಹ ಯುದ್ಧಗಳಲ್ಲಿ ಮರಣ ಹೊಂದುತ್ತಿದ್ದರು.

ಆದಾಗ್ಯೂ, 19ನೇ ಶತಮಾನ ಹಾಗೂ ಅನಂತರ, ವೈದ್ಯಕೀಯ ವಿಜ್ಞಾನದ ಗಮನಾರ್ಹ ಪ್ರಗತಿಯಿಂದಾಗಿ ವೈದ್ಯರು, ನಾನಾ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆ ನೀಡುವುದು ಸಾಧ್ಯವಾಗುವುದರ ಜೊತೆಗೆ ಜನರು ಆರೋಗ್ಯವಾಗಿ ಅಥವಾ ಸಣ್ಣಪುಟ್ಟ ಬಾಧೆಗಳಿದ್ದಾಗ್ಯೂ ಸುದೀರ್ಘ ಕಾಲ ಜೀವಿಸುವ ಅವಕಾಶ ಕಲ್ಪಿಸಿದೆ. ಆದ್ದರಿಂದಲೇ, ಪತ್ರಿಕೆಗಳಲ್ಲಿ ಪ್ರಕಟವಾಗುವ ನಿಧನ ಹೊಂದಿದ ವ್ಯಕ್ತಿಗಳ ವರದಿಗಳಲ್ಲಿ 75 ವರ್ಷ ಮೇಲ್ಪಟ್ಟ ವ್ಯಕ್ತಿಗಳು ನಿಧನರಾದರೆ, ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ನಿಧನರಾಗಿದ್ದಾರೆ ಎಂದು ಪ್ರಕಟಿಸಲಾಗಿರುತ್ತದೆ.

ಸರ್ಕಾರವು ತನ್ನ ಒಂದು ಕಲ್ಯಾಣ ಕಾರ್ಯಕ್ರಮವಾಗಿ ಮೇಲೆ ಹೇಳಿದಂತಹ ಶೋಷಕರು ಹಾಗೂ ಪೀಡಕರಿಂದ ರಕ್ಷಣೆ ಪಡೆಯಲು ವಯಸ್ಸಾದವರಿಗೆ ಒಂದು ರಕ್ಷಾ ಕವಚವನ್ನು ನೀಡಿದೆ. ನಮ್ಮ ದೇಶದಲ್ಲಿ ವಯಸ್ಸಾದವರ ಅಥವಾ ಹಿರಿಯರ ಹಿತಾಸಕ್ತಿಗಳನ್ನು ರಕ್ಷಿಸಲು ವಿಶೇಷ ಕಾನೂನನ್ನು ಜಾರಿಗೊಳಿಸಲಾಗಿದೆ. ಈ ಕಾನೂನನ್ನು "Maintenance and Welfare of Parents and Senior Citizens Act 2007 (ತಂದೆ ತಾಯಂದಿರು ಹಾಗೂ ಹಿರಿಯ ನಾಗರಿಕರ ಪಾಲನೆ ಮತ್ತು ಶ್ರೇಯೋಭಿವೃದ್ಧಿ ಅಧಿನಿಯಮ, 2007) ಎಂದು ಕರೆಯಲಾಗುತ್ತದೆ.

ಇಂದು ನಾವು ಶತಾಯುಷಿಗಳು ಇರುವ ಜಪಾನ್ ಅಥವಾ ಸ್ವಿಡ್ಜರ್‌ಲ್ಯಾಂಡ್ ಬಗ್ಗೆ ಓದುತ್ತೇವೆ. ವೃದ್ಧಾಶ್ರಮಗಳು ಎಂದು ಕರೆಯುವ ಹಾಗೆ ಆ ರಾಷ್ಟ್ರಗಳನ್ನು ವೃದ್ಧ ವಯೋಮಾನದ ದೇಶಗಳು ಎಂದು ಕರೆಯಬಹುದು.

ವೃದ್ಧಾಶ್ರಮಗಳನ್ನು ನಡೆಸುವಂತಹ ವ್ಯಕ್ತಿಗಳು, ಮಕ್ಕಳ ಆಶ್ರಯ ಧಾಮಗಳನ್ನು ನಡೆಸುವಂತಹವರ ಸಮಾನಾಂತರವಾಗಿ ಇದ್ದಾರೆ. ಏಕೆಂದರೆ, ಎರಡೂ ಕಡೆ ಇರುವಂತಹವರನ್ನು ನೋಡಿಕೊಳ್ಳುವುದರಲ್ಲಿ ಇರುವ ಸಮಸ್ಯೆ ಸಾಮಾನ್ಯವಾಗಿ ಒಂದೇ ಆಗಿದೆ. ಎರಡೂ ಪ್ರಕರಣಗಳಲ್ಲಿ, ಪರಿಚಾರಕರು (care-takers) ಮಕ್ಕಳನ್ನು ಹಾಗೂ ವೃದ್ಧರನ್ನು ನೋಡಿಕೊಳ್ಳುವಲ್ಲಿ ಕೆಲವು ಕ್ಲಿಷ್ಟಕರ ಪರಿಸ್ಥಿತಿ ಅನುಭವಿಸಬೇಕಾಗುತ್ತದೆ. ಮಕ್ಕಳನ್ನು ನೋಡಿಕೊಳ್ಳಲು, ಮನೆಗಳಲ್ಲಿ ತಂದೆ–ತಾಯಿಗಳು ಅಥವಾ ಆಯಾಗಳು ಇರುತ್ತಾರೆ. ವೃದ್ಧರಿರುವ ಮನೆಗಳಲ್ಲಿ, ಅವರ ಮಕ್ಕಳಾಗಲೀ ಅಥವಾ ಮನೆ ಕೆಲಸದವರಾಗಲೀ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗುತ್ತದೆ. ಆದರೆ ಅಂತಹ ವೃದ್ಧರು, ವೃದ್ಧಾಶ್ರಮಗಳಲ್ಲಿ ಇದ್ದರೆ, ಅಂತಹ ಸ್ಥಳಗಳಲ್ಲಿ ಇರುವ ಪರಿಚಾರಕರ ಕೃಪೆಯಲ್ಲಿ ಅವರು ಇರಬೇಕಾಗುತ್ತದೆ.

ಅದು ಹಾಗಿರಲಿ, ಇಂತಹ ವಯಸ್ಸಾದವರು ಅಥವಾ ವೃದ್ಧರು ಎಲ್ಲೇ ಇರಲಿ ಅಥವಾ ಯಾರ ಸುರಕ್ಷೆಯಲ್ಲೇ ಇರಲಿ, ಆರೋಗ್ಯ ಇಲ್ಲವೇ ಆಸ್ತಿಗೆ ಸಂಬಂಧಿಸಿದ ಯಾವುದಾದರೂ ಸಮಸ್ಯೆ ಅವರನ್ನು ಕಾಡುತ್ತಿರುತ್ತದೆ. ಈ ರೀತಿ ತಮ್ಮ ವೃದ್ಧಾಪ್ಯದಲ್ಲಿ, ಅವರು ಅಸಹಾಯಕರಾಗಿ, ಮಾನಸಿಕ ಅಸ್ವಸ್ಥರಾಗಿಯೋ ಅಥವಾ ಶಾರೀರಕ ಅಸಾಮರ್ಥ್ಯ, ಯಾವುದೋ ಕಾಯಿಲೆಯಿಂದಲೋ ಬಳಲುತ್ತಾರೆ. **ಅಂತಹ ಸನ್ನಿವೇಶದಲ್ಲಿ, ಅವರ ಸ್ವಂತ ಮಕ್ಕಳು ಸೇರಿದಂತೆ, ಇತರ ದುರಾಸೆಯುಳ್ಳ ಹೃದಯ ಹೀನ ಫಲಾನುಭವಿಗಳು, ಅಂತಹ ವೃದ್ಧರನ್ನು ಬೀದಿಪಾಲು ಮಾಡಿರುತ್ತಾರೆ ಇಲ್ಲವೇ ಅವರನ್ನು ಶೋಷಣೆಗೀಡುಮಾಡುತ್ತಾರೆ.**

ಸರ್ಕಾರವು ತನ್ನ ಒಂದು ಕಲ್ಯಾಣ ಕಾರ್ಯಕ್ರಮವಾಗಿ ಮೇಲೆ ಹೇಳಿದಂತಹ ಶೋಷಕರು ಹಾಗೂ ಪೀಡಕರಿಂದ ರಕ್ಷಣೆ ಪಡೆಯಲು ವಯಸ್ಸಾದವರಿಗೆ ಒಂದು ರಕ್ಷಾ ಕವಚವನ್ನು ಕಲ್ಪಿಸಿದೆ. ನಮ್ಮ ದೇಶದಲ್ಲಿ ವಯಸ್ಸಾದವರ ಅಥವಾ ಹಿರಿಯರ ಹಿತಾಸಕ್ತಿಗಳನ್ನು ರಕ್ಷಿಸಲು ವಿಶೇಷ ಕಾನೂನನ್ನು ಜಾರಿಗೊಳಿಸಲಾಗಿದೆ. ಈ ಕಾನೂನನ್ನು "**Maintenance and Welfare of Parents and Senior Citizens Act 2007** (ತಂದೆ–ತಾಯಂದಿರು ಹಾಗೂ ಹಿರಿಯ ನಾಗರಿಕರ ಪಾಲನೆ ಮತ್ತು ಶ್ರೇಯೋಭಿವೃದ್ಧಿ ಅಧಿನಿಯಮ, 2007) ಎಂದು ಕರೆಯಲಾಗುತ್ತದೆ.

ಈ ಕಾಯಿದೆಯ ಸೆಕ್ಷನ್ 17ರ ಅಡಿಯಲ್ಲಿ, ಅರ್ಜಿದಾರರಾದ ವಯಸ್ಸಾದ ಮನುಷ್ಯ ಅಥವಾ ವೃದ್ಧ ಮಹಿಳೆ ತನ್ನ ವಾದವನ್ನು ಮಂಡಿಸಲು ವಕೀಲರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ. ಅದೇ ರೀತಿ, ಪ್ರತಿವಾದಿಯು ಸಹ, ವಕೀಲರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ. ಆದರೆ ವಯಸ್ಸಾದ ವ್ಯಕ್ತಿಗಳಿಗೆ ಇದೊಂದು ತೊಡಕಾಗಿದೆ. ಆದಾಗ್ಯೂ, 06.07.2023ರಂದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯ ಪ್ರಕಾರ, ಈ ನಿರ್ಬಂಧವನ್ನು ರಾಜ್ಯದ ಉಚ್ಚ ನ್ಯಾಯಾಲಯ ಅನೂರ್ಜಿತಗೊಳಿಸಿದೆ. ಈ ವರದಿಯ ಪ್ರಕಾರ, ಇತ್ತೀಚಿನ ಆದೇಶವೊಂದರಲ್ಲಿ, ನ್ಯಾಯಮೂರ್ತಿ ಎಂ. ನಾಗಪ್ರಸನ್ನರವರು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಒಂದು ಆದೇಶ ನೀಡಿ, ಅರ್ಜಿದಾರರು ಹಾಗೂ ಮೇಲ್ಮನವಿದಾರರಿಗೆ ನ್ಯಾಯಾಂಗ ಕಲಾಪಗಳಲ್ಲಿ ವಕೀಲರನ್ನು ನೇಮಕ ಮಾಡಿಕೊಳ್ಳುವ ಅವಕಾಶ ಕಲ್ಪಿಸಬೇಕೆಂದು ಆದೇಶಿಸಿದ್ದಾರೆ.

ಇಂತಹ ಹಲವಾರು ಚಾರಿತ್ರಿಕ ತೀರ್ಪುಗಳನ್ನು ಈ ಹಿಂದೆ ನೀಡಿರುವ ಘನತೆವೆತ್ತ ಈ ನ್ಯಾಯಮೂರ್ತಿಗಳು ಈಗ ನೀಡಿರುವ ತೀರ್ಪು ಅತ್ಯಂತ ವಿವೇಚನೆಯಿಂದ ಕೂಡಿದ್ದು ಮಹಾಮಾನವೀಯ ಗುಣವನ್ನು ಹೊಂದಿದೆ. ಸದರಿ ನ್ಯಾಯಮೂರ್ತಿಗಳ ತೀರ್ಪು ಕರುಣಾಮಯಿ ಚಕ್ರವರ್ತಿ ಸೋಲೋಮನ್ ಅವರ ತೀರ್ಪಿನಂತೆ ದಯೆಯಿಂದ ಕೂಡಿದೆ. ಈ ಸಂದರ್ಭದಲ್ಲಿ, ನನಗೆ ಅಮೇರಿಕಾದ ಮುಖ್ಯ ನ್ಯಾಯಮೂರ್ತಿ ಫ್ರಾಂಕ್ ಟಿ. ಕಾಪ್ರಿಕೊ ಅವರ ನೆನಪಾಯಿತು. ಅವರು ಮಾನವೀಯ ಗುಣಗಳಿರುವ ತೀರ್ಪುಗಳನ್ನು ನೀಡುತ್ತಿದ್ದರು. ಹಾಗೂ ಕಾಯ್ದೆಗಳನ್ನು ದುರ್ಬಲರಿಗೆ ಸಹಾಯಕವಾಗುವ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. ನ್ಯಾಯಮೂರ್ತಿ ನಾಗಪ್ರಸನ್ನ ಅವರು ನೀಡಿರುವ ಈ ತೀರ್ಪು ಮತ್ತೆ ಸದರಿ ಪ್ರಕರಣದ ವಿಚಾರಣೆ ನಡೆಸುತ್ತಿರುವ ಜಿಲ್ಲಾಧಿಕಾರಿಗಳ ಬಳಿ ಹೋಗುತ್ತದೆ.

ಅಂದ ಹಾಗೆ, "ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ– ಶ್ರೇಯೋಭಿವೃದ್ಧಿ ಅಧಿನಿಯಮ– 2007"ರ ಪ್ರಕಾರ, ಮೊದಲು ಪ್ರಕರಣ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್) ಬಳಿ ಹೋಗಬೇಕು. ನಂತರ, ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಮಾಡಬೇಕಾಗುತ್ತದೆ.

ಮೇಲೆ ಪ್ರಸ್ತಾಪಿಸಿರುವ ಪ್ರಕರಣವನ್ನು ಉಡುಪಿ ಜಿಲ್ಲೆಯ ಪುತ್ತೂರಿನವರಾದ ಶ್ರೀನಿವಾಸ ಗಾಣಿಗ ಎಂಬ 82 ವರ್ಷ ವಯಸ್ಸಿನ ವೃದ್ಧರು ದಾಖಲಿಸಿದ್ದಾರೆ. ಸದರಿಯವರು ಕೆಲವು ಆಸ್ತಿಗಳನ್ನು ಖರೀದಿಸಿ, ತಮ್ಮ ಇಬ್ಬರು ಗಂಡು ಮಕ್ಕಳಿಗೆ ವರ್ಗಾಯಿಸಿದ್ದಾರೆಂದು ತೋರುತ್ತದೆ. ನಂತರ ಅವರು ಮೇಲೆ ಹೇಳಿದ ಕಾಯ್ದೆ 2007ರ ಪ್ರಕಾರ, ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಯವರಿಗೆ ಅರ್ಜಿ ಸಲ್ಲಿಸಿ, ತಮ್ಮ ಓರ್ವ ಪುತ್ರ, ತಮಗೆ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾನೆಂದು ಹಾಗೂ ತನ್ನ ಇಬ್ಬರು ಮಕ್ಕಳು, ತನ್ನ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮೋಸದಿಂದ 2014ರಲ್ಲಿ ಒಪ್ಪಂದ ಮಾಡಿಕೊಂಡು, ತಮ್ಮದನ್ನಾಗಿಸಿಕೊಂಡಿದ್ದಾರೆಂದು ದೂರಿದ್ದಾರೆ. ಸದರಿ ಅರ್ಜಿದಾರರು, ಮೇಲ್ಕಂಡ ಕಾಯಿದೆಗೆ ಅನುಗುಣವಾಗಿ ತಮ್ಮ ಆಸ್ತಿಯನ್ನು ತಮಗೆ ಮರಳಿಸುವಂತೆ ಅಥವಾ ಸದರಿ ಆಸ್ತಿಗಳ ಮೇಲೆ ತಮ್ಮ ಹಕ್ಕುಗಳನ್ನು ಪುನರ್ ಸ್ಥಾಪಿಸುವಂತೆ ಸಕ್ಷಮ ಪ್ರಾಧಿಕಾರವನ್ನು ಕೋರಿದ್ದಾರೆ.

ಕೊನೆ ಮಾತು

ಅನೇಕ ಜನರು, "ಹಳೆಯದು ಅಪರಂಜಿ ಇದ್ದಂತೆ" (Old is gold) ಎಂಬ ನಾಣ್ಣುಡಿಯನ್ನು ಅರ್ಥ ಮಾಡಿಕೊಂಡಿಲ್ಲವೆಂಬುದು ಅಚ್ಚರಿಯ ಸಂಗತಿಯಾಗಿದೆ. ಓರ್ವ ವ್ಯಕ್ತಿಗೆ ವಯಸ್ಸಾಗಿರಬಹುದು, ಆದರೆ ಅವರ ಬುದ್ಧಿ ಮತ್ತೆ, ಸಾಮರ್ಥ್ಯಗಳು ಉತ್ತಮವಾಗಿದ್ದರೆ, ತನಗಿಂತ ಕಿರಿಯರಿಗಿಂತ ಚೆನ್ನಾಗಿ ಜೀವನ ನಡೆಸಬಹುದು. ನಾವಿಂದು, 75 ವರ್ಷಗಳಿಗೂ ಮೇಲ್ಪಟ್ಟ ಜನರು, ಕಲೆ, ಸಾಹಿತ್ಯ, ಸಂಗೀತ, ರಾಜಕೀಯ ಮತ್ತು ಇತರ ವೃತ್ತಿಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಅವುಗಳಲ್ಲಿ ತೊಡಗಿಸಿಕೊಂಡಿರುವುದನ್ನು ಹಾಗೂ ಕಿರಿಯರಿಗಿಂತ ಹೆಚ್ಚಿನ ಯಶಸ್ಸನ್ನು ಗಳಿಸುತ್ತಿರುವುದನ್ನು ನೋಡಬಹುದು.

ವಾಸ್ತವಾಂಶಗಳು ಹೀಗಿರುವಾಗ, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ತಮ್ಮ ಚಿಕ್ಕಪ್ಪ ಶರದ್ ಪವಾರ್ ಅವರ ವಿರುದ್ಧ ನೀಡಿರುವ "ನಿಮಗೆ 83 ವರ್ಷ ವಯಸ್ಸಾಗಿದೆ. ನೀವು ಯಾವಾಗ ನಿವೃತ್ತರಾಗುತ್ತೀರಿ?" ಎಂಬ ಅವಹೇಳನಕಾರಿ ಹೇಳಿಕೆಯನ್ನು ಓದಿ ನನಗೆ ಆಶ್ಚರ್ಯವಾಯಿತು.

ಅಮೆರಿಕಾದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಯಾವುದೇ ನಿವೃತ್ತಿ ವಯಸ್ಸಿಲ್ಲ ಎಂಬುದು ಅಜಿತ್ ಪವಾರ್ ಅವರಿಗೆ ಗೊತ್ತಿದೆಯೇ? ಪ್ರಸ್ತುತ ಅಮೇರಿಕಾ ಸುಪ್ರೀಂಕೋರ್ಟಿನ ಅತಿ ಹಿರಿಯ ನ್ಯಾಯಾಧೀಶರ ವಯಸ್ಸು 87. ನೀವು ಸೈದ್ಧಾಂತಿಕ ವಿಚಾರವಾಗಿ ರಾಜಕೀಯ ಸಮರ ಮ್ನು ಸಾರುವ ಬದಲು, ವಯಸ್ಸನ್ನು ಏಕೆ ಮಧ್ಯೆ ತರುತ್ತೀರಿ?

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

voice
@starofmysore.com



ನಾಪತ್ತೆಯಾಗಿದ್ದ ಹೆಲಿಕಾಪ್ಟರ್ ಪತನ, 6 ಶವಗಳು ಪತ್ತೆ

ಕಠ್ಮಂಡು: ನೇಪಾಳದಲ್ಲಿ ಮತ್ತೊಂದು ಹೆಲಿಕಾಪ್ಟರ್ ದುರಂತ ಸಂಭವಿಸಿದ್ದು, ಇಂದು ಬೆಳಗ್ಗೆ ಸಂಪರ್ಕ ಕಡಿತಗೊಂಡಿದ್ದ ಪ್ರಯಾಣಿಕ ಹೆಲಿಕಾಪ್ಟರ್ ಪತನವಾಗಿದೆ ಎಂದು ತಿಳಿದುಬಂದಿದೆ.

ಮಂಗಳವಾರ ನೇಪಾಳದ ಮೌಂಟ್ ಎವರೆಸ್ಟ್ ಪ್ರದೇಶದ ಬಳಿ ನಾಪತ್ತೆಯಾಗಿದ್ದ ಐವರು ಮೆಕ್ಸಿಕನ್ ಪ್ರಜೆಗಳು ಸೇರಿದಂತೆ ಆರು ಜನರಿದ್ದ ಖಾಸಗಿ ವಾಣಿಜ್ಯ ಹೆಲಿಕಾಪ್ಟರ್ ದೇಶದ ಪೂರ್ವ ಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿ ಪತನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮನಂಗ್ ಏರ್ ಓಂ–ಒಗಿ ಚಾಪರ್ ಸೋಲುಖುಂಬು ಜಿಲ್ಲೆಯ ಸುರ್ಕೆ ವಿಮಾನ ನಿಲ್ದಾಣದಿಂದ ಬೆಳಗ್ಗೆ 10:04ಕ್ಕೆ ಕಠ್ಮಂಡುವಿಗೆ ಹೊರಟಿತು. ಮತ್ತು 10:13 ಕ್ಕೆ 12,000 ಅಡಿ ಎತ್ತರದಲ್ಲಿ ಇದ್ದಕ್ಕಿದ್ದಂತೆ ಸಂಪರ್ಕವನ್ನು ಕಳೆದುಕೊಂಡಿತು. ಇದೀಗ ಹೆಲಿಕಾಪ್ಟರ್ ಪತನವಾಗಿದೆ ಎಂದು ತಿಳಿದುಬಂದಿದೆ ಎಂದು ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (TIA) ವ್ಯವಸ್ಥಾಪಕ ಜ್ಞಾನೇಂದ್ರ ಭುಲ್ ಮಾಹಿತಿ ನೀಡಿದ್ದಾರೆ.

ಹೆಲಿಕಾಪ್ಟರ್‌ನಲ್ಲಿದ್ದ ಪ್ರಯಾಣಿಕರಲ್ಲಿ ಐವರು ಮೆಕ್ಸಿಕನ್ ಪ್ರಜೆಗಳಿದ್ದರು. ಹೆಲಿಕಾಪ್ಟರ್ ಅನ್ನು ಹಿರಿಯ ಕ್ಯಾಪ್ಟನ್ ಚೆಟ್ ಬಿ ಗುರುಂಗ್ ಚಾಲನೆ ಮಾಡುತ್ತಿದ್ದರು. ಇದೀಗ ಪೈಲಟ್ ಸಹಿತ ಹೆಲಿಕಾಪ್ಟರ್‌ನಲ್ಲಿದ್ದ ಎಲ್ಲರೂ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ದೂರದ ಪರ್ವತ ಪ್ರದೇಶವಾದ ಸೋಲುಖುಂಬು ಜಿಲ್ಲೆಯ ಲಿಖುಪಿಕೆ ಗ್ರಾಮೀಣ ಪುರಸಭೆಯ ಲಮ್ಜುರಾ ಪ್ರದೇಶದಲ್ಲಿ ಹೆಲಿಕಾಪ್ಟರ್ ಪತನಗೊಂಡಿದೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿರುವುದರಿಂದ ವಿವರವಾದ ವರದಿ ಬರಬೇಕಿದೆ ಎಂದು ಟಿಐಎಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರೀ ಸ್ಫೋಟದೊಂದಿಗೆ ಹೆಲಿಕಾಪ್ಟರ್ ಪತನಗೊಂಡಿದ್ದು, ಅಪಘಾತದ ಸ್ಥಳದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಚಿಹಂದಂಡದಲ್ಲಿ ಅಪಘಾತಕ್ಕೀಡಾದ ಹೆಲಿಕಾಪ್ಟರ್ ಅನ್ನು ಸ್ಥಳೀಯರು ಪತ್ತೆ ಮಾಡಿದ್ದಾರೆ ಎಂದು ಗ್ರಾಮೀಣ ಪುರಸಭೆಯ ಉಪಾಧ್ಯಕ್ಷ ನ್ವಾಂಗ್ ಲಕ್ಪಾ ಹೇಳಿದ್ದಾರೆ ಎಂದು ಕಠ್ಮಂಡು ಪೋಸ್ಟ್ ಪತ್ರಿಕೆ ವರದಿ ಮಾಡಿದೆ.

1997 ರಲ್ಲಿ ಸ್ಥಾಪನೆಯಾದ ಮನಂಗ್ ಏರ್ ಕಠ್ಮಂಡು ಮೂಲದ ಹೆಲಿಕಾಪ್ಟರ್ ಏರ್‌ಲೈನ್ ಆಗಿದೆ ಇದು ನೇಪಾಳದ ನಾಗರಿಕ ವಿಮಾನಯಾನ ಪ್ರಾಧಿಕಾರದ ನಿಯಂತ್ರಣದ ಅಡಿಯಲ್ಲಿ ನೇಪಾಳದ ಪ್ರದೇಶದೊಳಗೆ ವಾಣಿಜ್ಯ ವಾಯು ಸಾರಿಗೆಯಲ್ಲಿ ಹೆಲಿಕಾಪ್ಟರ್‌ಗಳನ್ನು ನಿರ್ವಹಿಸುತ್ತಿದೆ. ಕಂಪನಿಯು ಚಾರ್ಟರ್ಡ್ ಸೇವೆಗಳನ್ನು ಒದಗಿಸುತ್ತದೆ ಮತ್ತು ಸಾಹಸ ವಿಮಾನಗಳು ಹೆಲಿಕಾಪ್ಟರ್ ವಿಹಾರಗಳು ಅಥವಾ ಯಾತ್ರೆಯಂತಹ ವೈಯಕ್ತಿಕ ಸೇವೆಗಳ ಮೇಲೆ ಕೇಂದ್ರೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಮೈಸೂರು,ಜು.11–ಮೈಸೂರಿನ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ನಗರದ ಗೋಪಾಲಸ್ವಾಮಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಜು.30ರಂದು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.



ಸ್ಪರ್ಧೆ ವಿಷಯಗಳು: ಸಾವರ್ಕರ್ ಹಾಗೂ ಪತೀತ ಪಾವನ ಮಂದಿರ, ಲಂಡನ್‌ನಲ್ಲಿ ಸಾವರ್ಕರ್, ಸ್ವಾತಂತ್ರ್ಯ ಹೋರಾಟದಲ್ಲಿ ಸಾವರ್ಕರ್, ಸಾವರ್ಕರ್ ಹಾಗೂ ಕ್ಷಮಾಪತ್ರ, ಹಾಗೂ ಕಾಲಾಪಾನಿ ಶಿಕ್ಷೆ ಹಾಗೂ ಸಾವರ್ಕರ್ ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಮಾತ್ರ ಆಯ್ಕೆ ಮಾಡಿ ಪ್ರಬಂಧ ಬರೆಯಲು ಅವಕಾಶವಿದೆ. 1 ಗಂಟೆ ಅವಧಿಯಲ್ಲಿ ಗರಿಷ್ಠ 1 ಸಾವಿರ ಶಬ್ದಗಳ ಒಳಗೆ ಪ್ರಬಂಧ ಬರೆಯಬೇಕು. ವಿಜೇತರಿಗೆ **ಮೊದಲ ಬಹುಮಾನ:** ರೂ. 10,000, **ದ್ವಿತೀಯ ಬಹುಮಾನ:** ರೂ. 5,000 ಹಾಗೂ **ತೃತೀಯ ಬಹುಮಾನ** ರೂ. 3000. ಹೆಚ್ಚಿನ ಮಾಹಿತಿಗಾಗಿ 8660219746/9620096279. (https://surveyheart.com/form/64a552d53d6e585e54522739) ಸಂಪರ್ಕಿಸಬಹುದು.

ಜು.15, ಕೆ.ವಿ.ಶಂಕರಗೌಡರ 108ನೇ ಜನ್ಮದಿನಾಚರಣೆ



ಮೈಸೂರು, ಜು. 11– ನಿತ್ಯ ಸಚಿವ ಕೆ.ವಿ.ಶಂಕರಗೌಡರ 108ನೇ ಜನ್ಮ ದಿನಾಚರಣೆ 2023ನೇ ಸಾಲಿನ ರಾಜ್ಯಮಟ್ಟದ ಕೆ.ವಿ.ಶಂಕರ ಗೌಡರು, ಕೆ.ಎಸ್.ಸಚ್ಚಿದಾನಂದ ರಂಗಭೂಮಿ ಮತ್ತು ಸಮಾಜ ಸೇವಾ ಪ್ರಶಸ್ತಿಗಳ ಪ್ರಧಾನ ಸಮಾರಂಭವನ್ನು ಜು.15ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯದ ಕೆ.ವಿ.ಶಂಕರಗೌಡ ತರಬೇತಿ ಮತ್ತು ಉದ್ಯೋಗ ಕೇಂದ್ರ ಸಭಾಂಗಣ, ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ. ವಿಶ್ರಾಂತ ಅಡ್ವೋಕೇಟ್ ಜನರಲ್ ಆಫ್ ಕರ್ನಾಟಕ ಅಶೋಕ್ ಹಾರನಹಳ್ಳಿ ಕಾರ್ಯಕ್ರಮದ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ನಡೆಸಿಕೊಡಲಿದ್ದಾರೆ. ಜನತಾ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯಮಟ್ಟದ ರಂಗಭೂಮಿ ಪ್ರಶಸ್ತಿಯನ್ನು ಹಿರಿಯ ರಂಗಕರ್ಮಿ ಪ್ರಸನ್ನ ಹಾಗೂ ರಾಜ್ಯ ಮಟ್ಟದ ಸಮಾಜ ಸೇವಾ ಪ್ರಶಸ್ತಿಯನ್ನು ಮೃಗಾಲಯ ಆಸ್ಪತ್ರೆ, ಪ್ರಾಣಿ ಪಕ್ಷಿಗಳ ಆರೋಗ್ಯ ಮತ್ತು ಕಲ್ಯಾಣ ವಿಭಾಗ, ಬನ್ನೇರುಘಟ್ಟ, ಜೈವಿಕ ಉದ್ಯಾನವನ, ಬೆಂಗಳೂರು ಇವರಿಗೆ ನೀಡಿ ಸನ್ಮಾನಿಲಾಗುವುದು. ನಿವೃತ್ತ ಚೀಫ್ ಇಂಜಿನಿಯರಿಂಗ್, ಕೆ.ಪಿ.ಟಿ.ಸಿ.ಎಲ್. ಬೆಂಗಳೂರು ಎಸ್.ಎಲ್. ಶಿವಪ್ರಸಾದ್ ಇನ್ನಿತರರು ಉಪಸ್ಥಿತರಿರುವರು.

ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯೊಂದಿಗೆ ಸಾಧನೆ ಮಾಡಿ

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಸುರೇಶ್‌ಕುಮಾರ್



ಮೈಸೂರು, ಜು. 11– ವಿದ್ಯಾರ್ಥಿಗಳು ಗುರಿ ಇಟ್ಟುಕೊಂಡು ಶ್ರಮಪಟ್ಟು, ಓದಿದಾಗ ಮಾತ್ರ ಸಾಧನೆ ಮಾಡಬಹುದು ಎಂದು ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಸುರೇಶ್‌ಕುಮಾರ್ ಕರೆ ನೀಡಿದರು.

ಬೋಗಾದಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಸರ್ಕಾರಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ನಡೆದ ಭಾವಸಂಗಮ ಕಾರ್ಯಕ್ರಮದ ಉದ್ಘಾಟನೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾರ್ಜ್ ಬರ್ನಾಡ್ ಷಾ ಹೇಳಿದಂತೆ ವಿದ್ಯಾರ್ಥಿಗಳು ಮೊದಲು ನಿಮ್ಮನ್ನು ನೀವು ಬದಲಾವಣೆ ಮಾಡಿಕೊಳ್ಳಬೇಕು. ಸಮಯವನ್ನು ವ್ಯರ್ಥ ಮಾಡದೆ ಅಂಬೇಡ್ಕರ್‌ರವರ ಸಂವಿಧಾನದ ಚಿಂತನೆಗಳನ್ನು ತಿಳಿದುಕೊಳ್ಳಬೇಕು. ಅಂಬೇಡ್ಕರ್ ಇದ್ದಾಗ ಇದ್ದಂತಹ ವ್ಯವಸ್ಥೆಗೂ, ಈಗಿನ ವ್ಯವಸ್ಥೆಗೂ ಹೋಲಿಕೆ ಮಾಡಿಕೊಂಡು ಬದುಕನ್ನು ರೂಪಿಸಿಕೊಳ್ಳಬೇಕು. ಬದುಕಲು ಪ್ರತಿಯೊಬ್ಬರಿಗೂ ವೃತ್ತಿ ಇರಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಒಂದು ಹುದ್ದೆಗೆ ನೂರಾರು ಅರ್ಜಿಗಳು ಬರುತ್ತವೆ. ಆದ್ದರಿಂದ ಚೆನ್ನಾಗಿ ಓದಿಕೊಳ್ಳಬೇಕು. ಇಂತಹ ಕಾರ್ಯಾಗಾರಗಳು ಹೆಚ್ಚಾಗಿ ನಡೆಯಬೇಕು ಎಂದ ಅವರು, ಹಾಸ್ಟೆಲ್‌ನ ಹಳೆಯ ವಿದ್ಯಾರ್ಥಿಗಳ ಒಕ್ಕೂಟವನ್ನು ರಚನೆ ಮಾಡಲು ಸಲಹೆ ನೀಡಿದರು. ಸಮಾರಂಭದಲ್ಲಿ ನಂಜನಗೂಡು ತಹಶೀಲ್ದಾರ್ ಶಿವಕುಮಾರ್ ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗು, ಉಪನ್ಯಾಸಕರಾದ ಪ್ರಶಾಂತ್, ಸಂದೀಪ್ ರಾವಣೆಕರ್ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿ ನೀಡಿದರು. ನಿಲಯಪಾಲಕರಾದ ಕೆ.ಎ.ಎಸ್. ಪ್ರದೀಪ್, ಚಿಕ್ಕೀರಯ್ಯ ಹಾಗೂ ಎಲ್ಲಾ ನಿಲಯಪಾಲಕರು ಹಾಜರಿದ್ದರು.

ಜೈನ ಮುನಿ ಹತ್ಯೆ: ಇಂದು ಮೌನ ಮೆರವಣಿಗೆ




ಮೈಸೂರು,ಜು.11(ಜಿಎ)–ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಖಂಡಿಸಿ ಜು.12ರಂದು ಮೌನ ಮೆರವಣಿಗೆ ನಡೆಸಲಾಗುವುದು ಎಂದು ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನಿಲ್‌ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 10ರಿಂದ 11ರವರೆಗೆ ನಗರದ ಗಾಂಧಿ ವೃತ್ತದಲ್ಲಿ ಮೌನ ಪ್ರತಿಭಟನೆ. ನಂತರ ಮೌನ ಮೆರವಣಿಗೆಯಲ್ಲಿ ಸಾಗಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಿದ್ದೇವೆ ಎಂದರು. ಜೈನ ಧರ್ಮವು ವಿಶ್ವಕ್ಕೆ ಅಹಿಂಸೆಯನ್ನು ಸಾರಿದ್ದು ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಸೇವೆಯಲ್ಲಿ ನಿರತವಾಗಿದೆ. ಸರ್ವ ಸಂಗ ಪರಿತ್ಯಾಗಿ ದಿಗಂಬರ ಜೈನ ಮುನಿಯನ್ನು ಹತ್ಯೆ ಮಾಡುವ ಕ್ರೂರತೆ ಆತಂಕ ಹುಟ್ಟಿಸುತ್ತದೆ. ಇಂತಹ ಘಟನೆ ಮತ್ತೆ ನಡೆಯಬಾರದು. ಜೈನ ಮುನಿಗಳ ರಕ್ಷಣೆಗೆ ಸರ್ಕಾರ ಕ್ರಮ ವಹಿಸಬೇಕು. ಅವರ ಸುರಕ್ಷಿತ ವಾಸ್ತವ್ಯಕ್ಕೂ ಗಮನಹರಿಸಬೇಕು. ಪ್ರಕರಣದ ಬಗ್ಗೆ ಸೂಕ್ತ ತನಿಖೆಯಾಗಬೇಕು. ಅಗತ್ಯ ಬಿದ್ದರೆ ಸಿಬಿಐಗೆ ವರ್ಗಾಯಿಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ದಿಗಂಬರ ತೀರ್ಥಕ್ಷೇತ್ರ ಸಮಿತಿ ಅಧ್ಯಕ್ಷ ವಿನೋದ್ ಜೈನ್, ನಗರ ಮಹಿಳಾ ಘಟಕದ ಅಧ್ಯಕ್ಷ ಲತಾ ಜೈನ್ ಮತ್ತು ಸುರೇಶ್ ಜೈನ್, ಯುವರಾಜ ಉಪಸ್ಥಿತರಿದ್ದರು.

ನಿಧನ


ಶ್ರೀಮತಿ ಹೇಮಲತಾ



ಮೈಸೂರು, ಜು.11– ಮೈಸೂರಿನ ವಿವಿ ಮೊಹಲ್ಲಾ ನಿವಾಸಿ ಶ್ರೀಮತಿ ಹೇಮಲತಾ(64) ಅವರು ಮಂಗಳವಾರ ನಿಧನರಾದರು.

ಮೃತರು ಪತಿ ವಿ.ಪ್ರಮೋದ್ ಕುಮಾರ್(ಆನಂದ್ ಭವನ್ ಸ್ಟೋರ್ಸ್), ಪುತ್ರ ಮಂಜುಲ್ ಗೋಯಲ್, ಪುತ್ರಿ ಪ್ರಗತಿ ಗೋಯಲ್, ಸಹೋದರರಾದ ಎಸ್.ರಘುಕುಲ್ ತಿಲಕ್, ಡಾ.ಎಸ್. ಗೋವಿಂದ, ಎಸ್.ಗೋಪಾಲ್, ಸಹೋದರಿ ಆಶಾ ಗುಪ್ತಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ರುದ್ರಭೂಮಿಯಲ್ಲಿ ಬುಧವಾರ ಬೆಳಗ್ಗೆ 11 ಗಂಟೆಗೆ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು (ಮೊ.ಸಂ.9945159066) ತಿಳಿಸಿವೆ.

ಎನ್.ಬಿ.ಗುರುಸ್ವಾಮಿ



ಮೈಸೂರು ಜಿಲ್ಲೆ, ತಿ.ನರಸೀಪುರ ತಾಲೂಕಿನ ನಿಲಸೋಗೆ ಗ್ರಾಮದ ನಿವಾಸಿ ಎನ್.ಬಿ.ಗುರುಸ್ವಾಮಿ (65) ಅವರು ಅನಾರೋಗ್ಯದಿಂದ ಸೋಮವಾರ ನಿಧನರಾದರು. ಮೃತರು ಪತ್ನಿ ಶ್ರೀಮತಿ ರತ್ನಮ್ಮ, ತಾಯಿ ಶಿವಮ್ಮ, ಸಹೋದರಿಯರಾದ ಶೈಲಜಾ, ಮಂಗಳಮ್ಮ, ನಾಗಮಣಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಮಂಗಳವಾರ ನಿಲಸೋಗೆ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಮ್ಮ ಹಕ್ಕುಗಳನ್ನು ಹೋರಾಟದ ಮೂಲಕ ಪಡೆಯಲು ಸಜ್ಜಾಗಬೇಕು

ಕಾನೂನು ಗೊಂದಲ ನಿವಾರಿಸಿ ಲಿಂಗಾಯತ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಲು ಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ ಒತ್ತಾಯ



ಮೈಸೂರು, ಜು.11 (ಎಸ್‌ಪಿಎನ್)–ಸಮುದಾಯದ ಏಳಿಗೆಗೆ ಸಂವಿಧಾನದ ಹಕ್ಕುಗಳನ್ನು ಹೋರಾಟದ ಮೂಲಕ ಪಡೆದುಕೊಳ್ಳಲು ಯುವ ಪೀಳಿಗೆ ಮುಂದಾಗಬೇಕು ಎಂದು ಕೂಡಲ ಸಂಗಮದ ಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಮೈಸೂರು ಶ್ರೀ ಹೊಸಮಠದ ಆವರಣದ ನಟರಾಜ ಸಭಾಭವನದಲ್ಲಿ ಲಿಂಗಾಯತಗೌಡ ಮಹಾಸಭಾ ವತಿಯಿಂದ ಆಯೋಜಿಸಿದ್ದ ಗುರುವಂದನೆ ಹಾಗೂ ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಸ್ತುತ ಲಿಂಗಾಯತ ಸಮುದಾಯ ಪಂಚಮಸಾಲಿ, ಗೌಡ, ಮಲೆಗೌಡ, ದೀಕ್ಷಾ ಗೌಡ ಸೇರಿದಂತೆ ಇತರೆ ಉಪ ಪಂಗಡಗಳು ಕೃಷಿಯನ್ನು ನಂಬಿ ಜೀವನ ಕಟ್ಟಿಕೊಂಡಿವೆ. ಇತ್ತೀಚಿನ ದಿನಗಳಲ್ಲಿ ಕೃಷಿಯಲ್ಲಿ ಹೆಚ್ಚು ಆದಾಯವಿಲ್ಲದೆ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿವೆ. ಈ ಹಿಂದಿನ ಸರ್ಕಾರ ಮೀಸಲಾತಿ ವಿಚಾರದಲ್ಲಿ ನಮ್ಮ ಸಮುದಾಯಕ್ಕೆ ಮೂಗಿಗೆ ತುಪ್ಪ ಸವರಿದೆ. ಆದರೆ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಗೊಂದಲವನ್ನು ಸರಿಪಡಿಸಿ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.

ಲಿಂಗಾಯಿತ ಸಮಾಜದ ಇತರೆ ಒಳ ಪಂಗಡಗಳು ರಾಜ್ಯದಲ್ಲಿ ಅಧಿಕ ಜನಸಂಖ್ಯೆಯನ್ನು ಹೊಂದಿದೆ. ಈ ಸಮುದಾಯಕ್ಕೆ ಸಾಮಾಜಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕವಾಗಿ ಅನುಕೂಲವಾಗುವಂತೆ 2ಎ ಅಥವಾ 2ಡಿ ಪೈಕಿ ಯಾವುದಾದರೂ ಒಂದು ಪ್ರವರ್ಗದ ಅಡಿಯಲ್ಲಿ ಮೀಸಲಾತಿ ನೀಡಬೇಕು. ಈ ಹಿಂದಿನ ಸರ್ಕಾರ ನೀಡಿದ್ದ 2ಡಿ ಪ್ರವರ್ಗ ಸೃಜನೆಯನ್ನು ಪ್ರಶ್ನಿಸಿ ಕೆಲ ಸಂಘಟನೆಗಳು ಕೋರ್ಟ್ ಮೆಟ್ಟಿಲೇರಿವೆ. ಈ ಕಾನೂನಿನ ಗೊಂದಲವನ್ನು ಆದಷ್ಟು ಬೇಗ ಬಗೆಹರಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗಿದೆ ಎಂದರು.

ಪಂಚಮಸಾಲಿ ಮೀಸಲಾತಿ ಹೋರಾಟ ಕಳೆದ ಎರಡೂವರೆ ವರ್ಷದಿಂದ ರಾಜ್ಯಾದ್ಯಂತ ನಡೆದಿದೆ. ನಮ್ಮ ಹೋರಾಟ ದೇಶದ ಗಮನವನ್ನೂ ಕೂಡ ಸೆಳೆದಿದೆ. ಹರಿದು ಹಂಚಿ ಹೋಗಿದ್ದ ನಮ್ಮ ಸಮಾಜ ಮೀಸಲಾತಿ ಸಲುವಾಗಿ ಒಗ್ಗಟ್ಟಾಗಿತ್ತು. ಕಳೆದ ಸರ್ಕಾರ ನಮ್ಮ ಸಮುದಾಯವನ್ನು 2ಎಗೆ ಸೇರಿಸಿತ್ತು. ಆದ್ರೆ 2ಎ ಮೀಸಲಾತಿಗೆ ಹೈಕೋರ್ಟ್‌ನಲ್ಲಿ ತಡೆಯಾಜ್ಞೆಯಾಗಿದೆ. 2ಡಿ ಅನ್ನು ಮಾಡೋದಕ್ಕೆ ಮುಂದಾಗಿದ್ದರು. ಆ ನಿರ್ಧಾರ ಸುಪ್ರಿಂಕೋರ್ಟ್ ಅಂಗಳದಲ್ಲಿದೆ. ಕಾನೂನಿನ ಗೊಂದಲವನ್ನು ಸರಿಪಡಿಸಿ ಮೀಸಲಾತಿ ನೀಡಬೇಕು. ಮೀಸಲಾತಿ ವಿಚಾರದಲ್ಲಿ ನಾವ ಯಾವ ಸರ್ಕಾರದೊಂದಿಗೂ ರಾಜೀ ಮಾಡಿಕೊಳ್ಳುವುದಿಲ್ಲ. ನಮ್ಮ ಮಕ್ಕಳಿಗೆ ಮೀಸಲಾತಿ ಸಿಗುವವರೆಗೂ ಹೋರಾಟ ಮಾಡುತ್ತೇವೆ ಎಂದು ಘೋಷಿಸಿದರು.

ಯಾವ ಪ್ರವರ್ಗದಡಿ ಮೀಸಲಾತಿ ಕೊಡುತ್ತೀರಾ: ನೂತನ ಸರ್ಕಾರ ನಮ್ಮ ಸಮುದಾಯಕ್ಕೆ ಯಾವ ಪ್ರವರ್ಗದಡಿ ಮೀಸಲಾತಿ ನೀಡುತ್ತದೆ ಎಂದು ಮೊದಲು ನಿರ್ಧಾರ ಮಾಡಲಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದ ಸಂದರ್ಭದಲ್ಲಿ ಬಜೆಟ್ ಅಧಿವೇಶನದ ಬಳಿಕ ಕಾನೂನಿನ ಚೌಕಟ್ಟಿನಲ್ಲಿ ಮೀಸಲಾತಿ ಸಮಸ್ಯೆ ಬಗೆಹರಿಸುವುದಾಗಿ ಹೇಳಿದ್ದಾರೆ. ಹಾಗಾಗಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳ ಮಾತಿನ ಭರವಸೆ ಮೇರೆಗೆ ಕೆಲ ದಿನಗಳು ಕಾದು ನಂತರ ನಮ್ಮ ಮೀಸಲಾತಿ ಹೋರಾಟ ಮುಂದುವರೆಸುವುದಾಗಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ: ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಎಂ.ಎನ್.ರೋಹಿತ್, ಎನ್.ರಕ್ಷಾ, ಎನ್.ಸುಜನ್, ಬಿ.ಎಸ್.ಸೌಂದರ್ಯ, ಡಿ.ಚಂದ್ರಕಲಾ, ಸಿ.ವರ್ಷಿತಾ, ಎಸ್.ಧನ್ವಿನ್, ಎಂ.ಕುಮಾರ್, ಸಿ.ಲೇಖನ, ಎಸ್.ಎಲ್.ಅಮೂಲ್ಯ ಹಾಗೂ ಪಿಯುಸಿಯಲ್ಲಿ ಅತೀ ಅಂಕಗಳಿಸಿದ ವಿ.ಶಶಾಂಕ್, ಕೆ.ಜೆ. ಅನುಷಾ, ಎಸ್.ಸೃಷ್ಟಿ, ಎಂ.ಪೂಜ, ಎನ್.ಎಸ್. ಚಿನ್ನು, ಎಂ.ಮನುಕುಮಾರ್, ಎ.ಎನ್. ನಾಗಲಕ್ಷ್ಮೀ, ಸಿ.ಎನ್.ಗಗನ್, ಎಸ್.ಯಶಸ್ವಿನಿ, ಎಂ.ಐಶ್ವರ್ಯ, ಯು.ಬಿ. ಜಯಶ್ರೀ, ಜಿ.ಎಚ್. ಶಿವಾನಿ ಅವರನ್ನು ಅಭಿನಂದಿಸಲಾಯಿತು.

> **ಒಬಿಸಿ ಪಟ್ಟಿಗೆ ಸೇರ್ಪಡೆಗೆ ಆಗ್ರಹ**
>
> “ಕೇಂದ್ರ ಸರ್ಕಾರ ಒಬಿಸಿ ಮೀಸಲಾತಿ ಪಟ್ಟಿಯಲ್ಲಿ ನಮ್ಮ ರಾಜ್ಯದ ಲಿಂಗಾಯತ ಸಮಾಜದ ಕೆಲ ಒಳಪಂಗಡಗಳಿಗೆ ಮೀಸಲಾತಿ ಕಲ್ಪಿಸಿಲ್ಲ. ಈ ಮೀಸಲಾತಿ ಕಲ್ಪಿಸುವಂತೆ ಹಲವು ದಿನಗಳಿಂದ ನಮ್ಮ ಸಮುದಾಯದ ಹಕ್ಕೊತ್ತಾಯ ಆಗಿದೆ. ಈ ಹೋರಾಟವನ್ನು ಹಂತಹಂತವಾಗಿ ರೂಪಿಸಲು ನಾಡಿನ ಅನೇಕ ಮಠಾಧೀಶರು ಈಗಾಗಲೇ ಮಾಧ್ಯಮಗಳ ಮೂಲಕ ಘೋಷಣೆ ಮಾಡಿದ್ದಾರೆ. ಇದಕ್ಕೆ ಈ ಭಾಗದ ಯುವಕರು ಹೋರಾಟಕ್ಕೆ ಮುಂದಾಗಬೇಕು.
>
> –ಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ

ಕೂಡಲ ಸಂಗಮ ಮಠದ ಶ್ರೀ ಮೃತ್ಯುಂಜಯ ಸ್ವಾಮೀಜಿ ಮತ್ತು ಹೊಸಮಠ ಶ್ರೀ ಚಿದಾನಂದ ಸ್ವಾಮೀಜಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಲಿಂಗಾಯತಗೌಡ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್. ಶಿವರಾಜಪ್ಪ, ಲಿಂಗಾಯತಗೌಡ ಮಹಾಸಭಾ ಮಹಿಳಾ ಘಟಕ ಉಪಾಧ್ಯಕ್ಷೆ ವಿರೂಪಾಕ್ಷಮ್ಮ, ರಾಜ್ಯ ಕಾರ್ಯದರ್ಶಿ ಕೇಬಲ್ ಮಹೇಶ್, ನಿರ್ದೇಶಕರಾದ ಸೋಮಶೇಖರ್, ಅಭಿನವ್, ತಳೂರು ರಾಜು, ಯುವ ಘಟಕದ ಅಧ್ಯಕ್ಷ ಶಂಭು ಪಟೇಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ವಕೀಲರಾದ ಎಂ.ಪೂರ್ಣಿಮಾ, ನಗರಾಧ್ಯಕ್ಷ ಬಸವರಾಜೇಂದ್ರ ಸ್ವಾಮಿ, ಜಿಲ್ಲಾಧ್ಯಕ್ಷ ಕಣೇನೂರು ಜಗದೀಶ್, ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಕಾರ್ಯದರ್ಶಿ ಶರಣ ಮಹದೇವಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕರುಹಾಕಿ ಸಂಕಷ್ಟದಲ್ಲಿದ್ದ ಎಮ್ಮೆಗೆ ಯಶಸ್ವಿ ಚಿಕಿತ್ಸೆ

ಪಶುವೈದ್ಯೆ ಪರಿಶ್ರಮಕ್ಕೆ ವ್ಯಾಪಕ ಪ್ರಶಂಸೆ



ಮೈಸೂರು, ಜು.11 (ಎಸ್‌ಬಿಡಿ)– ಕರು ಹಾಕಿದ ಸಂದರ್ಭದಲ್ಲಿ ಗರ್ಭಕೋಶ ಹೊರಗೆ ಬಂದು ನರಳಾಡುತ್ತಿದ್ದ ಎಮ್ಮೆಗೆ ಪಶುವೈದ್ಯೆ ತುರ್ತು ಚಿಕಿತ್ಸೆ ನೀಡಿ ಪುನರ್ಜನ್ಮ ನೀಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಮೈಸೂರಿನ ಹಿನಕಲ್ ನಿವಾಸಿ ಮಂಜು ಅವರ ಎಮ್ಮೆಯನ್ನು ಕಾಪಾಡಿದ ಸ್ಥಳೀಯ ಪಶುವೈದ್ಯಾಧಿಕಾರಿ ಡಾ.ಎ.ವರಲಕ್ಷ್ಮಿ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಭಾರೀ ಪ್ರಶಂಸೆ ವ್ಯಕ್ತವಾಗುತ್ತಿದೆ.

ಮುರ್‍ರಾ ತಳಿಯ ಎಮ್ಮೆ ಕರುವಿಗೆ ಜನ್ಮ ನೀಡಿತ್ತು ಈ ವೇಳೆ ಅದರ ಗರ್ಭಕೋಶವೂ ಹೊರಗೆ ಬಂದು ನರಳಾಡುತ್ತಿತ್ತು. ಕೂಡಲೇ ಎಮ್ಮೆಯ ಪಾಲಕ ಮಂಜು, ಪಶುವೈದ್ಯಾಧಿಕಾರಿ ಡಾ.ವರಲಕ್ಷ್ಮಿ ಅವರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಧಾವಿಸಿದ ವೈದ್ಯರಿಗೆ ಚಿಕಿತ್ಸೆ ನೀಡುವುದು ಸವಾಲಾಗಿತ್ತು. ಎಮ್ಮೆಗೆ ಮೂಗುದಾರ ಇಲ್ಲದ ಕಾರಣ ಅದನ್ನು ನಿಯಂತ್ರಿಸಲು ಸಾಧ್ಯವಾಗದೆ ಹೆಣಗಾಡಬೇಕಾಯಿತು. ಆದರೆ ತುರ್ತು ಚಿಕಿತ್ಸೆ ನೀಡದಿದ್ದರೆ ಎಮ್ಮೆ ಬದುಕುಳಿಯುವುದಿಲ್ಲ ಎಂದು ಕ್ಲಿಷ್ಟಕರವಾದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿ, ಎರಡು ಗಂಟೆ ಸತತವಾಗಿ ಚಿಕಿತ್ಸೆ ನೀಡಿದ್ದಾರೆ. ಅಂತಿಮವಾಗಿ ಹೊರಗೆ ಬಂದಿದ್ದ ಗರ್ಭಕೋಶವನ್ನು ಜೋಪಾನವಾಗಿ ಸಹಜ ಸ್ಥಿತಿಗೆ ಸೇರಿಸಿ, ಮೂಕ ಪ್ರಾಣಿಯ ಜೀವ ಉಳಿಸಿದ್ದಾರೆ. ಗರ್ಭಕೋಶ ಹೊರ ಬಂದರೆ ಅದನ್ನು ಯಥಾ ಸ್ಥಿತಿಯಲ್ಲಿ ಇರಿಸುವುದು ಸುಲಭಸಾಧ್ಯವಲ್ಲ. ತಜ್ಞರಿಗೂ ಇದು ಸವಾಲಿನ ಕೆಲಸ. ಆದಾಗ್ಯೂ ಡಾ.ವರಲಕ್ಷ್ಮಿ, ಸತತ ಚಿಕಿತ್ಸೆ ಮೂಲಕ ಎಮ್ಮೆಗೆ ಮರುಜನ್ಮ ನೀಡಿದ್ದಾರೆ. ಸೂಕ್ತ ಚಿಕಿತ್ಸೆ ನೀಡಲಾಗಿದ್ದು, ಎಮ್ಮೆ ಆರೋಗ್ಯವಾಗಿದೆ ಎಂದು ಡಾ.ವರಲಕ್ಷ್ಮಿ ತಿಳಿಸಿದ್ದಾರೆ.

ಒಂದು ಜಿಲ್ಲೆ ಒಂದು ಕ್ರೀಡೆ ಯೋಜನೆ ಜಾರಿಗೆ ಚಿಂತನೆ

ಕ್ರೀಡಾ ಸಚಿವ ಸಚಿವ ಬಿ.ನಾಗೇಂದ್ರ ಇಂಗಿತ



ಬೆಂಗಳೂರು: ರಾಜ್ಯದಲ್ಲಿ ವಿವಿಧೆಡೆ ಸ್ಥಳೀಯವಾಗಿ ಪ್ರಸಿದ್ಧವಾಗಿರುವ ಕ್ರೀಡೆಗಳನ್ನು ಗುರುತಿಸಿ ಅವುಗಳಲ್ಲಿ ತೊಡಗಿಸಿಕೊಂಡಿರುವ ಕ್ರೀಡಾ ಪಟುಗಳನ್ನು ಗುರುತಿಸಿ ಸೂಕ್ತ ತರಬೇತಿ ನೀಡಿ ಸಶಕ್ತಗೊಳಿಸುವ ನಿಟ್ಟಿನಲ್ಲಿ "ಒಂದು ಜಿಲ್ಲೆ ಒಂದು ಕ್ರೀಡೆ" ಯೋಜನೆ ಜಾರಿಗೊಳಿಸಲು ಚಿಂತನೆ ನಡೆಸಲಾಗಿದೆ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ.ನಾಗೇಂದ್ರ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದೊಂದು ಪ್ರದೇಶದಲ್ಲಿ ಒಂದೊಂದು ಕ್ರೀಡೆಗಳು ಹೆಸರುವಾಸಿ. ವಿಜಯನಗರದಲ್ಲಿ ಕುಸ್ತಿ,ವಿಜಯಪುರದಲ್ಲಿ ಸೈಕ್ಲಿಂಗ್ ನಂತೆ ಎಲ್ಲ ಜಿಲ್ಲೆಗಳಲ್ಲಿಯೂ ಒಂದೊಂದು ಕ್ರೀಡೆಗಳು ಹೆಸರುವಾಸಿಯಾಗಿದ್ದು, ಆ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿರುವ ಪ್ರತಿಭಾವಂತ ಕ್ರೀಡಾ ಪಟುಗಳನ್ನು ಹೋಬಳಿ ಮಟ್ಟದಿಂದ ಜಿಲ್ಲಾಮಟ್ಟದವರೆಗೆ ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡಿ ಸನ್ನದ್ಧಗೊಳಿಸಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಡೀ ದೇಶದಲ್ಲಿಯೇ ಅತ್ಯುತ್ತಮವಾದ ಬಜೆಟ್ ಮಂಡಿಸಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ 5ಸಾವಿರ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಸಿಎಂ ಅವರು ಒದಗಿಸಿದ್ದು, ಸದರಿ ಅನುದಾನದ ಸದ್ಬಳಕೆ ಮಾಡಿಕೊಂಡು ಸಮಗ್ರ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕ್ರಿಯಾಯೋಜನೆಗಳನ್ನು ರೂಪಿಸಲಾಗುವುದು ಎಂದರು.

ಪರಿಶಿಷ್ಟ ಪಂಗಡ ಸಮುದಾಯಗಳ ಕಲ್ಯಾಣಕ್ಕೆ 2013ರಿಂದ ಇಲ್ಲಿಯವರೆಗೆ ಸಾವಿರಾರು ಕೋಟಿ ರೂ.ಗಳು ಖರ್ಚು ಮಾಡಲಾಗಿದ್ದು,ಸರಕಾರದ ಪ್ರಯೋಜನ ಪಡೆದುಕೊಂಡಿರುವ ಪರಿಶಿಷ್ಟ ಪಂಗಡದ ಫಲಾನುಭವಿಗಳ ಜೀವನಮಟ್ಟದಲ್ಲಿ ಸುಧಾರಣೆಯಾಗಿದೆಯೇ ಎಂಬುದರ ಕುರಿತು ಇಲಾಖೆಯಿಂದ ಮೌಲ್ಯಮಾಪನ ನಡೆಸಲಾಗುವುದು ಎಂದರು. ಬಜೆಟ್‌ನಲ್ಲಿ ಪರಿಶಿಷ್ಟ ಪಂಗಡ ಸಮುದಾಯದ ಕಲ್ಯಾಣಕ್ಕೆ 1588.23 ಕೋಟಿ ರೂ.ಪರಿಶಿಷ್ಟ ಪಂಗಡದ ಸಮುದಾಯದ ಕಲ್ಯಾಣಕ್ಕಾಗಿ ಈ ಬಾರಿಯ ಬಜೆಟ್ ನಲ್ಲಿ ಸಿಎಂ ಸಿದ್ದರಾಮಯ್ಯ ಅವರು 1588.23ಕೋಟಿ ರೂ.ಗಳನ್ನು ಒದಗಿಸಿದ್ದಾರೆ ಎಂದರು.

ಕ್ಯಾನ್ಸರ್ ಔಷಧಕ್ಕೆ ಜಿಎಸ್‌ಟಿ ವಿನಾಯ್ತಿ



ನವದೆಹಲಿ: ಸರಕು ಮತ್ತು ಸೇವಾ ತೆರಿಗೆ ಮಂಡಳಿಯ 50ನೇ ಸಭೆಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದ್ದು, ಹಲವು ವಸ್ತುಗಳ ತೆರಿಗೆಯಲ್ಲಿ ಭಾರೀ ಇಳಿಕೆ ಮಾಡಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ, ಬೇಯಿಸದ/ಕರಿಯದ ಸ್ನ್ಯಾಕ್ಸ್ ಪೊಟ್ಟಣದ ಮೇಲಿನ ತೆರಿಗೆಯ ಸ್ಲ್ಯಾಬ್ ಅನ್ನು ಶೇ.18ರಿಂದ ಶೇ. 5ಕ್ಕೆ ಇಳಿಕೆ ಮಾಡಲಾಗಿದೆ. ಕ್ಯಾನ್ಸರ್ ಔಷಧ'ಕ್ಕೆ ಜಿಎಸ್‌ಟಿಯಿಂದ ಸಂಪೂರ್ಣ ವಿನಾಯಿತಿ ಘೋಷಿಸಲಾಗಿದೆ. ಅದೇ ರೀತಿ, ಮೀನಿನ ಎಣ್ಣೆಯಿಂದ ತಯಾರಿಸಿದ ಪೇಸ್ಟ್, ಕೃತಕ ಆಭರಣ ತಯಾರಿಯಲ್ಲಿ ಬಳಸುವ ಜರಿ ದಾರದ ಮೇಲಿನ ಜಿಎಸ್‌ಟಿ ಸ್ಲ್ಯಾಬ್ ಅನ್ನೂ ಶೇ.18ರಿಂದ ಶೇ. 5ಕ್ಕೆ ಇಳಿಕೆ ಮಾಡಲಾಗಿದೆ. ಆದರೆ ಆನ್‌ಲೈನ್ ಗೇಮಿಂಗ್, ಕುದುರೆ ರೇಸ್ ಹಾಗೂ ಕ್ಯಾಸಿನೋಗಳ ಮೇಲಿನ ತೆರಿಗೆಯ ಸ್ಲ್ಯಾಬ್ ಅನ್ನು ಶೇ 28ಕ್ಕೆ ಹೆಚ್ಚಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದರು.

ಉತ್ತರ ಭಾರತ ಪ್ರವಾಸದಲ್ಲಿರುವ ಮೈಸೂರು ನವದಂಪತಿ ಬಗ್ಗೆ ಆತಂಕ

- **ಸ್ವಿಚ್ಡ್ ಆಫ್ ಆಗಿರುವ ಮೊಬೈಲ್‌ಗಳು**
- **ಕುಟುಂಬದವರಿಂದ ಸಂಪರ್ಕಕ್ಕೆ ಹರಸಾಹಸ**



ಮೈಸೂರು,ಜು.11(ಆರ್‌ಕೆ)–ನೆರೆಯಿಂದ ತತ್ತರಿಸಿರುವ ಉತ್ತರ ಭಾರತಕ್ಕೆ ತೆರಳಿದ್ದ ಮೈಸೂರಿನ ನವ ವಿವಾಹಿತ ದಂಪತಿ ಸಂಪರ್ಕಕ್ಕೆ ಲಭ್ಯವಾಗದಿರುವ ಕಾರಣ ಕುಟುಂಬವರು ಆತಂಕಕ್ಕೀಡಾಗಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದ ನರೇಶ್ ಜೈನ್ ಅವರ ಪುತ್ರ ಅಂಕುಶ್ ಪರ್ಮಾರ್ (28) ಹಾಗೂ ಹೆಬ್ಬಾಳು ಲೋಕನಾಯಕ ನಗರದ ಪ್ರಶಾಂತ್ ಭಟ್ಕಳ್ ಅವರ ಪುತ್ರಿ ನೇಹಾ ಭಟ್ಕಳ್(26) ಸಂಪರ್ಕಕ್ಕೆ ಲಭ್ಯವಾಗುತ್ತಿಲ್ಲ. ಅಂಕುಶ್ ಹಾಗೂ ನೇಹಾ ಪ್ರೀತಿಸಿ ವರ್ಷದ ಹಿಂದೆ ವಿವಾಹವಾಗಿದ್ದು, ಜೂ.1ರಂದು ಮೈಸೂರಿನಿಂದ ಉತ್ತರ ಭಾರತಕ್ಕೆ ಪ್ರವಾಸ ತೆರಳಿದ್ದರು. ಅಂಕುಶ್ ಸ್ನೇಹಿತ ನೆಲೆಸಿರುವ ತೋಶ್ ಪ್ರದೇಶಕ್ಕೆ ತೆರಳಿದ್ದ ದಂಪತಿ, ಮಂಗಳವಾರ ಮೈಸೂರಿಗೆ ವಾಪಸ್ಸಾಗಬೇಕಿತ್ತು. ಆದರೆ ಅವರು ಎಲ್ಲಿದ್ದಾರೆ ಎನ್ನುವುದು ತಿಳಿದುಬಂದಿಲ್ಲ.

ಕಳೆದ ಭಾನುವಾರ ಅಂಕುಶ್, ತಮ್ಮ ತಾಯಿಗೆ ಕರೆ ಮಾಡಿ ಮಾತನಾಡಿದ್ದರು. ನಂತರದಲ್ಲಿ ಇಬ್ಬರ ಮೊಬೈಲ್ ಸಂಪರ್ಕಕ್ಕೆ ಸಿಗುತ್ತಿಲ್ಲ. ಮೆಸೇಜ್ ಮಾಡಿದರೂ ರಿಪ್ಲೇ ಬರುತ್ತಿಲ್ಲ. ಇದರಿಂದ ಕುಟುಂಬದವರಲ್ಲಿ ಆತಂಕ ಮನೆ ಮಾಡಿದೆ. ಪ್ರವಾಹದಿಂದಾಗಿ ವಿದ್ಯುತ್ ಸಂಪರ್ಕವೂ ಇಲ್ಲದ ಕಾರಣ ಮೊಬೈಲ್ ಚಾರ್ಜ್ ಮಾಡಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಸ್ವಿಚ್ ಆಫ್ ಆಗಿರಬಹುದು. ಹಾಗಾಗಿ ಈ ಬಗ್ಗೆ ಜಿಲ್ಲಾಡಳಿತಕ್ಕೂ ಮಾಹಿತಿ ನೀಡಿಲ್ಲ ಎಂದು ದಂಪತಿಯ ಸಂಬಂಧಿಕರೊಬ್ಬರು ತಿಳಿಸಿದ್ದಾರೆ.

ಜು.15, 16, ಪತ್ರಕರ್ತರಿಗೆ ವಾರ್ಷಿಕ ಕ್ರೀಡಾಕೂಟ

ಮೈಸೂರು, ಜು.11 (ಎಂಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಪ್ರಸಕ್ತ ಸಾಲಿನ ಪತ್ರಿಕಾ ದಿನಾಚರಣೆ ಅಂಗವಾಗಿ ಜು.15 ಮತ್ತು 16ರಂದು ಪತ್ರಕರ್ತರು ಮತ್ತು ಕುಟುಂಬದವರಿಗೆ ಎರಡು ದಿನಗಳ ವಾರ್ಷಿಕ ಕ್ರೀಡಾಕೂಟವನ್ನು ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 8 ಗಂಟೆಗೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದು, ಮುಖ್ಯ ಅತಿಥಿಯಾಗಿ ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ಎಂ.ವೀಣಾ ಭಾಗವಹಿಸಲಿದ್ದಾರೆ. ಮೊದಲ ದಿನ ಪತ್ರಕರ್ತರಿಗೆ ಕ್ರಿಕೆಟ್ ಪಂದ್ಯಾವಳಿ ನಡೆಯಲಿದ್ದು, 2ನೇ ದಿನ(ಜು.16) ಬೆಳಗ್ಗೆ 6 ಗಂಟೆಗೆ ದೈಹಿಕ ಶಿಕ್ಷಣ ವಿಭಾಗದ ಒಳಾಂಗಣದಲ್ಲಿ ಪತ್ರಕರ್ತರು ಹಾಗೂ 16 ವರ್ಷ ಮೇಲ್ಪಟ್ಟ ಅವರ ಮಕ್ಕಳಿಗೆ ಷಟಲ್ ಬ್ಯಾಡ್ಮಿಂಟನ್(ಡಬಲ್) ಪಂದ್ಯಾವಳಿ ನಡೆಯಲಿದೆ. ನಂತರ 8 ಗಂಟೆಯಿಂದ ಪತ್ರಕರ್ತರ ಕುಟುಂಬದ ಮಕ್ಕಳು, ಮಹಿಳೆಯರು ಹಾಗೂ ಪುರುಷರ ವಿವಿಧ ವಯೋಮಾನದವರಿಗೆ ಓಟದ ಸ್ಪರ್ಧೆ, ಗುಂಡು ಎಸೆತ, ಗೋಣಿ ಚೀಲದ ಓಟ, ಲೆಮೆನ್ ಅಂಡ್ ಸ್ಪೂನ್ ಮತ್ತಿತರ ಸ್ಪರ್ಧೆಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದ್ದು, ಮೇಯರ್ ಶಿವಕುಮಾರ್, ಕೌಟಿಲ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಟಿ.ಬಾಬು ಹಾಗೂ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ(ಪ್ರಭಾರ) ಪ್ರೊ.ಸಿ.ವೆಂಕಟೇಶ್ ಭಾಗವಹಿಸಲಿದ್ದಾರೆ. ಆಸಕ್ತರು ವಿಶ್ವಾಸ್ (ಮೊ.ನಂ. 94824 40656)ಅವರಲ್ಲಿ ಜು.14ರೊಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ವಿವಿಧ ಕ್ಷೇತ್ರದ ಸಾಧಕರಿಗೆ ನಾಲ್ವಡಿ ಪ್ರಶಸ್ತಿ ಪ್ರದಾನ



ಮೈಸೂರು,ಜು.11(ಎಂಟಿವೈ)– ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವದ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 12 ಮಂದಿಗೆ 'ನಾಲ್ವಡಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರಿನ ನಮನ ಕಲಾಮಂಟಪದಲ್ಲಿ ಮೈಸೂರು ಕನ್ನಡ ವೇದಿಕೆ ಮಂಗಳವಾರ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸಾಧಕರಿಗೆ ಎಸಿಪಿ ಗಂಗಾಧರಸ್ವಾಮಿ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಎಸಿಪಿ ಗಂಗಾಧರಸ್ವಾಮಿ ಮಾತನಾಡಿ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ, ಪ್ರಶಸ್ತಿ ನೀಡಿ ಗೌರವಿಸಿರುವುದು ಶ್ಲಾಘನೀಯ. ಇದರಿಂದ ಪ್ರಶಸ್ತಿ ಪಡೆದವರಿಗೆ ಇನ್ನಷ್ಟು ಜವಾಬ್ದಾರಿ ಹೆಚ್ಚುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲೂ ಮೈಸೂರಿನ ಶ್ರೇಯೋಭಿವೃದ್ಧಿಗೆ ಎಲ್ಲರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ನಾಲ್ವಡಿ ಪ್ರಶಸ್ತಿ ಸ್ವೀಕರಿಸಿದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ರೇಖಾ ಅರುಣ್ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರು ಸುಸಜ್ಜಿತ ನಗರವಾಗಿ ಬೆಳೆಯಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ. ಶಿಕ್ಷಣ, ಆರೋಗ್ಯ, ನೀರಾವರಿ, ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಅವರು ನೀಡಿರುವ ಕೊಡುಗೆ ಅಪಾರ. ತಮ್ಮ ಆಡಳಿತಾವಧಿಯಲ್ಲಿ ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು ಸ್ಥಾಪಿಸಿದರು. ಆರೋಗ್ಯ ಸೇವೆ ಒದಗಿಸಲು ಕೆ.ಆರ್. ಆಸ್ಪತ್ರೆ ಸೇರಿದಂತೆ ಇನ್ನಿತರ ಆಸ್ಪತ್ರೆ ಕಟ್ಟಿಸಿದರು. ಕೃಷ್ಣರಾಜ ಜಲಾಶಯ ನಿರ್ಮಾಣಕ್ಕೆ ಮೈಸೂರು ರಾಜಮನೆತನ ನೀಡಿದ ಕೊಡುಗೆ ಸ್ಮರಣೀಯ. ಈ ಹಿನ್ನೆಲೆಯಲ್ಲಿ ನಾಲ್ವಡಿ ಅವರ ಹೆಸರಲ್ಲಿ ಪ್ರಶಸ್ತಿ ಸ್ವೀಕರಿಸಿದ್ದು, ಸಂತೋಷವನ್ನುಂಟು ಮಾಡಿದೆ ಎಂದರು.

ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮಾತನಾಡಿ, ವೇದಿಕೆ ವತಿಯಿಂದ ಪ್ರತಿವರ್ಷವೂ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸುತ್ತಾ ಬಂದಿದ್ದೇವೆ. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಾ ತೆರೆಮರೆ ಕಾಯಿಯಂತೆ ಕೆಲಸ ಮಾಡುತ್ತಿರುವವರನ್ನು ಗುರುತಿಸಿ 'ನಾಲ್ವಡಿ ಪ್ರಶಸ್ತಿ' ಪ್ರದಾನ ಮಾಡಲಾಗಿದೆ ಎಂದರು.

ಪ್ರಶಸ್ತಿ ಪುರಸ್ಕೃತರು: ಅನಂತ ಪದ್ಮನಾಭ (ಶಿಕ್ಷಕ), ಡಾ.ರೇಖಾ ಅರುಣ್ (ವೈದ್ಯೆ), ಆರ್.ಆನಂದ್ (ಗಾಯಕ), ಆದಿಲ್ ಪಾಷಾ (ಸಾಹಿತ್ಯ), ಡಾ.ಸೌಗಂಧಿಕ ಎ.ಜೋಯಿಸ್ (ಸಾಹಿತ್ಯ), ಗೌರಿ ಓಸ್ತವಾಲ್ (ಭರತ ನಾಟ್ಯ), ಡಾ.ರೇಖಾ ಮನಶಾಂತಿ (ಮನೋವಿಜ್ಞಾನಿ), ಅರುಣ್‌ರಾವ್ (ವಕೀಲ), ಗುರುರಾಜ (ಗಾಯಕ), ಗಣೇಶ್ (ಪತ್ರಿಕಾ ಛಾಯಾಗ್ರಾಹಕ), ಬಿ.ಆರ್.ವಿಜಯಶ್ರೀ (ಗಾಯನ), ರಮೇಶ್ ಬಾಳಪ್ಪ (ಶಿಕ್ಷಣ).

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ಶ್ರೀಷಾ ಭಟ್, ಪ್ರಸೂತಿ ತಜ್ಞೆ ಡಾ.ರೇಖಾ ಅರುಣ್, ನಾಲಾಬೀದಿ ರವಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸೆ.8ರಿಂದ 12ರವರೆಗೆ ಅಬು ಪರ್ವತದಲ್ಲಿ ರಾಜಕೀಯ ನೇತಾರರ ಸಮಾವೇಶ

ಮೈಸೂರು,ಜು.11–ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯಾಲಯ ಅಬು ಪರ್ವತದ ಆನಂದ ಸರೋವರದಲ್ಲಿ ಸೆ.8ರಿಂದ 12ರವರೆಗೆ ರಾಜಕೀಯ ನೇತಾರರ ಸಮಾವೇಶ ಹಾಗೂ ಪ್ರೇರಣಾದಾಯಕ ನೇತೃತ್ವಕ್ಕಾಗಿ ಪರಮಾತ್ಮನ ಶಕ್ತಿ ಮತ್ತು ಆಶೀರ್ವಾದಗಳ ಸ್ವೀಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜೀ ಹಾಗೂ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಮೈಸೂರು, ಹಾಸನ, ಕೊಡಗು, ಮಂಡ್ಯ, ಚಾಮರಾಜನಗರದಿಂದ 100 ಜನರು ಭಾಗವಹಿಸಬಹುದಾಗಿದ್ದು, ರಾಜಕಾರಣಿಗಳು, ಹಾಲಿ, ಮಾಜಿ ಎಂಎಲ್‌ಎ, ಎಂಪಿಗಳು, ವಿಧಾನ ಪರಿಷತ್ ಸದಸ್ಯರು, ಜಿಪಂ, ತಾಪಂ, ನಗರಸಭೆ ಸದಸ್ಯರು, ರಾಜಕೀಯ ತಜ್ಞರು ಹಿತೈಷಿಗಳು ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9880283752, 9141837082, 7899820430 ಸಂಪರ್ಕಿಸುವಂತೆ ಕೋರಲಾಗಿದೆ.

ಮೈಸೂರು ಮಿತ್ರ ಬುಧವಾರ 12 ಜುಲೈ 2023

ಸಚಿವ ಚಲುವರಾಯಸ್ವಾಮಿ ತವರು ನಾಗಮಂಗಲ ಆಸ್ಪತ್ರೆಯಲ್ಲಿ

ಒಳರೋಗಿಯ ಒಂದೊತ್ತಿನ ಊಟ 92 ರೂ...!

ವಿಷಯ ಕೇಳಿ ದಂಗಾದ ಡಿಸಿ ಕುಮಾರ್: ತನಿಖೆಗೆ ಆದೇಶ



ನಾಗಮಂಗಲ, ಜು.11– ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತವರು ನಾಗಮಂಗಲ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಯ ಒಂದೊತ್ತಿನ ಊಟ (ಅನ್ನ- ಸಾಂಬಾರ್)ಕ್ಕೆ ಬರೋಬ್ಬರಿ 92 ರೂ. ಬಿಲ್ ಮಾಡಲಾಗುತ್ತಿದೆ. ಅನ್ನ-ಸಾಂಬಾರ್ ಬಿಲ್ ಕೇಳಿ ಸ್ವತಃ ಜಿಲ್ಲಾಧಿಕಾರಿ ಡಾ.ಕುಮಾರ್ ದಂಗಾದ ಘಟನೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಗಳವಾರ ನಡೆದಿದೆ.

ತಾಲೂಕು ಆಡಳಿತವನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ತಾಲೂಕು ಕೇಂದ್ರ ಸ್ಥಾನದಲ್ಲಿರುವ ವಿವಿಧ ಇಲಾಖೆಗಳಿಗೆ ನೂತನ ಜಿಲ್ಲಾಧಿಕಾರಿ ಡಾ.ಕುಮಾರ್ ದಿಢೀರ್ ಭೇಟಿ ನೀಡಿದ ವೇಳೆ ಈ ಅಕ್ರಮ ಬೆಳಕಿಗೆ ಬಂದಿದೆ. ರೋಗಿಗಳ ಕುಂದು-ಕೊರತೆ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು, ಆಸ್ಪತ್ರೆ ಆಡಳಿತ ವರ್ಗದವರಿಂದ ಮಾಹಿತಿ ಪಡೆಯುವಾಗ ರೋಗಿಗಳಿಗೆ ವಿತರಿಸುವ ಅನ್ನ-ಸಾಂಬಾರ್‌ಗೆ 92 ರೂ.ಗಳು ಪಾವತಿ ಮಾಡುತ್ತಿರುವ ಅಂಶ ಬೆಳಕಿಗೆ ಬಂದಿದ್ದು, ಡಿಸಿ ತೀವ್ರ ಅಸಮಾಧಾನಗೊಂಡು ಆಸ್ಪತ್ರೆ ಆಡಳಿತಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ 10 ರೂಪಾಯಿಗೆ ಉತ್ತಮ ಊಟ ದೊರೆಯುತ್ತದೆ. ನೀವು ಹೇಗೆ ಅನ್ನ ಸಾಂಬಾರಿಗೆ ಮಾತ್ರ 92 ರೂ. ಬಿಲ್ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಲು ಆಸ್ಪತ್ರೆ ಅಧಿಕಾರಿಗಳು ತಡವರಿಸಿದರು. ತಕ್ಷಣ ಈ ಸಂಬಂಧ ಸಂಪೂರ್ಣ ತನಿಖೆ ನಡೆಸಿ ಸಮಗ್ರ ಮಾಹಿತಿ ನೀಡುವಂತೆ ತಹಸೀಲ್ದಾರ್ ನಯೀಂ ಉನ್ನಿಸ್ ಅವರಿಗೆ ಆದೇಶ ನೀಡಿದರು.

ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟಿನ್‌ಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿ ಕುಮಾರ್, ಕಂಡು ಬಂದ ಸಣ್ಣ-ಪುಟ್ಟ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ತಾಕೀತು ಮಾಡಿದರು. ಪಟ್ಟಣದ ಸಂತೆ ಬೀದಿಯಲ್ಲಿ ಖಾಸಗಿ ಕಟ್ಟಡದಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿ ಪರಿಶೀಲಿಸಿ ಸಿಸಿ ಕ್ಯಾಮರಾ ಅಳವಡಿಸುವಂತೆ ಅಧಿಕಾರಿ ಮಹೇಶ್‌ಗೆ ಸೂಚನೆ ನೀಡಿದರು.


ಮಿನಿ ವಿಧಾನಸೌಧ ಸಭಾಂಗಣದಲ್ಲಿ ಕಂದಾಯ, ಭೂ ಮಾಪನ, ಉಪ ಖಜಾನೆ, ಶಿಶು ಅಭಿವೃದ್ಧಿ ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಭೆ ನಡೆಸಿ, ರೈತಾಪಿ ಜನರು ಸೇರಿದಂತೆ ಸಾರ್ವಜನಿಕರ ಕೆಲಸಗಳಿಗೆ ಒತ್ತು ನೀಡುವಂತೆ ಮತ್ತು ಭ್ರಷ್ಟ ಮುಕ್ತ ಕರ್ತವ್ಯ ನಿರ್ವಹಿಸುವಂತೆ ಆದೇಶ ನೀಡಿದರು. ಈ ವೇಳೆ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕ್ಯಾತನಹಳ್ಳಿ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪಾಂಡವಪುರ, ಜು.11– ತಾಲೂಕಿನ ಕ್ಯಾತನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎನ್.ಶ್ರೀನಿವಾಸ್, ಉಪಾಧ್ಯಕ್ಷರಾಗಿ ಕೆ.ಪಿ.ಯುವರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಈ ಹಿಂದಿನ ಅಧ್ಯಕ್ಷ ಸಿ.ಎಂ.ಪುಟ್ಟಮಹದೇವು, ಉಪಾಧ್ಯಕ್ಷ ಕೆ.ಪಿ.ಮಹದೇವೇಗೌಡ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಿಗದಿಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಎನ್.ಶ್ರೀನಿವಾಸ್, ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಪಿ.ಯುವರಾಜ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹೇಮಲತಾ ಘೋಷಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸಂಘದ ಎಲ್ಲಾ ನಿರ್ದೇಶಕರು, ಮುಖಂಡರು, ಬೆಂಬಲಿಗರು ಅಭಿನಂದಿಸಿದರು. ಈ ವೇಳೆ ಮಾಜಿ ಅಧ್ಯಕ್ಷ ಸಿ.ಎಂ.ಪುಟ್ಟಮಾದೇವು, ಮಾಜಿ ಉಪಾಧ್ಯಕ್ಷ ಕೆ.ಪಿ.ಮಹದೇವೇಗೌಡ, ದಯಾನಂದ್, ಕೆ.ಉಮೇಶ್, ಪೂರ್ಣಿಮಾ, ಟಿ.ಎನ್.ಲೀಲಾವತಿ, ನಂಜುಂಡಶೆಟ್ಟಿ, ಎಲ್.ವಿಶ್ವನಾಥ್, ಸಿ.ಎಸ್.ಯಶವಂತ್, ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ತಾಲೂಕು ಅಧ್ಯಕ್ಷ ಪಿ.ನಾಗರಾಜು, ರಾಮದಾಸ್, ಗೌಡೇಗೌಡ, ಬಿ.ಟಿ.ಶಿವಣ್ಣ, ಹೆಚ್.ಎಲ್.ಪ್ರಕಾಶ್, ರವಿಕುಮಾರ್, ಮಂಜುನಾಥ್, ರಘು, ಕೆ.ಎಂ. ಕೇಶವಮೂರ್ತಿ ಸೇರಿದಂತೆ ಹಲವರಿದ್ದರು.



ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣ

ಸಿಐಡಿಯಿಂದ ಮಾಹಿತಿ ಸಂಗ್ರಹ



ನಾಗಮಂಗಲ, ಜು.11– ಕೆಎಸ್‌ಆರ್‌ಟಿಸಿ ಬಸ್ ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗಮಂಗಲಕ್ಕೆ ಸಿಐಡಿ ಐಜಿಪಿ ಪ್ರವೀಣ್ ಮಧುಕರ್ ಪವಾರ್ ನೇತೃತ್ವದ ತನಿಖಾ ತಂಡ ಮಂಗಳವಾರ ಆಗಮಿಸಿ ತನಿಖೆ ಆರಂಭಿಸಿದೆ.

ಜಗದೀಶ್ ಆತ್ಮಹತ್ಯೆ ಯತ್ನಕ್ಕೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಮುಖಂಡರು ಆರೋಪಿಸಿದ್ದರು. ಈ ಬಗ್ಗೆ ಸದನದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಚಲುವರಾಯಸ್ವಾಮಿ ನಡುವೆ ವಾಗ್ಯುದ್ಧವೇ ನಡೆದಿತ್ತು. ಸಿಐಡಿ ತನಿಖೆಗೆ ಮಾಜಿ ಸಿಎಂ ಕುಮಾರಸ್ವಾಮಿ ಸೇರಿದಂತೆ ವಿಪಕ್ಷಗಳು ಒತ್ತಾಯಿಸಿದ್ದವು. ಈ ನಿಟ್ಟಿನಲ್ಲಿ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿತ್ತು.

ಸರ್ಕಾರದ ಆದೇಶದನ್ವಯ ಸಿಐಡಿ ಐಜಿಪಿ ಪ್ರವೀಣ್ ಮಧುಕರ್ ಪವಾರ್ ನೇತೃತ್ವದ ತಂಡ ಮೈಸೂರಿನ ಮಣಿಪಾಲ್ ಮತ್ತು ನಾಗಮಂಗಲ ತಾಲೂಕಿನ ಬಿ.ಜಿ.ನಗರದ ಏಮ್ಸ್ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಗತ್ಯ ಮಾಹಿತಿ ಸಂಗ್ರಹ ಮಾಡಿದರು.

ನಾಗಮಂಗಲದ ಕೆಎಸ್‌ಆರ್‌ಟಿಸಿ ಬಸ್ ಡಿಪೋ, ಸಾರ್ವಜನಿಕ ಆಸ್ಪತ್ರೆ, ಕ್ರಿಮಿನಾಶಕ ಔಷಧಿ ಮಾರಾಟ ಮಾಡುವ ಆಗ್ರೋ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹ ಮಾಡುವ ಜೊತೆಗೆ ಆ ದಿನದ ಸಿಸಿ ಟಿವಿ ದೃಶ್ಯ ಸಂಗ್ರಹಿಸಿದೆ. ರೋಗಿಯನ್ನು ಬಿ.ಜಿ.ನಗರದ ಆದಿಚುಂಚನಗಿರಿ ಆಸ್ಪತ್ರೆಯಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಸಾಗಿಸುವಾಗ ಆಂಬುಲೆನ್ಸ್ ವಾಹನವನ್ನು ಮಾಜಿ ಶಾಸಕ ಸುರೇಶ್‌ಗೌಡ ತಡೆದು ನಿಲ್ಲಿಸಿದ್ದರು ಎಂದು ಹೇಳಲಾಗುತ್ತಿರುವ ನಾಗಮಂಗಲ ಪಟ್ಟಣದ ಟಿ.ಬಿ.ಬಡಾವಣೆಯ ಬಿಜಿಎಸ್ ವೃತ್ತದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಈ ಮೊದಲು ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ರೋಗಿ ಜಗದೀಶ್ ಆರೋಗ್ಯ ವಿಚಾರಿಸಿದ ನಂತರ ಜಗದೀಶ್ ಪತ್ನಿ ಪವನ ಕುಮಾರಿಯೊಂದಿಗೆ ಮಾತನಾಡುವ ಮೂಲಕ ತನಿಖೆ ವರದಿಗೆ ಅಗತ್ಯ ಮಾಹಿತಿ ಕಲೆ ಹಾಕಿದ್ದಾರೆ ಎಂದು ತಿಳಿದು ಬಂದಿದೆ. ಇವರ ಜೊತೆಯಲ್ಲಿ ಡಿವೈಎಸ್‌ಪಿ ಲಕ್ಷ್ಮಿನಾರಾಯಣ್ ಪ್ರಸಾದ್, ವೃತ್ತ ನಿರೀಕ್ಷಕ ನಿರಂಜನ್, ಪಟ್ಟಣ ಠಾಣೆ ಸಬ್ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಹಾಜರಿದ್ದರು.

ಚಾಲಕ ಜಗದೀಶ್ ವಿಷ ಕುಡಿಯುವ ಮುನ್ನ ಬರೆದಿಟ್ಟಿದ್ದ ಎನ್ನಲಾಗಿರುವ ಡೆತ್‌ನೋಟ್‌ನ ಸಾಕ್ಷಿಯೊಂದಿಗೆ ಸದನದಲ್ಲಿ ಸಚಿವ ಚಲುವರಾಯಸ್ವಾಮಿ ರಾಜೀನಾಮೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದರು. ಚಾಲಕನ ಆತ್ಮಹತ್ಯೆ ಪ್ರಯತ್ನದ ಪ್ರಕರಣದಲ್ಲಿ ನನ್ನ ಯಾವುದೇ ಪಾತ್ರವಿಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ತೆರಳುವಾಗ ತುರ್ತು ವಾಹನ ತಡೆಯುವ ಮೂಲಕ ಮಾಜಿ ಶಾಸಕರು ರೋಗಿಯ ಆರೋಗ್ಯದ ಜೊತೆ ಚೆಲ್ಲಾಟವಾಡಿದ್ದಾರೆ ಎಂದು ಚಲುವರಾಯಸ್ವಾಮಿ ಆರೋಪಿಸಿದ್ದರು. ಈ ಎಲ್ಲಾ ಬೆಳವಣಿಗೆಯ ನಡುವೆ ಆರೋಪ ಪ್ರತ್ಯಾರೋಪಗಳ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ ರಾಜಕೀಯ ತಿರುವಿನೊಂದಿಗೆ ಮಹತ್ತರ ಘಟ್ಟ ತಲುಪಿರುವ ಈ ಪ್ರಕರಣ ಸಿಐಡಿ ತನಿಖೆ ಅಂತಿಮ ವರದಿ ಮತ್ತು ರೋಗಿ ಜಗದೀಶ್ ಗುಣಮುಖವಾದ ನಂತರದ ಬೆಳವಣಿಗೆಯಿಂದ ಬಹಿರಂಗವಾಗಬೇಕಿದೆ.

ಸುರೇಶ್‌ಗೌಡ ಆಂಬುಲೆನ್ಸ್ ತಡೆದ ವೀಡಿಯೋ ವೈರಲ್

ಚಾಲಕ ಜಗದೀಶ್‌ನನ್ನು ನಾಗಮಂಗಲದಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯುವಾಗ ನಾಗಮಂಗಲ ಪಟ್ಟಣದ ಟಿ.ಬಿ.ವೃತ್ತದಲ್ಲಿ ಜು.6ರ ಮಧ್ಯರಾತ್ರಿ 1ಗಂಟೆ ಸಮಯದಲ್ಲಿ ಮಾಜಿ ಶಾಸಕ ಸುರೇಶ್‌ಗೌಡ ಅವರು ಆಂಬುಲೆನ್ಸ್ ಅಡ್ಡಗಟ್ಟಿದ್ದಾರೆ ಎಂಬ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ ಜಗದೀಶ್‌ನನ್ನು ಬಿಜಿಎಸ್ ಆಸ್ಪತ್ರೆಯಿಂದ ಮೈಸೂರಿಗೆ ರವಾನೆ ಮಾಡುವಾಗ ಆಂಬುಲೆನ್ಸ್ ಅನ್ನು ಮಾಜಿ ಶಾಸಕ ಸುರೇಶ್‌ಗೌಡ ತಡೆದರು ಎಂಬ ಆರೋಪವನ್ನು ಕಾಂಗ್ರೆಸ್ ಮಾಡುತ್ತಿದ್ದು, ಈ ಬಗ್ಗೆ ಅಂದು ಚಲುವರಾಯಸ್ವಾಮಿ ಸಹ ಜಗದೀಶ್‌ನನ್ನು ಬದುಕಿಸುವ ಉದ್ದೇಶ ಸುರೇಶ್‌ಗೌಡರಿಗೆ ಇರಲಿಲ್ಲ ಎಂದು ಆರೋಪಿಸಿದ್ದರು.

ಇದೀಗ ಆಂಬುಲೆನ್ಸ್ ಅಡ್ಡಗಟ್ಟುವ ಸಿಸಿಟಿವಿ ದೃಶ್ಯ ಪತ್ತೆಯಾಗಿದ್ದು, ಮಾಜಿ ಶಾಸಕ ಸುರೇಶ್‌ಗೌಡ ಹಾಗೂ ಬೆಂಬಲಿಗರು ಆಂಬುಲೆನ್ಸ್ ಅಡ್ಡಗಟ್ಟುವ ದೃಶ್ಯ ವೈರಲ್ ಆಗಿದೆ. ಅಂದು ಆಂಬುಲೆನ್ಸ್ ನಿಲ್ಲಿಸಿ ಮಾತನಾಡಿಸಿರುವ ಸುರೇಶ್‌ಗೌಡ, ಯಾವ ವಿಚಾರ ಪ್ರಸ್ತಾಪ ಮಾಡಿದ್ದಾರೆ ಎಂದು ತಿಳಿದು ಬಂದಿಲ್ಲ. ಬಳಿಕ ಮೈಸೂರು ಕಡೆ ತೆರಳಿರುವ ಆಂಬುಲೆನ್ಸ್ ವೀಡಿಯೋ ಸಿಸಿ ಟಿವಿ ದೃಶ್ಯ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಜೆಡಿಎಸ್‌ನಿಂದಲೂ ವೀಡಿಯೋ ಬಿಡುಗಡೆ: ಸಿ.ಸಿ.ಟಿವಿ ವೈರಲ್ ಬಳಿಕ ಜೆಡಿಎಸ್‌ನಿಂದಲೂ ವೀಡಿಯೋ ಬಿಡುಗಡೆ ಆಗಿದ್ದು, ಆಂಬುಲೆನ್ಸ್ ನಿಲ್ಲಿಸಿದ ಬಳಿಕ ಸುರೇಶ್‌ಗೌಡ ಆರೋಗ್ಯ ವಿಚಾರಿಸಿರುವ ವೀಡಿಯೋ ಬಿಡುಗಡೆಯಾಗಿದ್ದು, 'ಎಲ್ಲಿಗೆ ಕರೆದುಕೊಂಡು ಹೋಗ್ತಾ ಇದೀರಾ? ಬಿಜಿಎಸ್‌ನಲ್ಲಿ ಚಿಕಿತ್ಸೆ ಕೊಡೋಕೆ ಆಗಲ್ವಾ, ಮಣಿಪಾಲ್‌ಗೆ ಕರೆದುಕೊಂಡು ಹೋಗ್ತಾ ಇದೀರಾ. ಸರಿ ಹೋಗಿ' ಎಂದಿರುವ ಸುರೇಶ್‌ಗೌಡ ವೀಡಿಯೋ ಸಹ ರಿಲೀಸ್ ಆಗಿದೆ.

ಗಾಣಿಗರ ಅಭಿವೃದ್ಧಿ ನಿಗಮಕ್ಕೆ 100 ಕೋಟಿ ಅನುದಾನಕ್ಕೆ ಒತ್ತಾಯ

ಕೆ.ಆರ್.ಪೇಟೆ, ಜು.11– ರಾಜ್ಯದಲ್ಲಿ 50ರಿಂದ 60 ಲಕ್ಷ ಜನಸಂಖ್ಯೆ ಹೊಂದಿರುವ ಗಾಣಿಗ ಸಮುದಾಯ ಅಭಿವೃದ್ಧಿಯಲ್ಲಿ ಹಿಂದೆ ಉಳಿದಿದೆ ಈ ನಿಟ್ಟಿನಲ್ಲಿ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಸರ್ಕಾರ ಕನಿಷ್ಠ 100 ಕೋಟಿ ರೂ. ಅನುದಾನ ನೀಡುವಂತೆ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ರಾಜ್ಯಾಧ್ಯಕ್ಷ ಆನಂದ್ ಒತ್ತಾಯಿಸಿದರು.



ತಾಲೂಕಿನ ಬೂಕನಕೆರೆ ಗ್ರಾಮದ ಶ್ರೀಲಕ್ಷ್ಮೀದೇವಿ ದೇವಾಲಯದ ಆವರಣ ಹಾಗೂ ಕೆ.ಆರ್.ನಗರದ ಮಾರಿಗೌಡನಹಳ್ಳಿಯಲ್ಲಿ ನಡೆದ ಕರ್ನಾಟಕ ರಾಜ್ಯ ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ಸಂಘಟನೆಯ ತಾಲೂಕು ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಗಾಣಿಗ ಸಮುದಾಯದ ಅಭಿವೃದ್ಧಿ ಹಿತದೃಷ್ಟಿಯಿಂದ ಈ ಹಿಂದಿನ ಬಿಜೆಪಿ ಸರ್ಕಾರ ನಮ್ಮ ಸಮುದಾಯಕ್ಕೆ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಗಾಣಿಗರ ಅಭಿವೃದ್ಧಿ ನಿಗಮ ಸ್ಥಾಪಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ನಿಗಮಕ್ಕೆ ಅನುದಾನ ನೀಡದಿರುವುದು ಸಮುದಾಯದ ಅಸಮಾಧಾನಕ್ಕೆ ಕಾರಣವಾಗಿದೆ. ಹೀಗಾಗಿ ಕೂಡಲೇ ಮುಖ್ಯಮಂತ್ರಿಗಳು ಗಾಣಿಗರ ಅಭಿವೃದ್ಧಿ ನಿಗಮಕ್ಕೆ 100 ಕೋಟಿ ಅನುದಾನ ನೀಡುವ ಮೂಲಕ ತೀರ ಹಿಂದುಳಿದಿರುವ ಸಮುದಾಯದ ಅಭಿವೃದ್ಧಿಗೆ ಶ್ರಮಿಸಬೇಕು. ಇಲ್ಲದಿದ್ದರೆ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸುವರ್ಣ ಕರ್ನಾಟಕ ಗಾಣಿಗ ಮಹಾಸಭಾ ಜಿಲ್ಲಾಧ್ಯಕ್ಷ ಬೆಳಗೊಳ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಗಾಣಿಗ ಸಮುದಾಯ ಹಿಂದುಳಿದಿದೆ. ಸಮುದಾಯದ ಜನ ರಾಜ್ಯಾದ್ಯಂತ ಇದ್ದು, ಅನೇಕ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿದ್ದಾರೆ. ಇಂತಹ ಹಿಂದುಳಿದ ಸಮುದಾಯಕ್ಕೆ ಸರ್ಕಾರ ಕನಿಷ್ಠ 100 ಕೋಟಿ ಅನುದಾನ ಮೀಸಲಿಡಬೇಕು. ಹಿಂದುಳಿದ ವರ್ಗ ಹಾಗೂ ಶೋಷಿತ ಸಮುದಾಯಗಳ ನಾಯಕ ಎನಿಸಿಕೊಂಡಿರುವ ಸಿದ್ದರಾಮಯ್ಯ ಅವರು ಗಾಣಿಗ ಸಮುದಾಯವನ್ನು ಪರಿಗಣಿಸಬೇಕೆಂದು ಮನವಿ ಮಾಡಿದರು.

ಕೆ.ಆರ್.ಪೇಟೆ ಸಭೆಯ ಬಳಿಕ ಕೆ.ಆರ್.ನಗರದ ಮಾರಿಗೌಡನಹಳ್ಳಿ ಗ್ರಾಮದಲ್ಲಿ ಸಮುದಾಯದ ಪದಾಧಿಕಾರಿಗಳ ಸಭೆಯು ಮೈಸೂರು ಜಿಲ್ಲಾಧ್ಯಕ್ಷ ರೇವಣ್ಣ ನೇತೃತ್ವದಲ್ಲಿ ನಡೆಯಿತು.

ಸಭೆಯಲ್ಲಿ ಮಹಾಸಭಾ ರಾಜ್ಯ ಕಾರ್ಯದರ್ಶಿ ವಿನಯ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಬಿ.ಆರ್.ಗಾಯತ್ರಿ, ಮಹಿಳಾ ಘಟಕದ ಮೈಸೂರು ಜಿಲ್ಲಾ ಉಪಾಧ್ಯಕ್ಷೆ ಮೋಹನ ಕುಮಾರಿ, ಕಾರ್ಯದರ್ಶಿ ಆಶಾ, ಪದಾಧಿಕಾರಿಗಳಾದ ವೆಂಕಟೇಶ್, ಪ್ರಮೀಳಾಮೂರ್ತಿ, ಸುಂದರಮ್ಮ, ಬಿ.ಕೆ.ನರೇಂದ್ರ ಕುಮಾರ್, ಆಟೋ ವಾಸುದೇವ್, ಗ್ರಾಪಂ ಸದಸ್ಯರಾದ ಪುಷ್ಪಲತಾ, ಆರ್.ಶ್ರೀನಿವಾಸ್, ಲಕ್ಷ್ಮೀದೇವಿ ಸೇರಿದಂತೆ ಮಂಡ್ಯ ಮೈಸೂರು ಜಿಲ್ಲೆಯ ಪದಾಧಿಕಾರಿಗಳು ಭಾಗವಹಿಸಿದ್ದರು.


ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

ಮಂಡ್ಯ, ಜು.11– ಮಳವಳ್ಳಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 9 ಅಂಗನವಾಡಿ ಕಾರ್ಯಕರ್ತೆ, 10 ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ 32 ಸಹಾಯಕಿಯರ ನೇಮಕಾತಿ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಆಯ್ಕೆಯಾದ ಅಂಗನವಾಡಿ, ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

ಆಯ್ಕೆ ಸಂಬಂಧ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಲಿಖಿತ ರೂಪದಲ್ಲಿ ಜು.17 ಸಂಜೆ 5.30ರೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಮಳವಳ್ಳಿ ತಾಲೂಕು ಇವರಿಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಧಿಕಾರಿಗಳ ವರ್ಗಾವರ್ಗಿಯಲ್ಲಿ ಭಾರೀ ಭ್ರಷ್ಟಾಚಾರ ಆರೋಪ

● ಆಡಳಿತ–ವಿಪಕ್ಷ ನಾಯಕರ ವಾಕ್ಸಮರ ● ಸದನದಲ್ಲಿ ಕೋಲಾಹಲ; ಎರಡು ಬಾರಿ ಕಲಾಪ ಮುಂದೂಡಿಕೆ ● ಯತ್ನಾಳ್‌ಗೆ ಡಿಸಿಎಂ ಡಿಕೆಶಿ ಡಿಚ್ಚಿ



ಬೆಂಗಳೂರು, ಜು.11(ಕೆಎಂಶಿ)– ಅಧಿಕಾರಿಗಳ ವರ್ಗಾವಣೆಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆರೋಪ ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಎಡೆ ಮಾಡಿಕೊಟ್ಟು ಎರಡು ಬಾರಿ ಸದನವನ್ನು ಮುಂದೂಡಿದ ಪ್ರಸಂಗ ಜರುಗಿತು.

ಶೂನ್ಯವೇಳೆಯಲ್ಲಿ ಬಿಜೆಪಿಯ ಹಿರಿಯ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಮಾಡಿದ ಆರೋಪ ಆಡಳಿತ ಮತ್ತು ಬಿಜೆಪಿ ಸದಸ್ಯರ ನಡುವೆ ಕಾವೇರಿದ ಮಾತಿನ ಚಕಮಕಿ ನಡೆದು ಹಣಕಾಸು ವಹಿವಾಟು ಬಗ್ಗೆ ಆರೋಪ ಪ್ರತ್ಯಾರೋಪ ಕೇಳಿಬಂದವು.

ಬಿಜೆಪಿ ಸದಸ್ಯರ ಆರೋಪವನ್ನು ಸಾರಾಸಗಟಾಗಿ ತಿರಸ್ಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಿಮ್ಮ ಆಡಳಿತದಲ್ಲಿ ನಡೆದ ಭ್ರಷ್ಟಾಚಾರಕ್ಕೆ ಬೇಸತ್ತು ನಿಮ್ಮನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಿಸಿ ನಮ್ಮನ್ನು ಈ ಸ್ಥಾನಕ್ಕೆ ತಂದಿದ್ದಾರೆ.

ಅಧಿಕಾರ ಕಳೆದುಕೊಂಡರೂ ನೀವು ಭ್ರಷ್ಟಾಚಾರದ ಗುಂಗಿನಿಂದ ಹೊರಬಂದಿಲ್ಲ. ಯಾವುದೇ ಅಧಿಕಾರಿಯ ವರ್ಗಾವಣೆ ಯಾದರೂ ನಿಮಗೆ ಹಳೆಯ ನೆನಪಾಗಿ ಅದೇ ಇಲ್ಲೂ ನಡೆದಿರಬಹುದು ಎಂಬ ಭ್ರಮೆಯಲ್ಲಿದ್ದೀರಿ. ಈ ಭ್ರಮೆಯಿಂದ ಹೊರಬಂದು ಉತ್ತಮ ಆಡಳಿತ ನೀಡಲು ಕೈಜೋಡಿಸಿ. ನಿಮ್ಮ ಇಂಥ ಆಟಾಟೋಪ ನಮ್ಮ ಮುಂದೆ ನಡೆಯುವುದಿಲ್ಲ ಎಂದು ಕಿಡಿಕಾರಿದರು. ವಿಜಯಪುರ ಮಹಾನಗರ ಪಾಲಿಕೆ ಆಯುಕ್ತರ ವರ್ಗಾವಣೆ ವಿಚಾರ ಪ್ರಸ್ತಾಪಿಸಿದ ಯತ್ನಾಳ್, ಅರ್ಹತೆ ಇಲ್ಲದ ಅಧಿಕಾರಿಯನ್ನು ಆ ಸ್ಥಾನಕ್ಕೆ ತಂದಿದ್ದೀರಿ ಅವರನ್ನು ಮೊದಲು ವರ್ಗಾವಣೆ ಮಾಡಿ. ನೀವು ಎಲ್ಲ ವ್ಯಾಪಾರವನ್ನು ಮುಂದಿಟ್ಟುಕೊಂಡೇ ವರ್ಗಾವರ್ಗಿ ನಡೆಯುತ್ತಿದೆ ಎಂದು ಗಂಭೀರವಾಗಿ ಆರೋಪಿಸಿದರು. ಸದಸ್ಯರ ಆರೋಪಕ್ಕೆ ಕೆಂಡಾಮಂಡಲವಾದ ಮುಖ್ಯಮಂತ್ರಿ, ಬಾಯಿಗೆ ಬಂದಂತೆ ಮಾತನಾಡಬಾರದು. ನಮಗೂ ಪ್ರಮುಖ ಸ್ಥಾನಗಳಲ್ಲಿ ಒಳ್ಳೆಯವರನ್ನು ಕೂರಿಸಬೇಕೆಂಬ ಇರಾದೆ ಇದೆ.

ಇದೊಂದು ನಿರಂತರ ಪ್ರಕ್ರಿಯೆ. ಅದಕ್ಕೆ ಬಣ ಹಚ್ಚುವ ಕೆಲಸ ಮಾಡಬೇಡಿ ಎಂದಾಗ ಮಧ್ಯೆ ಪ್ರವೇಶಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ನಾವು ಎಲ್ಲವನ್ನು ಕಾನೂನು ಪ್ರಕಾರ ಮಾಡಿದ್ದೇವೆ. ನೇಮಕ ಮಾಡಿರುವ ಅಧಿಕಾರಿ ಬದಲಾವಣೆ ಮಾಡುವುದಿಲ್ಲ ಎಂದು ಖಾರವಾಗಿ ತಿಳಿಸಿದರು.

ಇದರಿಂದ ರೊಚ್ಚಿಗೆದ್ದ ಯತ್ನಾಳ್ ಸಚಿವರು ಹಾಗೂ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆ ಮಾಡಿದರು. ಇದಕ್ಕೆ ಬಿಜೆಪಿಯ ಇತರೆ ಸದಸ್ಯರು ಬೆಂಬಲ ವ್ಯಕ್ತಪಡಿಸಿ, ಸಚಿವರು ಆಡಿರುವ ಮಾತನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ಧರಣಿ ಆರಂಭಿಸಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿದ ಉಪ ಮುಖ್ಯಮಂತ್ರಿಗಳು, ಯತ್ನಾಳ್ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಅವರ ಆಡಳಿತವಿದ್ದಾಗ ಮುಖ್ಯಮಂತ್ರಿ ಹುದ್ದೆ 2500 ಕೋಟಿ ರೂ.ಗೆ ಮಾರಾಟಕ್ಕಿದೆ ಎಂದು ಹೇಳಿದ್ದರು.

ಇವರ ಹೇಳಿಕೆಯನ್ನು ಅವರ ಪಕ್ಷ ಗಂಭೀರವಾಗಿ ಪರಿಗಣಿಸಲಿಲ್ಲ. ನಾನಾಗಿದ್ದರೆ, ಅಂದೇ ಅವರನ್ನು ಪಕ್ಷದಿಂದ ವಜಾ ಮಾಡುತ್ತಿದೆ. ನಿಮ್ಮ ಆಡಳಿತದಲ್ಲಿ ನಡೆದಿರುವುದನ್ನು ನಾವು ಸರಿಪಡಿಸುತ್ತಿದ್ದೇವೆ. ಆದರೆ, ನೀವು ಇದನ್ನೇ ಭ್ರಷ್ಟಾಚಾರದ ಬಣ್ಣಕ್ಕೆ ತಿರುಗಿಸುತ್ತೀರಿ ಎಂದು ಹರಿಹಾಯ್ದರು. ಯತ್ನಾಳ್ ಬೆಂಬಲಕ್ಕೆ ನಿಂತ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅರ್ಹತೆ ಇಲ್ಲದ ಅಧಿಕಾರಿ ಹಾಕಿದ್ದಾರೆ ಎಂದು ಅವರು ಹೇಳಿದ್ದಾರೆ. ಯಾವ ಆಧಾರದ ಮೇಲೆ ಆ ಅಧಿಕಾರಿ ವರ್ಗಾವಣೆ ಮಾಡಿದ್ದೀರಿ ಎಂದು ಪ್ರಶ್ನಿಸಿದರು. ಈ ಹಂತದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ಏರಿದ ದನಿಯಲ್ಲಿ ವಾಗ್ವಾದ ನಡೆದು ಸದನ ಗದ್ದಲ, ಗೊಂದಲದ ಗೂಡಾಯಿತು.

ಆಡಳಿತ ಪಕ್ಷದ ಸದಸ್ಯ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಯತ್ನಾಳ್ ಮಾತ್ರ ಸತ್ಯಹರಿಶ್ಚಂದ್ರರು ಉಳಿದವರು ವ್ಯಾಪಾರಕ್ಕೆ ಬಂದಿದ್ದಾರೆ ಎಂದರೆ ಏನರ್ಥ ಎಂದು ಪ್ರಶ್ನಿಸಿದರು. ವಾಗ್ವಾದದ ನಡುವೆ ಮಾತನಾಡಿದ ಬೈರತಿ ಸುರೇಶ್, ವ್ಯಾಪಾರ ವಹಿವಾಟು ಮಾಡುವುದು ಯತ್ನಾಳ್‌ಗೆ ಅಗತ್ಯವಿರಬಹುದು. ನನಗೆ ಅದರ ಅಗತ್ಯವಿಲ್ಲ. ಸೌಜನ್ಯಕ್ಕಾದರೂ ಅಧಿಕಾರಿ ಭೇಟಿಯಾಗಿಲ್ಲ ಎಂದರೆ ಏನರ್ಥ. ನಿಮ್ಮ ಬಳಿ ವ್ಯಾಪಾರ ಮಾಡಲು ಆ ಅಧಿಕಾರಿ ಕಳುಹಿಸಬೇಕಿತ್ತೇ ಎಂದು ಖಾರವಾಗಿ ಪ್ರಶ್ನಿಸಿದರು.

ಆಗ ಬಿಜೆಪಿಯ ಬಹುತೇಕ ಸದಸ್ಯರು ಎದ್ದು ನಿಂತು ಆಕ್ಷೇಪಿಸಿದರು. ಆ ಅಧಿಕಾರಿ ಕೆಎಂಎಎಸ್ ಕೇಡರ್‌ನವರು ಅದಕ್ಕೆ ಹಾಕಲಾಗಿದೆ. ಹಳಬರನ್ನೇ ಮುಂದುವರೆಸಿ ಎನ್ನುವುದರ ಬಗ್ಗೆ ಸಂಶಯವಿದೆ. ನೀವು ಏನೇ ಹೇಳಿದರೂ ಆ ಅಧಿಕಾರಿ ವರ್ಗಾವಣೆ ಮಾಡಲ್ಲ ಎಂದು ಪಟ್ಟು ಹಿಡಿದರು. ಇದಕ್ಕೆ ಯತ್ನಾಳ್ ನಾನು ಭ್ರಷ್ಟರ ಪಕ್ಷದಲ್ಲಿ ಇರುವುದಿಲ್ಲ. ನನ್ನ ಹೇಳಿಕೆ ಬಗ್ಗೆ ಸಿಬಿಐ ತನಿಖೆ ಮಾಡಲಿ ಎಂದು ಹೇಳಿದರು. ಬಸವರಾಜ ಬೊಮ್ಮಾಯಿ ಮಾತನಾಡಿ, ಅಧಿಕಾರವಿದೆ, ಹಾಕಲ್ಲ, ಮಾಡಲ್ಲ ಎಂದು ಸಚಿವರು ಹೇಳಿದರೆ ಹೇಗೆ ಎಂದು ಏರಿದ ದನಿಯಲ್ಲಿ ಪ್ರಶ್ನಿಸಿದರು. ಇದರಿಂದ ಖಂಡಿತ ವ್ಯವಹಾರ ಮಾಡಿದ್ದಾರೆ ಎಂಬುದು ಸಾಬೀತಾಗಿದೆ. ನೋಡೇಬಿಡೋಣ ಯಾವ ಅಧಿಕಾರಿ ಬೇಕಾದರೂ ಹಾಕಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜು.13, 14ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ಮೈಸೂರು, ಜು.11(ಎಸ್‌ಪಿಎನ್)– ಮೈಸೂರು ನಗರ ಪ್ರದೇಶಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿ ಎಲ್ ವತಿಯಿಂದ ತ್ರೈಮಾಸಿಕ ಕಾರ್ಯ ನಿರ್ವಹಣೆಯನ್ನು ಹಮ್ಮಿಕೊಂಡಿದೆ. ಈ ಹಿನ್ನೆಲೆಯಲ್ಲಿ ಜು.13 ಮತ್ತು 14ರಂದು ಬೆಳಗ್ಗೆ10ರಿಂದ ಸಂಜೆ 5 ಗಂಟೆಯವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ವಾಣಿ ವಿಲಾಸ ನೀರು ಮತ್ತು ಒಳಚರಂಡಿ ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿರುವ ಪ್ರದೇಶಗಳು: ಹೆಬ್ಬಾಳ, ಕುಂಬಾರ ಕೊಪ್ಪಲು, ಮಂಚೇಗೌಡನ ಕೊಪ್ಪಲು, ಕೆ.ಜಿ.ಕೊಪ್ಪಲು, ಮೇಟಗಳ್ಳಿ, ಲೋಕನಾಯಕ ನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ (ವಿನಾಯಕ ನಗರ), ಮಂಡಿಮೊಹಲ್ಲಾ, ಲಷ್ಕರ್‌ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ, ಎಬಿಸಿ ಲೇಔಟ್, ಈರನಗೆರೆ, ಸಿದ್ಧಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್‌ನಗರ, ಬಡೇಮಕಾನ್, ಹಲೀಂ ನಗರ, ದೇವರಾಜ ಮೊಹಲ್ಲಾ, ಎನ್.ಆರ್.ಮೊಹಲ್ಲಾ ನಜ಼ರ್‌ಬಾದ್, ವಿದ್ಯಾರಣ್ಯಪುರಂ, ಜನತಾನಗರ, ವಿದ್ಯಾರಣ್ಯ ಪುರಂ, ಕೃಷ್ಣಮೂರ್ತಿನಗರ, ಕೆಹೆಚ್‌ಬಿ ಕಾಲೋನಿ. ಹೂಟಗಳ್ಳಿ, ವಿಜಯನಗರಚಿ 2ನೇ ಹಂತ ಹಾಗೂ ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯ, ವಾರ್ಡ್ ನಂ.1ರಿಂದ 7ವರೆಗೆ, 20,23,38ನೇ ವಾರ್ಡ್, 42ರಿಂದ 45, 47ನೇ ವಾರ್ಡ್, ಇತರೆ ಬಡಾವಣೆಗಳಲ್ಲೂ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.



ಮೈಸೂರು ನಜರ್‌ಬಾದಿನ ಪಟ್ಟಲದಮ್ಮನವರ ಪೂಜಾ ಮಹೋತ್ಸವದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಎಸ್.ಆರ್.ರವಿಕುಮಾರ್, ಶಾನು ಮಂಜು, ಚೆನ್ನಪ್ಪ, ಭರತ್ ಪಾಪಣ್ಣ ಇನ್ನಿತರರು ಹಾಜರಿದ್ದರು.

ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್

ಇಸ್ಲಾಮಾಬಾದ್: ಪಾಕಿಸ್ತಾನ ಚುನಾವಣಾ ಆಯೋಗ ಮಂಗಳವಾರ ಮಾಜಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ.



ಚುನಾವಣಾ ಆಯೋಗದ ವಿರುದ್ಧದ ನಿಂದನೆ ಪ್ರಕರಣದಲ್ಲಿ ಇಮ್ರಾನ್ ಖಾನ್ ಹಾಗೂ ಮಾಜಿ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಫವಾದ್ ಚೌಧರಿ ವಿರುದ್ಧ ಪಾಕಿಸ್ತಾನದ ಚುನಾವಣಾ ಆಯೋಗ (ಇಸಿಪಿ) ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಿದೆ. ಚುನಾವಣಾ ಆಯೋಗ ಮತ್ತು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ)ರ ವಿರುದ್ಧ 'ಅವಹೇಳನಕಾರಿ' ಭಾಷೆ ಬಳಸಿದ್ದಾರೆ ಎಂದು ಆರೋಪಿಸಿ ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್(ಪಿಟಿಐ) ಮುಖ್ಯಸ್ಥ ಇಮ್ರಾನ್ ಖಾನ್ ಮತ್ತು ಪಕ್ಷದ ಮಾಜಿ ನಾಯಕರಾದ ಚೌಧರಿ ಹಾಗೂ ಅಸಾದ್ ಉಮರ್ ವಿರುದ್ಧ ದೂರು ನೀಡಲಾಗಿತ್ತು. ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿದರೂ ಹಾಜರಾಗದ ಇಮ್ರಾನ್ ಖಾನ್ ವಿರುದ್ಧ ಆಯೋಗ ವಾರಂಟ್ ಜಾರಿ ಮಾಡಿದೆ.

ಜಮ್ಮು–ಕಾಶ್ಮೀರ 370ನೇ ವಿಧಿ ರದ್ದು ವಿರುದ್ಧದ ಅರ್ಜಿ ವಿಚಾರಣೆಗೆ ಸುಪ್ರೀಂಕೋರ್ಟ್ ಅಸ್ತು

ಆಗಸ್ಟ್ 2ರಿಂದ ವಿಚಾರಣೆ ಆರಂಭ

ನವದೆಹಲಿ: ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿರುವ ಕೇಂದ್ರ ಸರಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಆಗಸ್ಟ್ 2ರಿಂದ ಆಲಿಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಮಂಗಳವಾರ ಪ್ರಕರಣದ ವಿಚಾರಣೆ ನಡೆಸಿದ ಸಿಜೆಐ ಡಿವೈ ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠವು, ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಆಗಸ್ಟ್ 2 ರಿಂದ ಆರಂಭಿಸುವುದಾಗಿ ಹೇಳಿದೆ. ಸೋಮವಾರ ಮತ್ತು ಶುಕ್ರವಾರ ಹೊರತುಪಡಿಸಿ ಪ್ರತಿದಿನವೂ ಪ್ರಕರಣದ ವಿಚಾರಣೆ ನಡೆಯಲಿದೆ ಎಂದು ಹೇಳಿದೆ. ಜುಲೈ 27 ರೊಳಗೆ ಎಲ್ಲಾ ದಾಖಲೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಬೇಕು. ಜೊತೆಗೆ ಈ ದಾಖಲೆಗಳನ್ನು ನಿರ್ವಹಿಸಲು ಇಬ್ಬರು ವಕೀಲರನ್ನು ನೊಡೆಲ್ ಅಧಿಕಾರಿಗಳಾಗಿ ನೇಮಿಸಲಾಗುವುದು ಎಂದು ಪೀಠ ಹೇಳಿದೆ.

ಇದೇ ವೇಳೆ ಮುಖ್ಯ ಅರ್ಜಿದಾರರಾದ ಐಎಎಸ್ ಅಧಿಕಾರಿ ಶಾ ಫೈಸಲ್ ಮತ್ತು ಶೆಹ್ಲಾ ರಶೀದ್ ಪ್ರಕರಣದಿಂದ ಹಿಂದೆ ಸರಿಯುವುದಾಗಿ ಮತ್ತು ಅರ್ಜಿದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕಲು ಮನವಿ ಮಾಡಿದರು. ಈ ಮನವಿಯನ್ನು ಸುಪ್ರೀಂಕೋರ್ಟ್ ಅನುಮತಿಸಿತು. ಮುಖ್ಯನ್ಯಾಯಮೂರ್ತಿ ಡಿ. ಚಂದ್ರಚೂಡ್ ಸೇರಿದಂತೆ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿಆರ್ ಗವಾಯಿ ಮತ್ತು ಸೂರ್ಯ ಕಾಂತ್ ಅವರನ್ನು ಒಳಗೊಂಡ 5 ನ್ಯಾಯಮೂರ್ತಿಗಳಿರುವ ಪೀಠ ಈ ಅರ್ಜಿಗಳನ್ನು ವಿಚಾರಣೆ ನಡೆಸಲಿದೆ.

ಮಾನವ–ಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಮಾರ್ಗಸೂಚಿ ಹೊರಡಿಸಿದ ಹೈಕೋರ್ಟ್

ಬೆಂಗಳೂರು, ಜು.11– ಮಾನವ–ಪ್ರಾಣಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ಹೈಕೋರ್ಟ್ ಮಾರ್ಗಸೂಚಿ ಹೊರಡಿಸಿದ್ದು, ಪ್ರತಿ ತಾಲೂಕಿನಲ್ಲಿ ದೂರುಗಳನ್ನು ಸ್ವೀಕರಿಸಲು ದೂರುಗಳ ಸೆಲ್ ಸ್ಥಾಪಿಸಲು ನಿರ್ದೇಶಿಸಿದೆ.

ಕರ್ನಾಟಕ ಬೆಳೆಗಾರರ ಒಕ್ಕೂಟ ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡುವಾಗ ಕರ್ನಾಟಕ ಹೈಕೋರ್ಟ್ ಮಂಗಳವಾರ ಮಾನವ–ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಮತ್ತು ಅದರಿಂದ ಸಂತ್ರಸ್ತರಿಗೆ ಬೆಂಬಲ ನೀಡಲು ಹಲವು ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಪೈಕಿ, ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ ವರಾಳೆ ಮತ್ತು ನ್ಯಾಯಮೂರ್ತಿ ಎಂಜಿಎಸ್ ಕಮಲ್ ಅವರ ವಿಭಾಗೀಯ ಪೀಠವು ಪ್ರತಿ ತಾಲೂಕಿನಲ್ಲಿ ಕಾಡು ಪ್ರಾಣಿಗಳು ಮಾನವನ ಆವಾಸಸ್ಥಾನಕ್ಕೆ ನುಗ್ಗುವ ಬಗ್ಗೆ ದೂರುಗಳನ್ನು ಸ್ವೀಕರಿಸಲು ದೂರುಗಳ ಸೆಲ್ ಸ್ಥಾಪಿಸಲು ನಿರ್ದೇಶಿಸಿದೆ. ಕಾಡಾನೆಗಳ ಓಡಾಟಕ್ಕೆ ಆನೆ ಕಾರಿಡಾರ್‌ಗಳನ್ನು ಸ್ಥಾಪಿಸುವಂತೆಯೂ ಹೈಕೋರ್ಟ್ ಮಾರ್ಗಸೂಚಿಯಲ್ಲಿ ನಿರ್ದೇಶನ ನೀಡಿದೆ.

ಮಾನವ–ಪ್ರಾಣಿ ಸಂಘರ್ಷ ತಡೆಯಲು ಅರಣ್ಯ ಇಲಾಖೆಗೆ ಮಾನವ ಸಂಪನ್ಮೂಲ, ವಾಹನ, ಮೂಲಸೌಕರ್ಯ ಸೇರಿದಂತೆ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುವಂತೆಯೂ ರಾಜ್ಯ ಸರ್ಕಾರಕ್ಕೆ ಸೂಚಿಸಲಾಯಿತು. 24/7 ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲು ಮತ್ತು ಕಾಡು ಪ್ರಾಣಿಗಳ ಬೆದರಿಕೆ ಇರುವ ಪ್ರದೇಶಗಳಲ್ಲಿ ಜನರಿಗೆ ಎಚ್ಚರಿಕೆ ಸಂದೇಶಗಳನ್ನು ದೊಡ್ಡ ಪ್ರಮಾಣದಲ್ಲಿ ಕಳುಹಿಸಬೇಕು. ವನ್ಯಜೀವಿಗಳೊಂದಿಗೆ ಸಂಘರ್ಷದಲ್ಲಿ ಗಾಯಗೊಂಡ ಜನರಿಗೆ ಚಿಕಿತ್ಸೆ ನೀಡಲು ನಿಯಂತ್ರಣ ಕೊಠಡಿಗಳನ್ನು ಹತ್ತಿರದ ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳಿಗೆ ಸಂಪರ್ಕಿಸಬೇಕು. ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಪ್ರತೀ ತ್ರೈಮಾಸಿಕಕ್ಕೆ ಭೇಟಿ ನೀಡಿ ಮಾನವ–ವನ್ಯಜೀವಿ ಸಂಘರ್ಷಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು ಮತ್ತು ಅಗತ್ಯ ಕ್ರಮಗಳನ್ನು ಪ್ರಾರಂಭಿಸಬೇಕು ಎಂದು ಹೈಕೋರ್ಟ್ ಹೇಳಿದೆ.

ಪ್ರತಿ ತಾಲೂಕಲ್ಲಿ ದೂರು ಸ್ವೀಕಾರಕ್ಕೆ ಕೇಂದ್ರ ಸ್ಥಾಪನೆ

ವಲಯ ಅರಣ್ಯಾಧಿಕಾರಿಗಳು ಮತ್ತು ತಹಸೀಲ್ದಾರ್‌ಗಳು ಪ್ರತಿ ಎರಡು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸಿ ಈ ವಿಷಯಗಳ ಕುರಿತು ಚರ್ಚಿಸಬೇಕು. ಅಗತ್ಯ ಸಾರ್ವಜನಿಕ ಪ್ರಕಟಣೆಗಳನ್ನು ಹೊರಡಿಸುವ ಮೂಲಕ ಮತ್ತು ಎಲ್ಲಾ ಗ್ರಾಮ ಪಂಚಾಯಿತಿಗಳ ಸೂಚನಾ ಫಲಕಗಳಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಲ್ಲಿ ದೂರು ಕೋಶಗಳನ್ನು ಜನಪ್ರಿಯಗೊಳಿಸುವಂತೆಯೂ ಹೈಕೋರ್ಟ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಉತ್ತಮ ವಿನ್ಯಾಸದೊಂದಿಗೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ಮಾಣ

ಸುಸಜ್ಜಿತ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಿನಿ ತಾರಾಲಯ ನಿರ್ಮಿಸುವ ಕುರಿತು ಸಭೆ





ಮಡಿಕೇರಿ, ಜು.11– ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ವತಿಯಿಂದ ಸರ್ಕಾರದ ನಿರ್ದೇಶನದಂತೆ ಕೊಡಗು ಜಿಲ್ಲಾಡಳಿತದ ಸಹಯೋಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಉದ್ದೇಶಿತ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಮಿನಿ ತಾರಾಲಯ ನಿರ್ಮಾಣ ಕಾರ್ಯ ಕೈಗೊಳ್ಳುವ ನಿಟ್ಟಿನಲ್ಲಿ ಉತ್ತಮ ವಾಸ್ತುಶಿಲ್ಪಿ ವಿನ್ಯಾಸದೊಂದಿಗೆ ಕೊಡಗಿನ ಭೌಗೋಳಿಕ ಪರಿಸರ ಹಾಗೂ ಹವಾಮಾನಕ್ಕೆ ಅನುಗುಣವಾಗಿ ಕಟ್ಟಡದ ವಿನ್ಯಾಸ ರೂಪಿಸಿ ಸುಸಜ್ಜಿತ ವಿಜ್ಞಾನ ಕೇಂದ್ರ ನಿರ್ಮಿಸಲಾಗುವುದು ಎಂದು ಜಿಲ್ಲಾ ವಿಜ್ಞಾನ ಕೇಂದ್ರದ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ.

ಕೊಡಗು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಮಿನಿ ತಾರಾಲಯ ಸ್ಥಾಪನೆಗೆ ಸಂಬಂಧಿಸಿದಂತೆ ರೂಪುರೇಷೆಗಳು ಹಾಗೂ ಮುಂದಿನ ಕಾರ್ಯ ಯೋಜನೆಗಳ ಕುರಿತು ಚರ್ಚಿಸಲು ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ವಿಜ್ಞಾನ ಕೇಂದ್ರದ ಸಮಿತಿ ಸದಸ್ಯರೊಂದಿಗೆ ನಡೆಸಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಯೋಜನೆಯಂತೆ ಕೆಸ್ಟೆಪ್ಸ್ ವತಿಯಿಂದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ನಿರ್ಮಾಣಕ್ಕೆ 4 ಕೋಟಿ ರೂ. ಹಾಗೂ ಮಿನಿ ತಾರಾಲಯ ಸ್ಥಾಪನೆಗೆ 5.75 ಕೋಟಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ವಿಜ್ಞಾನ ಕೇಂದ್ರಕ್ಕೆ ನಗರದ ಹೊರಭಾಗದ ಕರ್ಣಂಗೇರಿ ಗ್ರಾಮದ ಬಳಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಜಾಗವನ್ನು ಈಗಾಗಲೇ ಮಂಜೂರುಗೊಳಿಸಲಾಗಿದ್ದು, ಸ್ಥಳವನ್ನು ಮತ್ತೊಮ್ಮೆ ಪರಿಶೀಲಿಸಿ, ಅಂತಿಮಗೊಳಿಸಬಹುದಾಗಿದೆ ಎಂದು ಅವರು ಸೂಚಿಸಿದರು.

ಉದ್ದೇಶಿತ ವಿಜ್ಞಾನ ಕೇಂದ್ರವನ್ನು ಸುಸಜ್ಜಿತವಾಗಿ ನಿರ್ಮಿಸಿ, ಈ ಕೇಂದ್ರದ ಮೂಲಕ ಜಿಲ್ಲೆಯ ವಿದ್ಯಾರ್ಥಿಗಳ ವಿಜ್ಞಾನ ಕಲಿಕೆಗೆ ಪೂರಕವಾಗಿ ವಿವಿಧ ವೈಜ್ಞಾನಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಮಿತಿಯ ಎಲ್ಲಾ ಸದಸ್ಯರು ಅಗತ್ಯ ಸಲಹೆಗಳನ್ನು ನೀಡಬೇಕು ಎಂದು ವೆಂಕಟ್‌ರಾಜಾ ಅವರು ತಿಳಿಸಿದರು.

ಸಭೆಯಲ್ಲಿ ವಿಜ್ಞಾನ ಕೇಂದ್ರದ ರೂಪುರೇಷೆ, ಚಟುವಟಿಕೆಗಳ ಕುರಿತು ಸಮಿತಿಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಉದ್ದೇಶಿತ ವಿಜ್ಞಾನ ಕೇಂದ್ರವನ್ನು ಸುಸಜ್ಜಿತವಾಗಿ ನಿರ್ಮಿಸುವ ಮೂಲಕ ಈ ಕೇಂದ್ರದ ಮೂಲಕ ಜಿಲ್ಲೆಯ ವಿದ್ಯಾರ್ಥಿಗಳ ವಿಜ್ಞಾನ ಕಲಿಕೆಗೆ ಪೂರಕವಾಗಿ ವಿವಿಧ ವೈಜ್ಞಾನಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಮಿತಿಯ ಎಲ್ಲಾ ಸದಸ್ಯರು ಅಗತ್ಯ ಸಲಹೆ ನೀಡಬೇಕು ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ ನಂಜುಂಡೇಗೌಡ, ಕುಶಾಲನಗರ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಎನ್.ಎಸ್.ಸತೀಶ್, ಚೆಟ್ಟಳ್ಳಿ ಕಾಫಿ ಉಪ ಸಂಶೋಧನಾ ಕೇಂದ್ರದ ಮುಖ್ಯಸ್ಥ ಚಂದ್ರಪ್ಪ ಜಂಟಿ ಕೃಷಿ ನಿರ್ದೇಶಕಿ ಶಬನಾ ಎಂ.ಶೇಖ್, ಜಿಲ್ಲಾ ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಸಿ.ಎಂ. ಪ್ರಮೋದ್, ಪೊನ್ನಂಪೇಟೆ ಹಳ್ಳಿಗಟ್ಟು ಸಿಐಟಿ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ಮುಖ್ಯಸ್ಥ ಡಾ.ಪ್ರೀತ್ ಗಣಪತಿ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಮೇ.ಬಿ.ರಾಘವ, ರಾಸಾಯನಶಾಸ್ತ್ರದ ಮುಖ್ಯಸ್ಥ ಡಾ.ಮಂಜುನಾಥ್, ಗಣಕಯಂತ್ರ ವಿಭಾಗದ ಮುಖ್ಯಸ್ಥ ರವಿಶಂಕರ್, ಪರಿಸರ ಅಧಿಕಾರಿ ಎಂ.ಜಿ ರಘುರಾಂ, ವಿಜ್ಞಾನ ಕಾರ್ಯಕರ್ತ ಜಿ.ಶ್ರೀನಾಥ್, ವಿವಿಧ ಇಲಾಖೆಯ ಪ್ರಮುಖರು ಭಾಗವಹಿಸಿದ್ದರು.

ಅಪರೂಪದ ಮಲಬಾರ್ ದೈತ್ಯ, ಹಾರುವ ಅಳಿಲುಗಳ ಬೇಟೆ ಪ್ರಕರಣ ಬಯಲಿಗೆ

- ಮೂವರು ಬೇಟೆಗಾರರ ಮನೆ ಮೇಲೆ ದಾಳಿ, ಆರೋಪಿಗಳು ಪರಾರಿ
- ವನ್ಯಜೀವಿಗಳ ಮಾಂಸ ವಶ, ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲು



ಮಡಿಕೇರಿ, ಜು.11– ಸಂಪಾಜೆ ವಲಯದ ಡಬ್ಬಡ್ಕ ಪಟ್ಟಿಘಾಟ್ ಮೀಸಲು ಅರಣ್ಯಕ್ಕೆ ಅಕ್ರಮವಾಗಿ ಪ್ರವೇಶಿಸಿ ತೀರಾ ವಿನಾಶದ ಅಂಚಿನಲ್ಲಿರುವ ಮಲಬಾರ್ ದೈತ್ಯ ಅಳಿಲು ಹಾಗೂ ಹಾರುವ ಅಳಿಲುಗಳನ್ನು ಬೇಟೆಯಾಡಿ ಮಾಂಸವನ್ನಾಗಿ ಪರಿವರ್ತಿಸುತ್ತಿದ್ದ ಪ್ರಕರಣವನ್ನು ಸಂಪಾಜೆ ವಲಯ ಅರಣ್ಯ ಇಲಾಖೆ ಬಯಲಿಗೆಳೆದಿದೆ.

ವನ್ಯ ಜೀವಿ ಸಂರಕ್ಷಣಾ ಕಾಯಿದೆ 1972ರ ಶೆಡ್ಯೂಲ್ 1ರಲ್ಲಿ ಸಂರಕ್ಷಿಸಲ್ಪಟ್ಟಿರುವ ವನ್ಯ ಜೀವಿಗಳನ್ನು ಕೆಲವರು ಬೇಟೆಯಾಡಿರುವ ಬಗ್ಗೆ ಸಂಪಾಜೆ ವಲಯ ಅರಣ್ಯ ಇಲಾಖೆಗೆ ಖಚಿತ ಮಾಹಿತಿ ಲಭಿಸಿತ್ತು. ಅದರಂತೆ ಆರೋಪಿಗಳಾದ ದಬ್ಬಡ್ಕ ಗ್ರಾಮದ ಮದನ್ ಕುಮಾರ್(38), ಗಣಪತಿ ಬಿನ್ ಮಾಚಯ್ಯ (50), ಪ್ರಸನ್ನ ಕುಮಾರ್(35) ಎಂಬುವರ ಮನೆಗಳ ಮೇಲೆ ಅಧಿಕಾರಿಗಳು ಮತ್ತು ಅರಣ್ಯ ಸಿಬ್ಬಂದಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಮೂವರು ಆರೋಪಿಗಳು ಪರಾರಿಯಾಗಿದ್ದಾರೆ.

ದಾಳಿ ಸಂದರ್ಭ ಮನೆಯಲ್ಲಿ ಬೆಂದ ಮತ್ತು ಮಾಂಸ ಮಾಡಲ್ಪಟ್ಟ ಎರಡು ವನ್ಯ ಜೀವಿಗಳ ಮಾಂಸಗಳನ್ನು ಪಾತ್ರೆ ಸಹಿತ ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ. ಪೂವಯ್ಯ ಮತ್ತು ವಲಯ ಅರಣ್ಯಾಧಿಕಾರಿ ಮಧುಸೂದನ್ ಮಾರ್ಗದರ್ಶನದಲ್ಲಿ ಉಪ ವಲಯ ಅರಣ್ಯಾಧಿಕಾರಿ ನಿಸಾರ್ ಮಹಮ್ಮದ್, ಗಸ್ತು ಅರಣ್ಯ ಪಾಲಕರಾದ ಚಂದ್ರಪ್ಪ, ಕಾರ್ತಿಕ್, ಮನೋಜ್ ಕುಮಾರ್, ದುರ್ಗಾಪ್ರಸಾದ್, ಗಗನ್, ಶರತ್, ಶಂಕರ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಕಾಡಾನೆ, ಕಾಡುಕೋಣಗಳ ದಾಳಿ: ಫಸಲು ನಾಶ



ಕುಶಾಲನಗರ, ಜು.11– ಸಮೀಪದ ನಂಜರಾಯಪಟ್ಟಣ ಗ್ರಾಪಂ ವ್ಯಾಪ್ತಿಯಲ್ಲಿ ಕಾಡಾನೆಗಳು ಮತ್ತು ಕಾಡುಕೋಣಗಳ ಹಾವಳಿ ಮಿತಿಮೀರಿದ್ದು, ಕೃಷಿ ಪ್ರದೇಶಗಳನ್ನು ಹಾನಿಗೊಳಿಸುತ್ತಿರುವ ಘಟನೆಗಳು ಮರುಕಳಿಸುತ್ತಿವೆ.

ಮೀನುಕೊಲ್ಲಿ ಅರಣ್ಯ ಪ್ರದೇಶದಿಂದ ಗ್ರಾಮಕ್ಕೆ ಲಗ್ಗೆಯಿಡುವ ಕಾಡಾನೆಯೊಂದು ಚಿನ್ನೂರು ಮತ್ತು ದಾಸವಾಳ ಗ್ರಾಮಗಳಿಗೆ ದಾಳಿಯಿಟ್ಟು ತೋಟ ಹಾಗೂ ಕೃಷಿ ಭೂಮಿಯನ್ನು ಹಾಳು ಮಾಡುತ್ತಿವೆ.

ನಂಜರಾಯಪಟ್ಟಣ ಗ್ರಾಪಂ ಅಧ್ಯಕ್ಷರೂ ಆದ ಕೃಷಿಕ ಸಿ.ಎಲ್.ವಿಶ್ವ ಅವರ ಜಮೀನಿಗೆ ದಾಳಿ ನಡೆಸಿದ ಕಾಡಾನೆ ಕಳೆದೊಂದು ವಾರದಿಂದ ನಿರಂತರವಾಗಿ ಉಪಟಳ ನೀಡುತ್ತಿದೆ. ಕಾಡಾನೆ ದಾಳಿಗೆ ಕಾಫಿ, ಬಾಳೆ ಹಾಗೂ ಅಡಿಕೆ ಗಿಡಗಳು ನೆಲಕಚ್ಚಿವೆ. ಹಲಸು ಮತ್ತು ಕಿತ್ತಳೆ ಗಿಡಗಳ ಫಸಲನ್ನು ನಾಶಗೊಳಿಸಿ ಮನೆಯ ಸಮೀಪದ ಶೆಡ್‌ನೊಳಗೆ ಹಂದಿಗಳಿಗೆ ತಂದಿಟ್ಟಿದ್ದ ತವಡು ಪುಡಿಯನ್ನು ಸ್ವಾಹ ಮಾಡಿರುವ ಕಾಡಾನೆ ಬಿತ್ತನೆಗೆ ಇರಿಸಿದ್ದ ಎರಡು ಮೂಟೆ ಬಿತ್ತನೆ ಭತ್ತವನ್ನು ಕೂಡ ತಿಂದು ಮುಗಿಸಿರುವುದು ಕಂಡುಬಂದಿದೆ. ನಾಟಿ ಮಾಡಿದ್ದ ಭತ್ತದ ಗದ್ದೆಗಳಲ್ಲಿ ಅಡ್ಡಾಡಿ ಗದ್ದೆಯನ್ನು ಹಾನಿಗೊಳಿಸಿದೆ.

ಕಾಡಾನೆ ನಿಯಂತ್ರಣಕ್ಕೆ ಅರಣ್ಯಕ್ಕೆ ಇಲಾಖೆ ಸೂಕ್ತ ಕ್ರಮಕೈಗೊಳ್ಳಬೇಕಿದೆ ಎಂದು ಆಗ್ರಹಿಸಿರುವ ಸಿ.ಎಲ್.ವಿಶ್ವ, ಆನೆ ಕಂದಕವನ್ನು ಸಮರ್ಪಕವಾಗಿ ಹೂಳೆತ್ತಬೇಕಿದೆ. ಹ್ಯಾಂಗಿಂಗ್ ಫೆನ್ಸ್‌ಗಳು ಕಾಡುಪಾಲಾಗಿದೆ. ಇದರಿಂದಾಗಿ ಕಾಡಾನೆಗಳು ಸಲೀಸಾಗಿ ಕೃಷಿ ಭೂಮಿಯತ್ತ ಲಗ್ಗೆಯಿಟ್ಟು ಬೆಳೆ ಹಾನಿ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ರೇಡಿಯೋ ಕಾಲರ್ ಅಳವಡಿಸಿ ಸ್ಥಳಾಂತರ ಮಾಡಿದ್ದ ಕುಶ ಆನೆ ಮತ್ತೆ ಈ ಭಾಗಕ್ಕೆ ಆಗಮಿಸಿದ್ದು, ನಿರಂತರವಾಗಿ ಬೆಳೆ ಹಾನಿ ಮಾಡುತ್ತಿದೆ. ಇದರೊಂದಿಗೆ ಹೊಸ ಕಾಡಾನೆಯೊಂದು ಈ ಭಾಗದಲ್ಲಿ ನಿರಂತರ ಉಪಟಳ ನೀಡುತ್ತಿದೆ. ಬೆಳೆ ಹಾನಿ, ಜೀವಹಾನಿಗೆ ಪರಿಹಾರ ಒದಗಿಸುವುದು ಮಾತ್ರವಲ್ಲದೆ ಶಾಶ್ವತ ಪರಿಹಾರ ಕ್ರಮಕ್ಕೆ ಜಿಲ್ಲೆಯ ಹೊಸ ಶಾಸಕದ್ವಯರು ಚಿಂತನೆ ಹರಿಸಬೇಕಿದೆ ಎಂದು ಆಗ್ರಹಿಸಿದ್ದಾರೆ.

ಕೃಷಿ ಪ್ರಶಸ್ತಿಗೆ ರೈತ, ರೈತ ಮಹಿಳೆಯರಿಂದ ಅರ್ಜಿ ಆಹ್ವಾನ

ಮಡಿಕೇರಿ, ಜು.11– ಕೃಷಿ ವಲಯದಲ್ಲಿ ಉತ್ಪಾದಕತೆ ಹೆಚ್ಚಿಸಲು ಹಾಗೂ ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ಕೃಷಿ ಪ್ರಶಸ್ತಿ, ಕೃಷಿ ಉತ್ಪಾದನಾ ಬಹುಮಾನ ಯೋಜನೆಯನ್ನು ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವೂ (2023–24) ಸಹ ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಬೆಳೆ ಸ್ಪರ್ಧೆಗೆ ಅರ್ಜಿ ಆಹ್ವಾನಿಸಲಾಗಿದೆ.

ನೋಂದಣಿ ಶುಲ್ಕ ಸಾಮಾನ್ಯ ರೈತ/ ರೈತ ಮಹಿಳೆಯರಿಗೆ 100 ರೂ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತ ಮಹಿಳೆ ಯರಿಗೆ 25 ರೂ, ಕನಿಷ್ಠ ಒಂದು ಎಕರೆ ಪ್ರದೇಶದಲ್ಲಿ ಸ್ಪರ್ಧೆ ಬೆಳೆ ಬೆಳೆದಿರಬೇಕು. ಸ್ವಂತ ಜಮೀನು ಇರುವ ಬಗ್ಗೆ ಪಹಣಿ ಪತ್ರ ಹೊಂದಿರಬೇಕು. ಯಾವುದೇ ಹಂತದಲ್ಲಿ ಒಮ್ಮೆ ಬಹುಮಾನ ಪಡೆದ ರೈತ/ ರೈತ ಕುಟುಂಬದವರು ಮುಂದಿನ ಐದು ವರ್ಷಗಳ ಅವಧಿಗೆ ಆ ಹಂತದ ಬೆಳೆ ಸ್ಪರ್ಧೆಯ ಬಹುಮಾನಕ್ಕೆ ಅರ್ಹರಾಗಿರುವುದಿಲ್ಲ. ಆದರೆ ಆ ಬೆಳೆಯ ಮೇಲಿನ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಆಗಸ್ಟ್, 31 ಕೊನೆಯ ದಿನವಾಗಿದೆ ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ.

ನಾಡಪ್ರಭು ಕೆಂಪೇಗೌಡರ ಆಡಳಿತ ವಿಶ್ವಕ್ಕೆ ಮಾದರಿ



ವಿರಾಜಪೇಟೆ, ಜು.11– ನಾಡಪ್ರಭು ಕೆಂಪೇಗೌಡರ ಆಡಳಿತದಲ್ಲಿ ಕೆರೆ ಕಟ್ಟೆಗಳು ದೇವಸ್ಥಾನಗಳ ನಿರ್ಮಾಣವಾಗಿದ್ದು, ಬೆಂಗಳೂರು ನಗರವನ್ನು ಕಟ್ಟಿದ ಇವರ ಆಡಳಿತ ವಿಶ್ವಕ್ಕೆ ಮಾದರಿಯಾಗಿದೆ ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ವಕೀಲ ವಿ.ಕೆ. ದೇವಲಿಂಗಯ್ಯ ಬಣ್ಣಿಸಿದ್ದಾರೆ.

ವಿರಾಜಪೇಟೆ ತಾಲೂಕು ಅಮ್ಮತ್ತಿ ಒಂಟಿಯಂಗಡಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಒಕ್ಕಲಿಗರ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಕೆಂಪೇಗೌಡರ ಆಡಳಿತದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಎಲ್ಲರಿಗೂ ಮಾದರಿಯಾದ ಆಡಳಿತವನ್ನು ನಡೆಸಿದ್ದರು. ಅವರ ಆದರ್ಶಗಳನ್ನು ನಾವುಗಳು ಪಾಲಿಸುವ ಮೂಲಕ ಸಮಾಜಕ್ಕೆ ಉತ್ತಮ ವ್ಯಕ್ತಿಯಾಗಬೇಕು ಎಂದರು.

ಕೆಂಪೇಗೌಡರ ಜಯಂತಿ ಅಂಗವಾಗಿ ಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು, ಈ ಸಂದರ್ಭ ಒಕ್ಕಲಿಗರ ಸಂಘದ ವತಿಯಿಂದ ಶುದ್ಧ ಕುಡಿಯುವ ನೀರಿನ ಯಂತ್ರ, ಹಾಗೂ ಆಟದ ಸಮಾಗ್ರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಒಂಟಿಯಂಗಡಿ ಪ್ರಾಥಮಿಕ ಶಾಲಾ ಮುಖ್ಯ ಸಿಕ್ಷಕಿ ಓ.ಎಂ. ಮಿನ್ನಮ್ಮ ಸಭೆಯಲ್ಲಿ ಮಾತನಾಡಿದರು. ಒಕ್ಕಲಿಗರ ಸಂಘದ ನಿರ್ದೇಶಕ ಕೆ.ಪಿ.ನಾಗರಾಜು, ವಿ.ಎಸ್. ತಿಮ್ಮಯ್ಯ, ವಿ.ಎಂ.ರಾವ್‌ಜಿ ಮತ್ತಿತರರು ಉಪಸ್ಥಿತರಿ ದ್ದರು. ಈ ವೇಳೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಕಿರುಕಾಣಿಕೆ ನೀಡಿ ಗೌರವಿಸಲಾಯಿತು.

ಕರಾಟೆಯಲ್ಲಿ ಕಂಚಿನ ಪದಕ



ಮಡಿಕೇರಿ, ಜು.11– ಹೈದಾರಬಾದ್‌ನಲ್ಲಿ ನಡೆದ 12ನೇ ರಾಷ್ಟ್ರೀಯ ವೋವಿನಮ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಸೋಮವಾರಪೇಟೆಯ ಕುವೆಂಪು ಶಾಲೆ ವಿದ್ಯಾರ್ಥಿನಿ ಜಿ.ಎಸ್. ಮಾನಸ ಕಂಚಿನ ಪದಕ ಗೆದ್ದು ಕೊಂಡಿದ್ದಾರೆ. ಇವರಿಗೆ ಕೊಡಗು ವುಶು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ತರಬೇತುದಾರ ಎನ್.ಸಿ.ಸುದರ್ಶನ್ ತರಬೇತಿ ನೀಡಿದ್ದಾರೆ.

ಚಾ.ನಗರ ಪ್ರಮುಖ ಹುದ್ದೆಗಳಲ್ಲಿ ಮಹಿಳೆಯರದ್ದೇ ಕಾರುಬಾರು



ಶಿಲ್ಪಾನಾಗ್



ಗೀತಾ ಹುಡೇದ



ಪದ್ಮಿನಿ ಸಾಹು



ಬಿ.ಎಸ್. ಭಾರತಿ



ಪೂವಿತಾ



ದೀಪಾ

ಜಿಲ್ಲೆಯ ಪ್ರಮುಖ ಹುದ್ದೆಗಳಲ್ಲಿ ಮಹಿಳಾ ಅಧಿಕಾರಿಗಳಿರುವುದರಿಂದ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರನ್ನು ಉತ್ತೇಜಿಸಿದಂತಾಗಿದೆ. ಚಾಮರಾಜನಗರವನ್ನು ಹಿಂದುಳಿದ ಜಿಲ್ಲೆ ಎನ್ನುತ್ತಾರೆ. ಮಹಿಳಾ ಅಧಿಕಾರಿಗಳು ಎಲ್ಲರಿಗೂ ರೋಲ್ ಮಾಡಲ್ ಆಗಬೇಕು. ಜಿಲ್ಲೆಯಲ್ಲಿ ಹೆಚ್ಚು ಮಹಿಳೆಯರು ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವ ಅವಕಾಶ ದೊರೆತಿರುವುದು ಬಹಳ ಸಂತೋಷ.

- ಸಿ.ಟಿ.ಶಿಲ್ಪಾನಾಗ್, ಜಿಲ್ಲಾಧಿಕಾರಿ.

ಚಾಮರಾಜನಗರ, ಜು.11– ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಎಸ್ಪಿ ಜಿಪಂ ಸಿಇಓ, ಜಿಲ್ಲಾ ಸೆಷನ್ ನ್ಯಾಯಾಲಯದ ನ್ಯಾಯಾಧೀಶರು ಸೇರಿದಂತೆ ಜಿಲ್ಲೆಯ ಪ್ರಮುಖ ಹುದ್ದೆಗಳಲ್ಲಿ ಮಹಿಳೆಯರ ಕಾರುಬಾರು ಜೋರಾಗಿದೆ.

ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಪಂ ಸಿಇಓ ಎಸ್.ಪೂವಿತಾ ಸೇರಿದಂತೆ ಜಿಲ್ಲೆಯ ಪ್ರಮುಖ ಹುದ್ದೆಗಳನ್ನು ಮಹಿಳಾ ಅಧಿಕಾರಿಗಳೇ ಅಲಂಕರಿಸಿದ್ದಾರೆ. ಅಲ್ಲದೇ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾಗಿ ಬಿ.ಎಸ್. ಭಾರತಿ, ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾಗಿ ನಿಶಾರಾಣಿ ಕರ್ತವ್ಯ ನಿರ್ವಹಿಸುವ ಮೂಲಕ ಗಮನ ಸೆಳೆದಿದ್ದಾರೆ.

ಜಿಲ್ಲಾ ಮಟ್ಟದ ಅಧಿಕಾರಿಗಳಾಗಿ ಹಲವು ಮಹಿಳಾ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಬಿಳಿಗಿರಿರಂಗನಾಥಸ್ವಾಮಿ ಬೆಟ್ಟದ ಹುಲಿ ಯೋಜನೆ (ಬಿಆರ್‌ಟಿ) ನಿರ್ದೇಶಕರಾಗಿ ದೀಪಾ ಜಿ. ಕಾಂಟ್ರಾಕ್ಟರ್, ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾಗಿ ಸುಧಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರಾಗಿ ಅನಿತಾ, ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ಡಾ. ಸವಿತಾ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸುಜಾತಾ, ಚಾಮರಾಜನಗರ ಡಿವೈಎಸ್‌ಪಿಯಾಗಿ ಪ್ರಿಯದರ್ಶಿನಿ ಸಾಣೆಕೊಪ್ಪ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆ ಮೂಲಕ ಜಿಲ್ಲೆಯಲ್ಲಿ ಮಹಿಳಾ ಅಧಿಕಾರಿಗಳು ಪ್ರಮುಖ ಹುದ್ದೆಯಲ್ಲಿ ಇರುವ ಮೂಲಕ ಗಮನ ಸೆಳೆದಿದ್ದಾರೆ.

ನೂತನ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಧಿಕಾರ ಸ್ವೀಕಾರ




ಚಾಮರಾಜನಗರ, ಜು.11– ನೂತನ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಮಂಗಳವಾರ ಅಧಿಕಾರ ಸ್ವೀಕರಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಗೆ ಇಂದು ಬೆಳಗ್ಗೆ ಆಗಮಿಸಿದ ನೂತನ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಎಸ್.ಪೂವಿತಾ ಹಾಗೂ ಎಡಿಸಿ ಗೀತಾ ಹುಡೇದ ಹೂ ಗುಚ್ಛ ನೀಡಿ ಸ್ವಾಗತಿಸಿದರು. ಬಳಿಕ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಪ್ರಭಾರ ಜಿಲ್ಲಾಧಿಕಾರಿ ಎಸ್.ಪೂವಿತಾ ಅವರಿಂದ ಅಧಿಕಾರ ಸ್ವೀಕರಿಸಿದರು.

ನಂತರ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದಿರುವುದು ಸಂತಸದ ವಿಷಯ. ಚಾಮರಾಜನಗರ ಪ್ರಕೃತಿ, ವನ್ಯಜೀವಿ ಸಂಪತ್ತು ಹೊಂದಿರುವ ಸುಂದರ ಜಿಲ್ಲೆ. ಇಲ್ಲಿ ಒಳ್ಳೆಯ ಕೆಲಸ ಮಾಡಲು ಉತ್ತಮ ವೇದಿಕೆ ಇದೆ. ಇಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಲು ಜಿಲ್ಲೆಯ ಜನರು ಹಾಗೂ ಜನಪ್ರತಿನಿಧಿಗಳು ಉತ್ತೇಜನ ನೀಡುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಜಿಲ್ಲೆಯಲ್ಲಿ ಯಾವ ವಿಷಯಗಳಿಗೆ ಆದ್ಯತೆ ನೀಡಬೇಕು ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ. ನನ್ನ ಅಧಿಕಾರವಧಿಯಲ್ಲಿ ಜಿಲ್ಲೆಯಲ್ಲಿ ಗುಣಾತ್ಮಕ ಬದಲಾವಣೆಗೆ ಶ್ರಮಿಸಲಿದ್ದೇನೆ. ಅಧಿಕಾರಿಗಳು ಸ್ಪಂದನಾಶೀಲರಾಗಿ ಕೆಲಸ ನಿರ್ವಹಿಸಲು ಸೂಚಿಸುವೆ. ಸಮಸ್ಯೆ ಯಾವ ಹಂತದಲ್ಲಿ ಪರಿಹಾರವಾಗಬೇಕಿದೆಯೋ ಅಲ್ಲಿ ಪರಿಹಾರವಾಗಬೇಕು. ಸಾರ್ವಜನಿಕರನ್ನು ಅಲೆದಾಡಿಸುವುದನ್ನು ತಪ್ಪಿಸಬೇಕು. ಈ ನಿಟ್ಟಿನಲ್ಲಿ ಅಗತ್ಯ ನಿರ್ದೇಶನ ನೀಡುವೆ ಎಂದರು.

ತೊಂಡವಾಡಿಯಲ್ಲಿ ಅದ್ಧೂರಿ ಮಾರಮ್ಮನವರ ಪೂಜಾ ಮಹೋತ್ಸವ



ಗುಂಡ್ಲುಪೇಟೆ, ಜು.11– ತಾಲೂಕಿನ ತೊಂಡವಾಡಿ ಗ್ರಾಮದಲ್ಲಿ ಮಂಗಳವಾರ 10ನೇ ವರ್ಷದ ಶ್ರೀಮರದ ಮಾರಮ್ಮನವರ ಪೂಜಾ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು.

ಪೂಜಾ ಮಹೋತ್ಸವ ಅಂಗವಾಗಿ ಬೆಳಗ್ಗೆ 8 ಗಂಟೆಗೆ ಪುಣ್ಯಾಹ, ಗಣಪತಿ ಪೂಜೆ, ಅಭಿಷೇಕ, ಹೋಮ ನಡೆಯಿತು. 11.30ಕ್ಕೆ ಅಮ್ಮನವರಿಗೆ ಮಹಾಮಂಗಳಾರತಿ ನೆರವೇರಿಸಲಾಯಿತು. ಮಧ್ಯಾಹ್ನ 12.30ಕ್ಕೆ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಸೋಮವಾರ ರಾತ್ರಿ ವಿದ್ವಾನ್ ಶಿವಕುಮಾರಶಾಸ್ತ್ರಿ ಮತ್ತು ತಂಡದಿಂದ ಮಲೆ ಮಹದೇಶ್ವರ ಶಿವಕಥೆ ಏರ್ಪಡಿಸಲಾಗಿತ್ತು.

ವಿವಿಧ ಹಕ್ಕೊತ್ತಾಯಕ್ಕಾಗಿ ರೈತ ಸಂಘದಿಂದ ಪ್ರತಿಭಟನೆ

ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಲು ಆಗ್ರಹ



ಚಾಮರಾಜನಗರ, ಜು.11– ಜಿಲ್ಲೆಯನ್ನು ಬರ ಪೀಡಿತವೆಂದು ಘೋಷಿಸುವುದು ಸೇರಿದಂತೆ ವಿವಿಧ ಹಕ್ಕೊತ್ತಾಯಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಚಾಮರಾಜನಗರ ತಾಲೂಕು ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ರೈತ ಮುಖಂಡರು ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ, ರಸ್ತೆ ತಡೆ ನಡೆಸಿದರು. ಬಳಿಕ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ರೈತರ ಹಲವು ಸಮಸ್ಯೆಗಳ ಬಗ್ಗೆ ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಜಿಲ್ಲೆಯಲ್ಲಿ ಈ ಬಾರಿ ಮಳೆ ಕೈಕೊಟ್ಟಿದ್ದು, ಜಿಲ್ಲೆಯನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಬೇಕು. ಗ್ರಾಪಂಗಳಲ್ಲಿ ಅನಗತ್ಯ ಕಿರುಕುಳ ತಪ್ಪಿಸಬೇಕು ಎಂದು ಆಗ್ರಹಿಸಿದರು. ವಿದ್ಯುತ್ ಸಮಸ್ಯೆಗಳ ಬಗ್ಗೆ ಕೂಡಲೇ ಸೂಕ್ತ ಕ್ರಮ ವಹಿಸಬೇಕು. ಐಪಿ ಸೆಟ್‌ಗಳಿಗೆ ಹಗಲು ಹೊತ್ತಿನಲ್ಲಿ ವಿದ್ಯುತ್ ನೀಡಬೇಕು. ಶಾಲಾ, ಕಾಲೇಜು ವಿದ್ಯಾರ್ಥಿ ಗಳಿಗೆ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಮಾಡಬೇಕು. ಅಕ್ರಮ ಗಣಿಗಾರಿಕೆ ತಡೆಯಬೇಕು ಹಾಗೂ ಸಾಮಾಜಿಕ ಅರಣ್ಯ ವಲಯ, ಗೋಮಾಳ ಸಂರಕ್ಷಿಸಬೇಕು. ಕಾಡು ಪ್ರಾಣಿಗಳ ಹಾವಳಿಯಿಂದ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ನಿಷ್ಕ್ರಿಯವಾಗಿರುವ ಆರ್‌ಟಿಓ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಮುಂಗಾರು ಬೆಳೆ ಮಳೆಯಿಲ್ಲದೆ ನಾಶವಾಗಿದ್ದು ನಷ್ಟತುಂಬಿ ಕೊಡಬೇಕು, ಬ್ಯಾಂಕ್‌ಗಳಿಂದ ರೈತರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಬೇಕು. ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಸವಲತ್ತುಗಳು ರೈತರಿಗೆ ಸುಲಭವಾಗಿ ದೊರೆಯಬೇಕು. ಟನ್ ಕಬ್ಬಿಗೆ 4 ಸಾವಿರ ದರ ನಿಗದಿ ಮಾಡಬೇಕು ಹಾಗೂ ಪ್ರಸಕ್ತ ಸಾಲಿನ ಕಬ್ಬು ಕಟಾವು ವಿಳಂಬದಿಂದ ಉಂಟಾದ ನಷ್ಟ ತುಂಬಿಕೊಡಬೇಕು. ತೆಂಗಿನ ದರ ಪಾತಾಳಕ್ಕೆ ಕುಸಿದಿದ್ದು, ಇದಕ್ಕೆ ವೈಜ್ಞಾನಿಕ ಬೆಂಬಲ ಬೆಲೆ ಕೂಡಲೇ ಘೋಷಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹೊನ್ನೂರು ಬಸವಣ್ಣ, ಮಹದೇವಸ್ವಾಮಿ, ವಿಜಯ್‌ಕುಮಾರ್, ಪಾಪು, ಶಿವಬಸವಸ್ವಾಮಿ, ರೇಚಣ್ಣ, ಶಿವಮೂರ್ತಿ, ಮಾದಪ್ಪ, ನಂಜುಂಡಸ್ವಾಮಿ ಇತರರು ಇದ್ದರು.

ನಟ ಸುದೀಪ್ ಅಭಿಮಾನಿಗಳಿಂದ ಪ್ರತಿಭಟನೆ



ಚಾಮರಾಜನಗರ, ಜು.11– ನಟ ಸುದೀಪ್ ವಿರುದ್ಧ ಕೆಲವು ನಿರ್ಮಾಪಕರು ಪಿತೂರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಮಂಗಳವಾರ ಕಿಚ್ಚ ಸುದೀಪ್ ಅಭಿಮಾನಿಗಳ ಬಳಗದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಆಲ್ ಇಂಡಿಯಾ ಬಾದ್ ಷಾ ಕಿಚ್ಚ ಸುದೀಪ್ ಫ್ಯಾನ್ಸ್ ಅಸೋಸಿಯೇಷನ್ ಜಿಲ್ಲಾಧ್ಯಕ್ಷ ನಾಗೇಂದ್ರ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ನಿರ್ಮಾಪಕ ಕುಮಾರ್ ವಿರುದ್ಧ ಘೋಷಣೆ ಕೂಗಿ, ಅವರ ಭಾವಚಿತ್ರವುಳ್ಳ ಪ್ಲೆಕ್ಸ್ ಸುಟ್ಟು ಕೆಲಕಾಲ ರಸ್ತೆ ತಡೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಅಸೋಸಿಯೇಷನ್ ಜಿಲ್ಲಾಧ್ಯಕ್ಷ ನಾಗೇಂದ್ರ ಮಾತನಾಡಿ, ನಟ ಸುದೀಪ್ ವಿರುದ್ಧ ನಿರ್ಮಾಪಕ ಕುಮಾರ್ ಹಾಗೂ ಸಂಗಡಿಗರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಸುದೀಪ್ ಏಳಿಗೆ ಸಹಿಸದೇ ವ್ಯವಸ್ಥಿತವಾಗಿ ಪಿತೂರಿ ಮಾಡುತ್ತಿದ್ದು, ಇದನ್ನು ಮುಂದುವರೆಸಿದರೇ ಅಭಿಮಾನಿಗಳೇ ಅವರಿಗೆ ತಕ್ಕ ಉತ್ತರ ನೀಡಬೇಕಾಗುತ್ತದೆ. ಸುದೀಪ್ ಪರ ಕೋಟ್ಯಾಂತರ ಅಭಿಮಾನಿಗಳು ಇದ್ದು, ನಿರ್ಮಾಪಕ ಕುಮಾರ್ ತಮ್ಮ ಆರೋಪಗಳನ್ನು ಒಪ್ಪಿಕೊಂಡು ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅಭಿಮಾನಿಗಳೇ ನಿಮ್ಮ ಚಲನಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಅಸೋಸಿಯೇಷನ್ ಉಪಾಧ್ಯಕ್ಷ ಆನಂದ್, ರಂಗಸ್ವಾಮಿ, ನಾಗೇಶ್, ಹರೀಶ್, ಪ್ರವೀಣ್, ಬಸವರಾಜು, ಮಹೇಶ್, ರಂಗಸ್ವಾಮಿ ನಾಯಕ, ಮಹದೇವ ಇತರರಿದ್ದರು.

ಅರ್ಜಿ ಆಹ್ವಾನ

ಚಾಮರಾಜನಗರ, ಜು.11– ಗುಂಡ್ಲುಪೇಟೆ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈಮೇಕಿಂಗ್ (ಡಿಟಿಡಿಎಂ) ಕೋರ್ಸ್‌ನ ದ್ವಿತೀಯ ವರ್ಷಕ್ಕೆ ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ಮತ್ತು ಐಟಿಐ ನಲ್ಲಿ ಮೆಕ್ಯಾನಿಕಲ್ ವಿಭಾಗದ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ದ್ವಿತೀಯ ವರ್ಷಕ್ಕೆ ನೇರ ಪ್ರವೇಶಾತಿ ಪಡೆಯಬಹುದು. ಅರ್ಜಿ ಸಲ್ಲಿಸಲು ಜು. 21 ಕೊನೆ ದಿನ. ಮಾಹಿತಿಗೆ ಮೊ:8147384716 ಸಂಪರ್ಕಿಸಿ.



ಕರ್ನಾಟಕ ಹಾಲು ಮಹಾಮಂಡಳಿ ನೂತನ ಅಧ್ಯಕ್ಷ ಭೀಮನಾಯಕ ಅವರನ್ನು ಚಾಮರಾಜನಗರ ಹಾಲು ಒಕ್ಕೂಟದಿಂದ ಸನ್ಮಾನಿಸಲಾಯಿತು. ಈ ವೇಳೆ ಅಧ್ಯಕ್ಷ ವೈ.ಸಿ.ನಾಗೇಂದ್ರ, ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡ ಪ್ರಸಾದ್, ನಂಜುಂಡಸ್ವಾಮಿ, ಮಹಾದೇವ ಪ್ರಸಾದ್, ತಾರಿಕ್ ಅಹ್ಮದ್, ಸದಾಶಿವಮೂರ್ತಿ, ಶೀಲ, ಪುಟ್ಟರಂಗಶೆಟ್ಟಿ, ಸುನೀಲ್, ವ್ಯವಸ್ಥಾಪಕ ನಿರ್ದೇಶಕ ಎಂ.ರಾಜಶೇಖರ ಮೂರ್ತಿ ಮತ್ತು ಆಡಳಿತ ವಿಭಾಗದ ಮುಖ್ಯಸ್ಥ ಶ್ರೀಕಾಂತ್ ಉಪಸ್ಥಿತರಿದ್ದರು.

ಗೂಡ್ಸ್ ವಾಹನ ಪಲ್ಟಿ: ಓರ್ವ ಸಾವು

ಚಾಮರಾಜನಗರ, ಜು.11– ಟೈರ್ ಸಿಡಿದ ಪರಿಣಾಮ ಚಾಲಕನ ನಿಯಂತ್ರಣ ಕಳೆದುಕೊಂಡ ಗೂಡ್ಸ್ ವಾಹನ ಪಲ್ಟಿ ಹೊಡೆದು ಓರ್ವ ಸಾವನ್ನಪ್ಪಿ, ಮತ್ತೋರ್ವ ಗಾಯಗೊಂಡಿರುವ ಘಟನೆ ನಗರದ ಹೊರವಲಯದ ಬೇಡರಪುರ ಕ್ರಾಸ್ ಬಳಿ ಸೋಮವಾರ ರಾತ್ರಿ ನಡೆದಿದೆ.

ಬಿಹಾರ ಮೂಲದ ವಿನೋದ್ ಕುಮಾರ್ (39) ಮೃತಪಟ್ಟವರಾಗಿದ್ದು, ಸೂರಜ್ ಕುಮಾರ್ (21) ಗಾಯಗೊಂಡಿದ್ದಾರೆ. ಇನ್ನು ಗೂಡ್ಸ್ ವಾಹನದಲ್ಲಿದ್ದ ಮತ್ತೋರ್ವ ನಿತೀಶ್ ಕುಮಾರ್ ಹಾಗೂ ಚಾಲಕ ಸಂದೀಪ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೈಸೂರು ಜಿಲ್ಲೆಯ ಕಡಕೊಳದ ಗ್ರಾನೈಟ್ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಇವರು ಸೋಮವಾರ ರಾತ್ರಿ ಗೂಡ್ಸ್ ವಾಹನದಲ್ಲಿ ಚಾಮರಾಜನಗರ ತಾಲೂಕಿನ ನಲ್ಲೂರು ಗ್ರಾಮಕ್ಕೆ ಗ್ರಾನೈಟ್ ತುಂಬಿಕೊಂಡು ಬರುತ್ತಿದ್ದರು. ಈ ವೇಳೆ ಟೈರ್ ಸಿಡಿದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ವಾಹನ ರಸ್ತೆ ಬದಿಯ ಹಳ್ಳಕ್ಕೆ ಪಲ್ಟಿ ಹೊಡೆದಿದೆ. ಸ್ಥಳೀಯರು ತಕ್ಷಣ ಇವರನ್ನು ಚಿಕಿತ್ಸೆಗಾಗಿ ಸಿಮ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ವಿನೋದ್ ಕುಮಾರ್ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದು, ಈ ಸಂಬಂಧ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ ಬುಧವಾರ 12 ಜುಲೈ 2023

ಒಂದನೇ ಪುಟದಿಂದ

20 ಆಂತರಿಕ ಅಂಕ

ಎಲೆಕ್ಟ್ರಾನಿಕ್, ಗಣಕ ವಿಜ್ಞಾನ, ಗೃಹ ವಿಜ್ಞಾನ, ಕರ್ನಾಟಕ, ಹಿಂದುಸ್ಥಾನಿ ಸಂಗೀತ ಮತ್ತು NSQF ವಿಷಯಗಳು, IT ಆಟೋ ಮೊಬೈಲ್, ರಿಟೇಲ್, ಬ್ಯೂಟಿ, ವೆಲ್‌ನೆಸ್ ಕೋರ್ಸ್‌ಗೆ ಈ ನಿಯಮ ಇಲ್ಲ. ಇವುಗಳಿಗೆ 70:30 ಅಂಕಗಳ ಮಾದರಿಯಲ್ಲಿ ಪರೀಕ್ಷೆ ಮುಂದುವರಿಯುತ್ತದೆ. 70 ಅಂಕ ಥಿಯರಿ, ಪ್ರಾಯೋಗಿಕ ಅಂಕ 30 ಮುಂದುವರಿಕೆ ಆಗಲಿದೆ. ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ 20 ಅಂತರಿಕ ಅಂಕ ನೀಡಲಾಗುತ್ತದೆ. 100 ಅಂಕಕ್ಕೆ ಇದ್ದ ಪರೀಕ್ಷೆ ಇನ್ನು ಮುಂದೆ 80 ಅಂಕ ಥಿಯರಿ, 20 ಆಂತರಿಕ ಅಂಕಗಳಲ್ಲಿ ನಡೆಯಲಿದೆ.

ಆಂತರಿಕ ಮೌಲ್ಯಮಾಪನ ನಿಯಮ ಹೇಗೆ: ಒಂದನೇ ಕಿರು ಪರೀಕ್ಷೆ, 2 ನೇ ಕಿರುಪರೀಕ್ಷೆ ಹಾಗೂ ಮಧ್ಯ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲಿ ಉತ್ತಮವಾದ ಎರಡನ್ನು 10 ಅಂಕಕ್ಕೆ ಪರಿವರ್ತನೆ ಮಾಡುವುದು. ತರಗತಿ, ಪ್ರಾಜೆಕ್ಟ್, ಅಸೈನ್‌ಮೆಂಟ್‌ಗೆ 10 ಅಂಕಗಳು ಇರಲಿದೆ. ಇದರಲ್ಲಿ ಅಸೈನ್‌ಮೆಂಟ್ ಬರವಣಿಗೆಗೆ 5 ಅಂಕ. ಪ್ರಸ್ತುತಪಡಿಸುವಿಕೆಗೆ 3 ಅಂಕ ಹಾಗೂ ಸಂದರ್ಶನಕ್ಕೆ 2 ಅಂಕ ನೀಡಲಾಗುತ್ತದೆ.

ಈ ವರ್ಷದ ಮಧ್ಯ ವಾರ್ಷಿಕ ಪರೀಕ್ಷೆಯಲ್ಲಿ 80–20 ಅಂಕ ಮಾದರಿಯಲ್ಲಿ ಪರೀಕ್ಷೆ ನಡೆಸಲು ಆದೇಶ ಮಾಡಲಾಗಿದೆ. 80 ಅಂಕಕ್ಕೆ ವಿದ್ಯಾರ್ಥಿ ಪಾಸ್ ಆಗಲು 24 ಅಂಕ ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಕಿರು ಪರೀಕ್ಷೆ, ಮಧ್ಯ ವಾರ್ಷಿಕ ಪರೀಕ್ಷೆ ಹಾಜರಾಗದೇ ಇದ್ದರೆ 80 ಅಂಕಕ್ಕೆ 35 ಅಂಕವನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಪಡೆಯಬೇಕು. ಒಂದು ಕಿರು ಪರೀಕ್ಷೆ, ಮಧ್ಯ ವಾರ್ಷಿಕ ಪರೀಕ್ಷೆ ಹಾಜರಾಗದೇ ಇರುವವರಿಗೆ ಕೆಲ ನಿಯಮದ ಅಡಿ ಅಂಕಗಳ ಪರಿಗಣನೆಗೆ ಸೂಚನೆ ನೀಡಲಾಗಿದೆ. 2023–24ನೇ ಸಾಲಿನ ವಿದ್ಯಾರ್ಥಿಗಳಿಗೆ ಮಾತ್ರ ಈ ನಿಯಮ ಅನ್ವಯವಾಗುತ್ತದೆ. ಪುನರಾವರ್ತಿತ ವಿದ್ಯಾರ್ಥಿಗಳು, ಖಾಸಗಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಳ್ಳುವವರಿಗೆ ಈ ನಿಯಮ ಜಾರಿ ಇಲ್ಲ.100 ಅಂಕಕ್ಕೆ ಪರೀಕ್ಷೆ ಬರೆಯಬೇಕು.

ಯಶಸ್ವಿನಿ ಕಾರ್ಡ್ ವಿತರಣೆ

ಸಹಕಾರ ಸಂಘಗಳಲ್ಲಿರುವ ಎಲ್ಲಾ ರೈತರು ಇದರ ಪ್ರಯೋಜನ ಪಡೆಯಬಹುದು. ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದಲ್ಲಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿಯೂ ಯಶಸ್ವಿನಿ ಕಾರ್ಡುದಾರರಿಗೆ ಉಚಿತ ಚಿಕಿತ್ಸಾ ಸೌಲಭ್ಯ ದೊರೆಯುವಂತೆ ಮಾಡಲಾಗುವುದು ಎಂದರು. ಈ ತಿಂಗಳ ಅಂತ್ಯದೊಳಗೆ ಪ್ರತಿಯೊಬ್ಬ ಅರ್ಹ ಫಲಾನುಭವಿಗೆ ಯಶಸ್ವಿನಿ ಕಾರ್ಡ್ ನೀಡುವ ಗುರಿಯನ್ನು ಹೊಂದಲಾಗಿದೆ. ಈಗಾಗಲೇ ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಬಹುತೇಕ ಎಲ್ಲ ಕುಟುಂಬಗಳ 12.89 ಲಕ್ಷ ಕಾರ್ಡ್‌ಗಳ ಡೇಟಾ ಎಂಟ್ರಿ ಮಾಡಿ ಕಾರ್ಡ್‌ಗಳನ್ನು ತಯಾರಿಸಿ ಜನವರಿ 7ರ ಅಂತ್ಯಕ್ಕೆ ಎಲ್ಲ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಗೆ ರವಾನಿಸಲಾಗಿದೆ. ಉಪನಿಬಂಧಕರು ಸಂಬಂಧಿಸಿದ ಸಹಕಾರ ಸಂಘಗಳ ಮೂಲಕ ಫಲಾನುಭವಿಗಳಿಗೆ ಕಾರ್ಡ್‌ಗಳನ್ನು ರವಾನಿಸುವ ವ್ಯವಸ್ಥೆ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಕುಟುಂಬದಲ್ಲಿನ ಸದಸ್ಯರನ್ನು ಹೊರತು ಪಡಿಸಿ ಬೇರೆ ಸದಸ್ಯರನ್ನು ಸೇರಿಸಿರುವುದು, ಒಂದಕ್ಕಿಂತ ಹೆಚ್ಚು ಸಂಘಗಳಲ್ಲಿ ಸೇರ್ಪಡೆಯಾಗಿರುವುದು ಹೀಗೆ ಬೇರೆ ಬೇರೆ ಕಾರಣಗಳಿಂದಾಗಿ 18,153 ಕುಟುಂಬಗಳ ಕಾರ್ಡ್‌ಗಳು ಅಂದರೆ ಸುಮಾರು 70 ಸಾವಿರ ಸದಸ್ಯರಿಗೆ ಸಂಬಂಧಿಸಿದಂತೆ ಡೇಟಾ ಎಂಟ್ರಿ ಮಾಡಲು ಸಾಧ್ಯವಾಗಿಲ್ಲ ಎಂದು ಕಾರ್ಡ್ ಮುದ್ರಣಕಾರರು ತಿಳಿಸಿದ್ದಾರೆಂದು ಮಾಹಿತಿ ನೀಡಿದರು. ಇಂತಹ ದೋಷಗಳನ್ನು ಜಿಲ್ಲಾವಾರು ಪರಿಶೀಲಿಸಿ ಅರ್ಹ ಫಲಾನುಭವಿಗಳು ಎಂದು ದೃಢಪಟ್ಟಲ್ಲಿ ಅಂತಹ ಎಲ್ಲ ಸದಸ್ಯರಿಗೆ ಈ ತಿಂಗಳ ಅಂತ್ಯದೊಳಗೆ ಕಾರ್ಡ್‌ಗಳನ್ನು ವಿತರಿಸಲಾಗುವುದು. ಆದರೂ ಅರ್ಹ ಫಲಾನುಭವಿಗಳಿಗೆ ಕಾರ್ಡ್ ಲಭ್ಯವಾಗದೆ ಇರುವುದರಿಂದ ಚಿಕಿತ್ಸೆ ಪಡೆಯಲು ವ್ಯತ್ಯಯವಾಗದಂತೆ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದೆ.

ಈ ಯೋಜನೆಯಡಿ ನೋಂದಣಿಯಾಗಿರುವ 45 ಲಕ್ಷ ಸದಸ್ಯರಿಗೆ ಸಂಬಂಧಿಸಿದಂತೆ ಪ್ರತಿ ಕುಟುಂಬಕ್ಕೆ ಒಂದು ಕಾರ್ಡ್‌ನಂತೆ 12.89 ಲಕ್ಷ ಕಾರ್ಡ್‌ಗಳನ್ನು ಫಲಾನುಭವಿ ಕುಟುಂಬಗಳಿಗೆ ಜ.7ರೊಳಗೆ ಉಪನಿಬಂಧಕರ ಕಚೇರಿ ಮೂಲಕ ರವಾನಿಸಲಾಗಿದೆ ಎಂದರು. ಸದಸ್ಯ ಕೆ.ಎ.ತಿಪ್ಪೆಸ್ವಾಮಿ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಸಹಕಾರಿಗಳು ಮತ್ತು ಜನಪ್ರತಿನಿಧಿಗಳು ಯಶಸ್ವಿನಿ ಯೋಜನೆಯನ್ನು ಮರು ಜಾರಿಗೊಳಿಸಲು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಸರ್ಕಾರ ಕಳೆದ ಬಜೆಟ್‌ನಲ್ಲೇ ಪರಿಷ್ಕೃತ ಯೋಜನೆಯನ್ನು ಜಾರಿಗೊಳಿಸಿ ಘೋಷಣೆ ಮಾಡಿದೆ.

ಇದನ್ನು ಎರಡು ಬಾರಿ ವಿಸ್ತರಣೆ ಮಾಡಲಾಗಿತ್ತು. ಒಟ್ಟು 30 ಲಕ್ಷ ಸದಸ್ಯರನ್ನು ನೋಂದಣಿ ಮಾಡುವ ಗುರಿ ನಿಗದಿಪಡಿಸಿದ್ದು, ಈಗಾಗಲೇ 45 ಲಕ್ಷಕ್ಕೂ ಹೆಚ್ಚು ಸದಸ್ಯರು ನೋಂದಣಿ ಮಾಡಿಕೊಂಡಿದ್ದಾರೆ. ರಾಜ್ಯಾದ್ಯಂತ ಇರುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಫಲಾನುಭವಿಗಳಿಗೆ ಚಿಕಿತ್ಸೆ ಕಲ್ಪಿಸಲು ಈ ಯೋಜನೆಯ ಅವಧಿಯನ್ನು ಡಿಸೆಂಬರ್ 23ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಉತ್ತರಿಸಿದರು.

ಅಪಘಾತಗಳಿಗೆ ರಹದಾರಿಯಾಗಿದೆ!

ಈ ಅವೈಜ್ಞಾನಿಕ ರಸ್ತೆ ನಿರ್ಮಾಣದಿಂದ ಇದುವರೆಗೂ 132 ಮಂದಿ ಪ್ರಾಣ ಕಳೆದುಕೊಂಡಿದ್ದು, ಸಾವಿರಕ್ಕೂ ಹೆಚ್ಚುಮಂದಿ ಗಾಯಗೊಂಡಿದ್ದಾರೆ ಎಂದು ವಿವರಿಸಿದರು. ರಸ್ತೆ ಉದ್ಘಾಟನೆಯಾದ ಮಾರ್ಚ್ ತಿಂಗಳಿನಲ್ಲಿ 19 ಮಾರಣಾಂತಿಕ, 42 ಮಾರಣಾಂತಿಕವಲ್ಲದ ಅಪಘಾತಗಳು ನಡೆದು 20 ಮಂದಿ ಮೃತಪಟ್ಟು, 63 ಮಂದಿ ಗಾಯಗೊಂಡಿದ್ದಾರೆ.

ಏಪ್ರಿಲ್‌ನಲ್ಲಿ 75 ಅಪಘಾತಗಳು ಆಗಿ, 23 ಜನ ಸತ್ತಿದ್ದು, 73 ಮಂದಿ ಗಾಯಗೊಂಡಿದ್ದಾರೆ. ಮೇ ತಿಂಗಳಲ್ಲಿ 94 ಅಪಘಾತಗಳಲ್ಲಿ 29 ಮಂದಿ ಪ್ರಾಣ ಕಳೆದುಕೊಂಡು 93 ಮಂದಿ ಗಾಯಗೊಂಡಿದ್ದು, ಕಳೆದ ತಿಂಗಳು ಜೂ.ನಲ್ಲಿ 77 ಅಪಘಾತಗಳು ಆಗಿ 28 ಮಂದಿ ಸಾವನ್ನಪ್ಪಿ, 96 ಮಂದಿ ಗಾಯಗೊಂಡಿದ್ದಾರೆ.

ಇದುವರೆಗೂ 84 ಮಾರಣಾಂತಿಕ, 223 ಮಾರಣಾಂತಿಕವಲ್ಲದ ಅಪಘಾತಗಳು ಆಗಿವೆ ಎಂದು ವಿವರಿಸಿದರು. ರಸ್ತೆ ತಿರುವುಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿಲ್ಲ. ಪಥ ಶಿಸ್ತು ಪಾಲನೆ ಆಗುತ್ತಿಲ್ಲ. ಅಗತ್ಯ ಇರುವ ಕಡೆ ಸುರಕ್ಷತಾ ಸೂಚನಾ ಫಲಕಗಳನ್ನು ಅಳವಡಿಸದಿರುವುದರಿಂದ ಸಮಸ್ಯೆ ಆಗುತ್ತಿದೆ. ರಸ್ತೆ ಬದಿಯ ಬೇಲಿ ಕಿತ್ತುಹೋಗಿದ್ದು, ಜನ ರಸ್ತೆಗೆ ಬರುತ್ತಿದ್ದಾರೆ. ಹೀಗಾಗಿ ಸಮಸ್ಯೆಗಳು ಹೆಚ್ಚಾಗುತ್ತಿವೆ. ಇತ್ತೀಚೆಗೆ ಸಂಚಾರ ವಿಭಾಗದ ಎಡಿಜಿಪಿಗಳನ್ನು ಸ್ಥಳ ಪರಿಶೀಲನೆಗೆ ಕಳುಹಿಸಲಾಗಿತ್ತು. ಪ್ರತಿ 35 ಕಿ.ಮೀ.ಒಂದರಂತೆ ಹೆದ್ದಾರಿ ಗಸ್ತು ವಾಹನಗಳಿರಬೇಕು. ಅಲ್ಲಲ್ಲಿ ವೇಗದ ಮಿತಿ ಅಳತೆಗೆ ಇಂಟರ್‌ಸೆಪ್ಟರ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು ವಿವರಿಸಿದರು.

ಪಿಎಸ್‌ಐ ನೇಮಕಾತಿ ಸದ್ಯಕ್ಕಿಲ್ಲ: ಪಿಎಸ್‌ಐ ನೇಮಕಾತಿಗೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ಬಾಕಿಯಿರುವ ಪ್ರಕರಣ ಇತ್ಯರ್ಥವಾಗದ ಹೊರತು ಹೊಸ ಪಿಎಸ್‌ಐ ನೇಮಕಾತಿಗೆ ಕ್ರಮ ಕೈಗೊಳ್ಳುವುದಿಲ್ಲ ಎಂದು ಇದೇ ಸಂದರ್ಭದಲ್ಲಿ ಸಿದ್ದು ಪಾಟೀಲ್ ಅವರ ಪ್ರತ್ಯೇಕ ಪ್ರಶ್ನೆಗೆ ಉತ್ತರಿಸಿದರು. 2022ರ ಜೂ.15ರಂದು ಕಾನ್ಸ್‌ಟೇಬಲ್‌ಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ಅದು ಪೂರ್ಣಗೊಂಡ ಬಳಿಕ ಖಾಲಿ ಹುದ್ದೆಗೆ ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು.

ಉಳಿದಂತೆ 545 ಪಿಎಸ್‌ಐಗಳ ನೇಮಕಾತಿಗಳ ಪ್ರಕರಣ ಹೈಕೋರ್ಟ್‌ನ ವಿಚಾರಣೆಯಲ್ಲಿದೆ. ಅದು ಇತ್ಯರ್ಥ ಆಗದ ಹೊರತು ಹೆಚ್ಚುವರಿ 400 ಪಿಎಸ್‌ಐಗಳ ನೇಮಕಾತಿಯನ್ನು ಕೈಗೆತ್ತಿಕೊಳ್ಳಲಾಗುವುದಿಲ್ಲ. ಒಂದು ವೇಳೆ 545 ಪಿಎಸ್‌ಐಗಳ ನೇಮಕಾತಿಯನ್ನು ಪೂರ್ಣಗೊಳಿಸದೆ 2ನೇ ಹಂತದ ನೇಮಕಾತಿಯನ್ನು ಕೈಗೆತ್ತಿಕೊಂಡರೆ ಜೇಷ್ಠತೆಯ ಗೊಂದಲಗಳು ಸೃಷ್ಟಿಯಾಗುತ್ತವೆ ಎಂದು ಹೇಳಿದರು.

ಚುನಾವಣೆ ವೇಳೆ ಬಂದೂಕು ಠಾಣೆಗೊಪ್ಪಿಸುವುದು ಕಡ್ಡಾಯ: ಚುನಾವಣೆಯ ವೇಳೆ ಬಂದೂಕುಗಳನ್ನು ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡುವುದು ಕಡ್ಡಾಯ. ಒಂದು ವೇಳೆ ಅನಿವಾರ್ಯವಾಗಿ ಬಂದೂಕುಗಳು ರೈತರ ಬಳಿಯೇ ಉಳಿಯಬೇಕು ಎಂಬುದಾದರೆ ಸಂಬಂಧಪಟ್ಟ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸುವಂತೆ ಅಶೋಕ್ ಕುಮಾರ್ ರೈ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು. ಚುನಾವಣೆ ಆಯೋಗದ ನಿಯಮದ ಪ್ರಕಾರ ಶಾಂತಿ ಸುವ್ಯವಸ್ಥೆ ಪಾಲನೆಗಾಗಿ ಬಂದೂಕುಗಳನ್ನು ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡಲಾಗುತ್ತದೆ. ಇದಕ್ಕಾಗಿ ಯಾವುದೇ ರೀತಿಯ ಶುಲ್ಕವಿಲ್ಲ. ಒಂದು ವೇಳೆ ಯಾರಾದರೂ ಶುಲ್ಕ ಪಡೆಯುವ ಮಾಹಿತಿ ಇದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು. ಬೆಳೆಗಳ ರಕ್ಷಣೆಗಾಗಿ ಬಂದೂಕುಗಳು ಅನಿವಾರ್ಯ ಎಂಬ ಪರಿಸ್ಥಿತಿ ಇದ್ದರೆ ಅಂತಹ ರೈತರು ವಿನಾಯಿತಿ ಸಮಿತಿಗಳ ಮುಂದೆ ಅರ್ಜಿ ಸಲ್ಲಿಸಿ ಬಂದೂಕುಗಳನ್ನು ತಮ್ಮ ಬಳಿಯೇ ಇರಿಸಿಕೊಳ್ಳಲು ಪೂರ್ವಾನುಮತಿ ಪಡೆಯಬಹುದೆಂದು ಸಲಹೆ ನೀಡಿದರು.

ತಂಡ ಭೇಟಿ; ಮಾಹಿತಿ ಸಂಗ್ರಹ

ಆ ತಾಯಿಯ ಆಕ್ರಂದನ ಮುಗಿಲು ಮುಟ್ಟಿತ್ತು. ನನ್ನ ಮಗ ಸ್ನೇಹಿತರು ಅಂದರೆ ಪ್ರಾಣ ಬಿಡುತ್ತಿದ್ದ. ಯಾರಿಗೂ ಕೆಟ್ಟದು ಮಾಡಲಿಲ್ಲ. ಆದರೂ ನನ್ನ ಮಗನನ್ನು ಕೊಲೆ ಮಾಡಲು ಏನು ಕಾರಣ ಅಂತ ತಿಳಿಯುತ್ತಿಲ್ಲ. ನಮ್ಮ ಕುಟುಂಬಕ್ಕೆ ಆಧಾರವಾಗಿರುವ ಮಗನನ್ನು ಕಳೆದುಕೊಂಡಿರುವ ನಾವು ಈಗ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ವೇಣುಗೋಪಾಲ್ ತಾಯಿ ಗೋಳಾಡಿದರು. ಈ ಸಂದರ್ಭದಲ್ಲಿ ಪ್ರಕರಣ ಹೇಗೆ ನಡೆಯಿತು ಎಂಬ ಬಗ್ಗೆ ಸಿ.ಟಿ.ರವಿ ಅವರು ವೇಣುಗೋಪಾಲ್ ಪತ್ನಿ ಪೂರ್ಣಿಮಾ ಅವರಿಂದ ಮಾಹಿತಿ ಪಡೆದರು. ನನ್ನ ಪತಿ ಹಿಂದೂ ಧರ್ಮ ಉಳಿಸಲು ಮಾಡಿದ ಹೋರಾಟ ತಪ್ಪೇ ಎಂದು ಪ್ರಶ್ನಿಸಿದ ಪೂರ್ಣಿಮಾ, ನನ್ನ ಗಂಡ ಯಾರ ಮನಸ್ಸಿಗೂ ಸ್ವಲ್ಪವೂ ನೋವು ಮಾಡುತ್ತಿರಲಿಲ್ಲ. ಅಂತಹ ಅಮಾಯಕನನ್ನು ಸ್ವಲ್ಪವೂ ಕನಿಕರ ಇಲ್ಲದೆ ಚುಚ್ಚಿ, ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ನೋವು ತೋಡಿಕೊಂಡರು. ವೇಣು ಗೋಪಾಲ್ ಅವರ ಮನೆಯಲ್ಲಿ ಸುಮಾರು ಒಂದು ಗಂಟೆಗಳ ಕಾಲ ಇದ್ದ ಸಿ.ಟಿ.ರವಿ ನೇತೃತ್ವದ ತಂಡ ಪ್ರಕರಣದ ಬಗ್ಗೆ ಸಮಗ್ರ ವಿವರ ಪಡೆದು ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು. ಇದಕ್ಕೂ ಮೊದಲು ಸಿ.ಟಿ.ರವಿ ನೇತೃತ್ವದ ತಂಡ ತಿ.ನರಸೀಪುರದ ತಲಕಾಡು ರಸ್ತೆಯಲ್ಲಿ ವೇಣು ಗೋಪಾಲ್ ಕೊಲೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ತರುವಾಯ ಘಟನೆ ನಡೆಯುವಾಗ ಸ್ಥಳದಲ್ಲಿದ್ದ ಯುವ ಬ್ರಿಗೇಡ್ ಕಾರ್ಯಕರ್ತರಿಂದ ಕೂಡ ಮಾಹಿತಿ ಕಲೆ ಹಾಕಿದರು. ಶಾಸಕರಾದ ಡಾ.ಅಶ್ವತ್ಥ್ ನಾರಾಯಣ, ಶ್ರೀವತ್ಸ, ಮಾಜಿ ಶಾಸಕ ಎನ್.ಮಹೇಶ್, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಬಿಜೆಪಿ ಮುಖಂಡ ವೈ.ವಿ.ರವಿಶಂಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ತೆರಿಗೆ ಹೊರೆ ತಗ್ಗಿಸುವಂತೆ ಡಿಸಿಗೆ ಕೈಗಾರಿಕೋದ್ಯಮಿಗಳ ಮನವಿ

ಮೈಸೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಅಥಾರಿಟಿಗೂ ಬೇಡಿಕೆ

ಮೈಸೂರು, ಜು. 11 (ಆರ್‌ಕೆ)– ಹೆಚ್ಚಳವಾಗಿರುವ ಕೈಗಾರಿಕೆಗಳ ಆಸ್ತಿ ತೆರಿಗೆ ಹೊರೆ ಇಳಿಸುವಂತೆ ಕೈಗಾರಿಕೋದ್ಯಮಿಗಳು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರನ್ನು ಕೋರಿಕೊಂಡಿದ್ದಾರೆ.

ಮೈಸೂರಿನ ಹೆಬ್ಬಾಳು ಕೈಗಾರಿಕಾ ವಸಾಹತು ಉತ್ಪಾದಕರ ಸಂಘದ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹೆಬ್ಬಾಳು, ಹೂಟಗಳ್ಳಿ, ಕೂರ್ಗಳ್ಳಿ, ಮೇಟಗಳ್ಳಿ ಹಾಗೂ ಯಾದವಗಿರಿ ಕೈಗಾರಿಕೋದ್ಯಮಿಗಳು, ವಾಣಿಜ್ಯ ದರಕ್ಕಿಂತ ಕಡಿಮೆ ದರದಲ್ಲಿ ಸರ್ಕಾರದ ಆದೇಶದಂತೆ ಕೈಗಾರಿಕಾ ಆಸ್ತಿ ತೆರಿಗೆಯನ್ನು ನಿರ್ಧರಿಸಬೇಕೆಂದು ಆಗ್ರಹಿಸಿದರು.

ಅದೇ ವೇಳೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಮೈಸೂರು ಕೈಗಾರಿಕೆಗಳ ಸಂಘ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಪರಿಷತ್ ಪದಾಧಿಕಾರಿಗಳು, ಹೂಟಗಳ್ಳಿ ನಗರಸಭೆ ವ್ಯಾಪ್ತಿಗೆ ಹೂಟಗಳ್ಳಿ, ಬೆಳವಾಡಿ, ಹೆಬ್ಬಾಳು, ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳು ಬರಲಿದ್ದು, ನಾವು ಆಸ್ತಿ ತೆರಿಗೆಯನ್ನು ನಗರಸಭೆಗೆ ಪಾವತಿಸಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ತೆರಿಗೆ ಪಾವತಿಸಿಕೊಂಡಿರುವ ನಗರಸಭೆಯು ರಸ್ತೆ, ನೀರು, ಬೀದಿದೀಪ, ತ್ಯಾಜ್ಯ ವಿಲೇವಾರಿ ಸೇರಿದಂತೆ ಕೈಗಾರಿಕಾ ಪ್ರದೇಶಗಳಿಗೆ ಮೂಲ ಸೌಲಭ್ಯ ಕಲ್ಪಿಸಬೇಕು. ಆದರೆ ನಾವು ಕೆಐಎಡಿಬಿಗೆ ನಿರ್ವಹಣಾ ವೆಚ್ಚ ಪಾವತಿಸುವ ಅಗತ್ಯವಿಲ್ಲ. ಕೈಗಾರಿಕಾ ಪ್ರದೇಶ ಮತ್ತು ಎಸ್ಟೇಟ್‌ಗಳು ಹೂಟಗಳ್ಳಿ ನಗರಸಭೆಗೆ ಹಸ್ತಾಂತರವಾಗದಿರುವ ಕಾರಣ ಸೌಲಭ್ಯ ನಿರ್ವಹಣೆ ಮಾಡುತ್ತಿಲ್ಲ. ಆದರೆ, ತೆರಿಗೆ ವಸೂಲಿ ಮಾಡಿ ಖಾತೆ ಮಾಡಲಾಗುತ್ತಿದೆ ಎಂಬುದನ್ನು ಕೈಗಾರಿಕೋದ್ಯಮಿಗಳು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.



ಮೈಸೂರಿನ ಹೆಬ್ಬಾಳು ಕೈಗಾರಿಕಾ ವಸಾಹತು ಉತ್ಪಾದಕರ ಸಂಘದ ಕಚೇರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಹೂಟಗಳ್ಳಿ ನಗರಸಭಾ ಆಯುಕ್ತ ಟಿ.ಎನ್. ನರಸಿಂಹಮೂರ್ತಿ ಮಾತನಾಡಿದರು. (ಎಡದಿಂದ) ಹೀಮಾ ಕಾರ್ಯದರ್ಶಿ ರಾಮಕೃಷ್ಣ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಹಾಗೂ ಹೀಮಾ ಅಧ್ಯಕ್ಷ ಪ್ರಕಾಶ್‌ಗೌಡರನ್ನು ಚಿತ್ರದಲ್ಲಿ ಕಾಣಬಹುದು.

ಪ್ರಸ್ತುತ ಹೂಟಗಳ್ಳಿ ನಗರಸಭೆಯು ಆಸ್ತಿ ಮೌಲ್ಯದ ಮೇಲೆ ಖಾಲಿ ನಿವೇಶನಗಳಿಗೆ ಚದರಡಿಗೆ 20 ಪೈಸೆ, ವಸತಿ ಕಟ್ಟಡಗಳಿಗೆ 50 ಪೈಸೆ, ವಾಣಿಜ್ಯ ಕಟ್ಟಡಗಳಿಗೆ 1.50 ರೂ. ಸಣ್ಣ ಕೈಗಾರಿಕೆಗಳಿಗೆ 1 ರೂ. ಮಧ್ಯಮ ಕೈಗಾರಿಕೆಗಳಿಗೆ 1.50 ರೂ. ಭಾರೀ ಕೈಗಾರಿಕೆಗಳಿಗೆ 2 ರೂ. ನಂತೆ ತೆರಿಗೆ ವಿಧಿಸಲಾಗುತ್ತಿದೆ. ಆದರೆ ಪ್ರಸ್ತುತ ಆಸ್ತಿ ತೆರಿಗೆಯನ್ನು ವಾಣಿಜ್ಯ ದರಕ್ಕಿಂತ ಕಡಿಮೆ ದರ ನಿಗದಿಸಬೇಕೆಂದು ಅವರು ಮನವಿ ಮಾಡಿದರು.

ಆದ್ದರಿಂದ ಕೈಗಾರಿಕಾ ಆಸ್ತಿ ತೆರಿಗೆ ದರವನ್ನು ಶೇ. 0.40 ರಂತೆ ಪರಿಷ್ಕರಿಸಿ ವಸೂಲಾಗುವ ತೆರಿಗೆಯಲ್ಲಿ ಶೇ. 70 ರಷ್ಟು ಹಣವನ್ನು ಕೈಗಾರಿಕಾ ಪ್ರದೇಶದ ನಿರ್ವಹಣೆಗೆ ಬಳಸುವಂತೆ ಆದೇಶಿಸಿ ಎಂದ ಅವರು, ಕೆಐಎಡಿಬಿಗೆ ಶುಲ್ಕ ಪಾವತಿಸಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರು ಮಾಡಿಸಿಕೊಂಡ ನಂತರ ಮತ್ತೆ ನಗರಸಭೆಯಲ್ಲೂ ಲೈಸೆನ್ಸ್ ಪಡೆಯಬೇಕಾಗಿದೆ. ಈ ವ್ಯವಸ್ಥೆ ತಪ್ಪಿಸಬೇಕೆಂದೂ ಮನವಿ ಮಾಡಿದ್ದಾರೆ.

ಈಗಾಗಲೇ ಹಲವು ಬಾರಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಅಥಾರಿಟಿ ಮಾಡುವುದಾಗಿ ಘೋಷಣೆ ಮಾಡಲಾಗಿತ್ತಾದರೂ, ಅನುಷ್ಠಾನವಾಗಲಿಲ್ಲ. ಅದು ಸಾಕಾರಗೊಂಡಲ್ಲಿ ಒಂದೇ ಕಡೆ ತೆರಿಗೆ ಪಾವತಿ, ಮೂಲಸೌಕರ್ಯ ಅಭಿವೃದ್ಧಿ ಯಾಗಲಿದೆ ಎಂದು ಕೈಗಾರಿಕೋದ್ಯಮಿಗಳು ಇದೇ ಸಂದರ್ಭ ಅಭಿಪ್ರಾಯಪಟ್ಟಿದ್ದಾರೆ.

ಸುದೀರ್ಘ ಚರ್ಚೆ ಬಳಿಕ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು, ತೆರಿಗೆ ಇಳಿಸುವ ಸಂಬಂಧ ಹೂಟಗಳ್ಳಿ ನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸುತ್ತೇನೆ. ಸ್ವಚ್ಛತೆ ದೃಷ್ಟಿಯಿಂದ ಕೈಗಾರಿಕಾ ತ್ಯಾಜ್ಯ ಸಂಗ್ರಹಕ್ಕೆ ಜಾಗ ಗುರುತಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರು.

ಹೂಟಗಳ್ಳಿ ನಗರಸಭೆ ಕಮಿಷನರ್ ಟಿ.ಎನ್. ನರಸಿಂಹಮೂರ್ತಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್, ಹೆಬ್ಬಾಳು ಕೈಗಾರಿಕಾ ವಸಾಹತು ಉತ್ಪಾದಕರ ಸಂಘದ ಅಧ್ಯಕ್ಷ ಪ್ರಕಾಶ್ ಗೌಡ, ಕಾರ್ಯದರ್ಶಿ ರಾಮಕೃಷ್ಣ, ಖಜಾಂಚಿ ಚನ್ನಕೇಶವ, ಮೋಹನಕೃಷ್ಣ, ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಅಧ್ಯಕ್ಷ ಕೆ.ಬಿ. ಲಿಂಗರಾಜು, ಕೈಗಾರಿಕೋದ್ಯಮಿಗಳಾದ ಎ.ಎಸ್. ಸತೀಶ್, ರಾಘವೇಂದ್ರ, ರಾಮಕೃಷ್ಣೇಗೌಡ ಸೇರಿದಂತೆ ಹಲವರು ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಂತರ ಜಿಲ್ಲಾಧಿಕಾರಿಗಳು ಕೈಗಾರಿಕೋದ್ಯಮಿಗಳೊಂದಿಗೆ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಗುಂಡಿ ಬಿದ್ದಿರುವುದು, ರಸ್ತೆ ಪಕ್ಕ ಕಸ ಸುರಿದಿರುವುದು, ಎಲ್ಲೆಂದರಲ್ಲಿ ಪೆಟ್ಟಿಗೆ ಅಂಗಡಿಗಳು ತಲೆ ಎತ್ತಿರುವುದರತ್ತ ಗಮನಹರಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

> ಈಗ ನಾವು ಪಾವತಿಸುತ್ತಿರುವ ತೆರಿಗೆಯು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾಣಿಜ್ಯ ಕಟ್ಟಡಗಳ ತೆರಿಗೆಯಷ್ಟಿದೆ. ಈಗಾಗಲೇ ಸಂಕಷ್ಟದಲ್ಲಿರುವ ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ಹೊರೆಯಾಗಲಿದೆ ಎಂದು ಕೈಗಾರಿಕೋದ್ಯಮಿಗಳು ತಮ್ಮ ಅಳಲು ತೋಡಿಕೊಂಡರು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೈಗಾರಿಕೋದ್ಯಮಿಗಳು

ಈ ಬಾರಿ ಮಹಿಷಾ ದಸರಾ ಆಚರಣೆ

● ಮಹಿಷಾ ದಸರಾ ಆಚರಣೆ ಸಮಿತಿ ನಿರ್ಧಾರ ● ತಮ್ಮ ನಿಲುವು ಬೆಂಬಲಿಸಿದ ಉಸ್ತುವಾರಿ ಸಚಿವರಿಗೆ ಅಭಿನಂದನೆ



ಮೈಸೂರು, ಜು.11(ಜಿಎ)– ಮಹಿಷಾ ದಸರಾ ಆಚರಣೆ ಸಂಬಂಧ ಸಕಾರಾತ್ಮಕ ಹೇಳಿಕೆ ನೀಡಿರುವ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮಹಿಷಾ ದಸರಾ ಆಚರಣೆ ಸಮಿತಿ ಅಭಿನಂದನೆ ತಿಳಿಸಿದೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮಹಿಷಾ ದಸರಾ ಆಚರಣೆಗೆ ಅವಕಾಶ ಕೋರಿ ಸಮಿತಿ ವತಿಯಿಂದ ಈವರೆಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ಆದರೆ ಆಚರಣೆ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು, ಸಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ಎಲ್ಲಾ ಧಾರ್ಮಿಕ ಆಚರಣೆಗಳಿಗೂ ಸಂವಿಧಾನದಲ್ಲಿ ಅವಕಾಶವಿದೆ. ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಹಾಗಾಗಿ ಯಾವುದೇ ಆಚರಣೆಗೆ ತೊಡಕು ಮಾಡುವುದಿಲ್ಲ ಎಂದಿರುವುದು ಸೂಕ್ತವಾಗಿದೆ. ಇದಕ್ಕಾಗಿ ಸಚಿವರು ಹಾಗೂ ರಾಜ್ಯ ಸರ್ಕಾರಕ್ಕೆ ಅಭಿನಂದನೆ ತಿಳಿಸುತ್ತೇನೆ ಎಂದರು.

ಈ ಬಾರಿ ಅಕ್ಟೋಬರ್ 13ರಂದು ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ಮುಂಭಾಗ ಮಹಿಷಾ ದಸರಾ ಆಚರಿಸಲಾಗುವುದು. ಆರಂಭದ 5 ವರ್ಷ ಯಾವುದೇ ತೊಂದರೆ ಇಲ್ಲದೆ ಜರುಗಿದ ಮಹಿಷಾ ದಸರಾಗೆ ಬಿಜೆಪಿ ಸರ್ಕಾರ ಅಡ್ಡಿಯುಂಟು ಮಾಡಿತ್ತು. ಆ ಮೂಲಕ ಸಂವಿಧಾನದ ಆಶಯಗಳನ್ನು ಧಿಕ್ಕರಿಸಲಾಗಿತ್ತು. ಅಧಿಕಾರಿಗಳೂ ಸರ್ಕಾರದ ಕೈಗೊಂಬೆಯಂತೆ ವರ್ತಿಸಿದರು. ಸಾಂವಿಧಾನಿಕ ಹಕ್ಕನ್ನು ಕಸಿಯಲು ಯಾರಿಗೂ ಅಧಿಕಾರವಿಲ್ಲ. ಹಾಗಾಗಿ ಈ ಹಿಂದೆ ಮಹಿಷಾ ದಸರಾ ಆಚರಣೆ ತಡೆದ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರ ಮೇಲೆ ರಾಜ್ಯ ಸರ್ಕಾರ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ನಂತರ ಪ್ರೊ.ಮಹೇಶ್ ಚಂದ್ರಗುರು ಮಾತನಾಡಿ, ನಾವು ಸರ್ಕಾರದ ವತಿಯಿಂದ ಆಚರಿಸಲಾಗುವ ದಸರಾ ಮಹೋತ್ಸವವನ್ನು ವಿರೋಧಿಸುವುದಿಲ್ಲ. ಸರ್ವಧರ್ಮಗಳ ಆಚರಣೆಗಳನ್ನೂ ಗೌರವಿಸುತ್ತೇವೆ. ಹೀಗೆಯೇ ಮಹಿಷಾ ದಸರಾ ಆಚರಣೆಗೂ ಅಡ್ಡಿ ಉಂಟು ಮಾಡಬಾರದು. ಮಹಿಷಾ ಓರ್ವ ಚಾರಿತ್ರಿಕ ಪುರುಷನೇ ಹೊರತು ರಾಕ್ಷಸನಲ್ಲ. ಆದ್ದರಿಂದ ಮಹಿಷಾ ದಸರಾ ಆಚರಿಸುತ್ತೇವೆ. ಬಿಜೆಪಿ ಸರ್ಕಾರವಿದ್ದಾಗ ಉದ್ದೇಶಪೂರ್ವಕವಾಗಿ ಅನುಮತಿ ನೀಡಿರಲಿಲ್ಲ. ಆದರೂ ಅಶೋಕಪುರಂನಲ್ಲಿ ಆಚರಿಸಿದೆವು. ಆಚರಣೆಯೇ ತಪ್ಪು ಎನ್ನುವುದಾದರೆ ಅಂದೇ ನಮ್ಮನ್ನು ಬಂಧಿಸಬೇಕಿತ್ತಲ್ಲವೇ ಎಂದು ಪ್ರಶ್ನಿಸಿದರು.

ಮೈಸೂರಿನಲ್ಲಿ ಮಾತ್ರವಲ್ಲ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮಹಿಷಾ ದಸರಾ ಆಚರಿಸಲಾಗಿದೆ. ಈ ಹಿಂದೆ ಮಂಟೇಲಿಂಗಯ್ಯ ಮತ್ತು ಬಸವಲಿಂಗಯ್ಯ ನೇತೃತ್ವದಲ್ಲಿ ಆಚರಣೆ ಮಾಡಿದ್ದೇವೆ. ಚಾಮುಂಡಿಗೆ ಪೌರಾಣಿಕ ಹಿನ್ನೆಲೆಯಿದ್ದರೆ ಮಹಿಷಾ ಬಗ್ಗೆ ಐತಿಹಾಸಿಕ ಪುರಾವೆಗಳಿವೆ. ಹಾಗಾಗಿ ಇಬ್ಬರೂ ಒಂದೇ ಕಾಲಘಟ್ಟದವರಲ್ಲ. ಜಯಚಾಮರಾಜ ಒಡೆಯರ್ ಅವರು ತಮ್ಮ ಪತ್ರದಲ್ಲಿ ಮಹಿಷುರೂ ಎಂದು ನಮೂದಿಸಿದ್ದರ ಬಗ್ಗೆ ಈಗಲೂ ಅರಮನೆಯಲ್ಲಿ ದಾಖಲೆಗಳಿವೆ ಎಂದರು.

ದಸರೆಯಲ್ಲಿ ಮಹಾರಾಜರ ಮೆರವಣಿಗೆ ಅಂತ್ಯವಾದ ಬಳಿಕ ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಾನೂ ಭಾಗವಹಿಸಿದ್ದೆ. ಅಂಬಾರಿಯಲ್ಲಿ ಚಾಮುಂಡಿ ಫೋಟೋ ಬೇಡ, ಜಾತ್ಯತೀತ ರಾಷ್ಟ್ರವಾಗಿರುವುದರಿಂದ ಎಲ್ಲಾ ಧರ್ಮ ಸಂಸ್ಥಾಪಕರ ಫೋಟೋ ಇಡುವಂತೆ ಆಗ್ರಹಿಸಿದ್ದೆ. ಈ ಮಾತಿಗೆ ಇಂದಿಗೂ ಬದ್ಧ. ಚಾಮುಂಡಿಬೆಟ್ಟದಲ್ಲಿರುವ ವಿಕೃತ ಮಹಿಷಾಸುರ ವಿಗ್ರಹ ತೆರವುಗೊಳಿಸಿ, ರಾಜನ ರೀತಿಯಿರುವ ಮಹಿಷ ವಿಗ್ರಹ ಸ್ಥಾಪಿಸಬೇಕು. ಎಲ್ಲಾ ವಿವಿಗಳಲ್ಲಿ ಮಹಿಷಾ ಅಧ್ಯಯನ ಕೇಂದ್ರ ಸ್ಥಾಪಿಸಿ, ಪಠ್ಯದಲ್ಲೂ ಅಳವಡಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಿಷ ದಸರಾ ಆಚರಣೆ ಸಮಿತಿಯ ಪ್ರೊ.ಕೆಎಸ್.ಭಗವಾನ್, ಲೇಖಕ ಸಿದ್ದಸ್ವಾಮಿ, ದಲಿತ ವೆಲ್ಫೇರ್ ಟ್ರಸ್ಟ್‌ನ ಚಿಕ್ಕ ಅನ್ನದಾನಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಜನಪ್ರಿಯತೆ ತಡೆಯಲು ಅಕ್ಕಿ ನೀಡದ ಕೇಂದ್ರ ಬಿಜೆಪಿ ಸರ್ಕಾರ

ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಆಕ್ರೋಶ

ಮೈಸೂರು, ಜು.11(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನ್ನಭಾಗ್ಯ ಯೋಜನೆಯಿಂದ ಮತ್ತಷ್ಟು ಜನಪ್ರಿಯರಾಗುತ್ತಾರೆ ಎಂಬ ಕಾರಣಕ್ಕೆ ಕೇಂದ್ರದ ಬಿಜೆಪಿ ಸರ್ಕಾರ ಅಕ್ಕಿ ಕೊಡುವುದನ್ನು ಉದ್ದೇಶಪೂರ್ವಕವಾಗಿ ತಡೆದಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆರೋಪಿಸಿದ್ದಾರೆ.



ರಾಜ್ಯದ ಜನರಿಗೆ ಅನ್ನಭಾಗ್ಯ ಯೋಜನೆಯಡಿ ಬಡವರಿಗೆ ಅಕ್ಕಿ ನೀಡಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಒಂದು ಕೆ.ಜಿ.ಅಕ್ಕಿಗೆ 36.60 ರೂಪಾಯಿ ನೀಡುವುದಾಗಿ ಹೇಳಿತ್ತು. ಆರಂಭದಲ್ಲಿ ಅಕ್ಕಿ ಕೊಡುವುದಾಗಿ ಭರವಸೆ ನೀಡಿದ್ದ ಕೇಂದ್ರ ಸರ್ಕಾರದ ಭಾರತೀಯ ಆಹಾರ ನಿಗಮ (ಎಫ್‌ಸಿಐ), ನಂತರ ಉಲ್ಟಾ ಹೊಡೆಯಿತು ಎಂದು ಸುಬ್ರಹ್ಮಣ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಗ ಅದೇ ಎಫ್‌ಸಿಐ 3.86 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಹರಾಜು ಮಾಡಲು ಮುಂದಾಗಿದೆ. ಒಂದು ಕೆ.ಜಿ. ಅಕ್ಕಿಗೆ 31.75 ರೂಪಾಯಿ ನಿಗದಿ ಮಾಡಿದೆ. ಆದರೆ ಅಕ್ಕಿ ಖರೀದಿಗೆ ವ್ಯಾಪಾರಿಗಳು ಆಸಕ್ತಿ ತೋರುತ್ತಿಲ್ಲ ಎಂದು ಹೇಳಿದ್ದಾರೆ.

ಈ ಪರಿಸ್ಥಿತಿ ನೋಡಿ ಕರ್ನಾಟಕದ 25 ಬಿಜೆಪಿ ಸಂಸದರಿಗೆ ಈಗಲಾದರೂ ಬುದ್ಧಿ ಬರಬೇಕು. ರಾಜ್ಯದ ಜನರಿಗೆ ಅಕ್ಕಿ ಕೊಡಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಇಲ್ಲದಿದ್ದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜನರು ತಕ್ಕ ಪಾಠ ಕಲಿಸುತ್ತಾರೆ. ವಿಧಾನಸಭಾ ಚುನಾವಣೆಯಲ್ಲಿ ಆದ ಸೋಲು ಲೋಕಸಭಾ ಚುನಾವಣೆಯಲ್ಲೂ ಪುನರಾವರ್ತನೆ ಆಗುತ್ತದೆ ಎಂದು ಬಿಜೆಪಿಯವರನ್ನು ಸುಬ್ರಹ್ಮಣ್ಯ ಎಚ್ಚರಿಸಿದ್ದಾರೆ. ಅನ್ನಭಾಗ್ಯ, ಸಿದ್ದರಾಮಯ್ಯ ಅವರ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಇದರಿಂದ ಬಹಳಷ್ಟು ಕುಟುಂಬಗಳಿಗೆ ಪ್ರಯೋಜನಕಾರಿಯಾಗಿದೆ. ಕೋವಿಡ್ ಸಂದರ್ಭದಲ್ಲಿ ಎಷ್ಟೋ ಜನರ ಜೀವ ಉಳಿಸಿದ್ದು ಇದೇ ಅನ್ನಭಾಗ್ಯ ಯೋಜನೆ. ಈಗ ಇದೇ ಅನ್ನಭಾಗ್ಯ ಯೋಜನೆಯಿಂದ ಸಿದ್ದರಾಮಯ್ಯ ಅವರು ಮತ್ತಷ್ಟು ಜನಪ್ರಿಯರಾಗುತ್ತಾರೆ ಎಂದು ಬಿಜೆಪಿ ಸರ್ಕಾರ ಅಕ್ಕಿ ಕೊಡುವುದನ್ನು ತಡೆದಿದೆ ಎಂದು ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.

ಹಾಡಹಗಲೇ ಏರೋನಿಕ್ಸ್ ಇಂಟರ್ನೆಟ್ ಕಂಪನಿ ಎಂಡಿ, ಸಿಇಒ ಬರ್ಬರ ಹತ್ಯೆ

ಟಿಕ್ ಟಾಕ್ ಸ್ಟಾರ್ ಜೋಕರ್ ಕೃತ್ಯ

ಬೆಂಗಳೂರು, ಜು11– ಏರೋನಿಕ್ಸ್ ಇಂಟರ್ನೆಟ್ ಕಂಪನಿ ಎಂಡಿ ಫಣೀಂದ್ರ ಸುಬ್ರಹ್ಮಣ್ಯ ಮತ್ತು ಸಿಇಒ ವಿನುಕುಮಾರ್ ಅವರನ್ನು ಕಂಪನಿಯ ಮಾಜಿ ಉದ್ಯೋಗಿಯೂ ಆಗಿರುವ ಟಿಕ್ ಟಾಕ್ ಸ್ಟಾರ್ ಜೋಕರ್ ಫೆಲಿಕ್ಸ್ ಎಂಬಾತ ಕೊಲೆ ಮಾಡಿದ ಘಟನೆ ನಗರದ ಅಮೃತಹಳ್ಳಿಯಲ್ಲಿ ಇಂದು ನಡೆದಿದೆ.



ಹತ್ಯೆಯಾದ ಫಣೀಂದ್ರ, ವಿನು


ಏರೋನಿಕ್ಸ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದ ಫೆಲಿಕ್ಸ್, ಕಂಪನಿಯಿಂದ ಹೊರಬಂದು ಸ್ವಂತ ಕಂಪನಿ ಸ್ಥಾಪಿಸಿದ್ದ. ಈ ಉದ್ಯಮಕ್ಕೆ ಫಣೀಂದ್ರ ಎದುರಾಳಿಯಾಗಿದ್ದನಂತೆ. ಇದೇ ಕಾರಣಕ್ಕೆ ಫೆಲಿಕ್ಸ್, ಎದುರಾಳಿ ಫಣೀಂದ್ರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದಾನೆ. ಅದರಂತೆ ಪಂಪಾ ಬಡಾವಣೆಯಲ್ಲಿರುವ ಏರೋನಿಕ್ಸ್ ಕಂಪನಿಗೆ ಇಂದು ಸಂಜೆ 4 ಗಂಟೆ ಸುಮಾರಿಗೆ ಆಗಮಿಸಿ ಎಂಡಿ ಫಣೀಂದ್ರ ಹಾಗೂ ಸಿಇಓ ವಿನುಕುಮಾರ್ ಮೇಲೆ ತಲ್ವಾರ್‌ನಿಂದ ಹಲ್ಲೆ ನಡೆಸಿ ಚಾಕುವಿನಿಂದ ಚುಚ್ಚಿ ಪರಾರಿಯಾಗಿದ್ದಾನೆ.

ತಲ್ವಾರ್ ಮತ್ತು ಚಾಕುವಿನ ಇರಿತದಿಂದ ಗಂಭೀರವಾಗಿ ಗಾಯಗೊಂಡ ಫಣೀಂದ್ರ ಮತ್ತು ವಿನುಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅಮೃತಹಳ್ಳಿ ಠಾಣಾ ಪೊಲೀಸರು ಪರಿಶೀಲನೆ ನಡೆಸಿ ಫಣೀಂದ್ರ, ವಿನುಕುಮಾರ್ ಮೃತದೇಹಗಳನ್ನು ಮಣಿಪಾಲ್ ಆಸ್ಪತ್ರೆಗೆ ರವಾನಿಸಿದ್ದಾರೆ.

ಬೇರೆ ಬೇರೆ ಮಹಡಿಯಲ್ಲಿ ಇಬ್ಬರ ಕೊಲೆ: ಪ್ರಕರಣದಲ್ಲಿ ಫೆಲಿಕ್ಸ್ ಸೇರಿದಂತೆ ಮೂವರು ಆರೋಪಿಗಳು ಕಂಪನಿಗೆ ನುಗ್ಗಿ ಮೊದಲ ಮಹಡಿಯಲ್ಲಿ ಒಬ್ಬರನ್ನು ಕೊಲೆ ಮಾಡಿ, ಎರಡನೇ ಮಹಡಿಯಲ್ಲಿ ಮತ್ತೊಬ್ಬರನ್ನು ಹತ್ಯೆ ಮಾಡಿದ್ದಾರೆ. ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಆಗಮಿಸಿದ್ದು, ಪರಿಶೀಲನೆ ನಡೆಸಲಾಗುತ್ತಿದೆ.

ಮೈಸೂರಲ್ಲಿ ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಆರಂಭ

ಶಿಫಾರಸ್ಸಿಗೆ ಅವಕಾಶವಿಲ್ಲದಂತೆ ಪಾರದರ್ಶಕ ವರ್ಗಾವಣೆ ಪ್ರಕ್ರಿಯೆ



ಮೈಸೂರು, ಜು.11(ಬಿಎಲ್‌ಯು)– ಮೈಸೂರು ಜಿಲ್ಲೆಯ ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಇಂದಿನಿಂದ ಆರಂಭಗೊಂಡಿದೆ. ಮೈಸೂರಿನ ಡಿಡಿಪಿಐ ಕಚೇರಿಯಲ್ಲಿ ನಡೆದ ಕೌನ್ಸಿಲಿಂಗ್‌ನಲ್ಲಿ ಪಾಲ್ಗೊಂಡಿದ್ದ ಶಿಕ್ಷಕರು ತಮಗೆ ಸೂಕ್ತವೆಂದು ಮನಗಂಡ ಶಾಲೆಗಳನ್ನು ಈ ವೇಳೆ ಆಯ್ಕೆ ಮಾಡಿಕೊಂಡರು.

ಅನಾರೋಗ್ಯದ ಹಿನ್ನೆಲೆ ಹಾಗೂ ದೂರದ ಸ್ಥಳವಾದ ಕಾರಣ ತಮಗೆ ವರ್ಗಾವಣೆ ಮಾಡಿಕೊಡುವಂತೆ ಮೈಸೂರು ಜಿಲ್ಲೆಯ ಸರ್ಕಾರಿ ಶಾಲಾ ಶಿಕ್ಷಕರು ಮನವಿ ಮಾಡಿಕೊಂಡಿದ್ದರು. ಇಂತಹ 1894 ಪ್ರಾಥಮಿಕ ಹಾಗೂ 604 ಪ್ರೌಢಶಾಲಾ ಶಿಕ್ಷಕರನ್ನು ವರ್ಗಾವಣೆ ಮಾಡಲು ಶಿಕ್ಷಣ ಇಲಾಖೆ ಪಟ್ಟಿ ಸಿದ್ಧ ಮಾಡಿತ್ತು.

ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ಸಹ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರ ಕೌನ್ಸಿಲಿಂಗ್ ಇಂದು ಆರಂಭಗೊಂಡಿದ್ದು, ಜುಲೈ 15ರವರೆಗೆ ನಡೆಯಲಿದೆ.

ಅನಾರೋಗ್ಯ ಸಮಸ್ಯೆ ಇರುವ ಶಿಕ್ಷಕರು ವೈದ್ಯಕೀಯ ದಾಖಲಾತಿ ನೀಡಿ ವರ್ಗಾವಣೆ ಕೋರಿದ್ದರು. ಇದನ್ನು ಪರಿಶೀಲನೆ ಮಾಡಲು ಶಿಕ್ಷಣ ಇಲಾಖೆ ಮೂವರು ಅಧಿಕಾರಿಗಳ ಸಮಿತಿ ರಚನೆ ಮಾಡಿತ್ತು. ಶಿಕ್ಷಕರ ವೈದ್ಯಕೀಯ ದಾಖಲಾತಿ ಹಾಗೂ ಅವರ ಸ್ಥಿತಿಗತಿ ಅರಿತು 82 ಶಿಕ್ಷಕರಿಗೆ ಅನಾರೋಗ್ಯದ ಕಾರಣ ವರ್ಗಾವಣೆಗೆ ಅರ್ಹರೆಂದು ನೀಡಿತ್ತು. ಇಂದಿನ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಅನಾರೋಗ್ಯದ ಸಮಸ್ಯೆ ಇರುವ 82 ಶಿಕ್ಷಕರಿಗೆ ಮೊದಲ ಆದ್ಯತೆ ನೀಡಲಾಗಿತ್ತು. ಅದರಂತೆ 82 ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗಿಯಾಗಿ ತಾವು ಬಯಸಿದ ಶಾಲೆಗಳನ್ನು ಆಯ್ಕೆ ಮಾಡಿಕೊಂಡರು.

ಇನ್ನುಳಿದ ಶಿಕ್ಷಕರ ಸೇವಾವಧಿ ಸೇರಿದಂತೆ ಹಲವು ದಾಖಲಾತಿ ಪರಿಶೀಲನೆ ಮಾಡಿದ್ದ ಬಿಇಒಗಳು ವರ್ಗಾವಣೆಗೊಳ್ಳುವ ಶಿಕ್ಷಕರಿಗೆ ಕ್ರಮ ಸಂಖ್ಯೆ ನೀಡಿದ್ದರು. ಶಿಕ್ಷಕರು ಆಯಾ ಕ್ರಮ ಸಂಖ್ಯೆ ಬಂದಾಗ ಕೌನ್ಸಿಲಿಂಗ್‌ನಲ್ಲಿ ಪಾಲ್ಗೊಂಡು ತಮಗೆ ಸೂಕ್ತವೆಂದು ಪರಿಗಣಿಸಿದ ಶಾಲೆಗಳನ್ನು ಆಯ್ಕೆ ಮಾಡಿಕೊಂಡರು. ಡಿಡಿಪಿಐ ಹೆಚ್.ಕೆ.ಪಾಂಡು ಸಮ್ಮುಖದಲ್ಲಿ ವರ್ಗಾವಣೆ ಕೌನ್ಸಿಲಿಂಗ್ ನಡೆಯುತ್ತಿದೆ. ಹಲವು ಕಾರಣಗಳಿಂದ ವರ್ಗಾವಣೆ ಬಯಸಿದ್ದ ಶಿಕ್ಷಕರಿಗೆ ಕೌನ್ಸಿಲಿಂಗ್ ಪ್ರಯೋಜನಕಾರಿಯಾಗಿದೆ. ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಶಿಕ್ಷಕರಿಗೆ ಯಾವುದೇ ತೊಂದರೆ ಆಗದಂತೆ ಶಿಕ್ಷಕರ ಸಂಘದವರು ಕುಡಿಯುವ ನೀರು, ಕಾಫಿ, ಟೀ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಿದ್ದರು.

ಶಾಸಕರ ಶಿಫಾರಸು ಪತ್ರಗಳಿಗೆ ಕಿಮ್ಮತ್ತಿಲ್ಲ!

ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಪಾರದರ್ಶಕವಾಗಿ ನಡೆಯುತ್ತಿದೆ. ಯಾರು ಏನೇ ಪ್ರಭಾವ ಬೀರಿದರೂ ಬದಲಾವಣೆ ಸಾಧ್ಯವಿಲ್ಲ ಎಂದು ತಿಳಿದಿದ್ದೂ ಬಹಳಷ್ಟು ಶಾಸಕರು ಶಿಕ್ಷಕರಿಗೆ ಶಿಫಾರಸ್ಸು ಪತ್ರ ಕೊಟ್ಟಿದ್ದಾರೆ.

ವರ್ಗಾವಣೆ ಕೌನ್ಸಿಲಿಂಗ್ ಆರಂಭಗೊಳ್ಳುವ ಹಲವು ದಿನಗಳ ಮೊದಲೇ ಬಹಳಷ್ಟು ಶಿಕ್ಷಕರು ಶಾಸಕರ ಶಿಫಾರಸ್ಸು ಪತ್ರವನ್ನು ಡಿಡಿಪಿಐಗೆ ತಲುಪಿಸಿದ್ದಾರೆ.

ಪಾರದರ್ಶಕವಾಗಿ ನಡೆಯುವ ಕೌನ್ಸಿಲಿಂಗ್‌ನಲ್ಲಿ ಯಾವುದೇ ರೀತಿಯ ಪ್ರಭಾವ ನಡೆಯುವುದಿಲ್ಲ. ಈ ವಿಚಾರ ಶಾಸಕರಿಗೂ ಗೊತ್ತಿದೆ. ಆದರೂ ತಮಗೆ ಬೇಕಾದವರ ಒತ್ತಡಕ್ಕೆ ಮಣಿದು ಶಿಫಾರಸು ಪತ್ರ ಕೊಟ್ಟಿದ್ದಾರೆ. ಆದರೆ, ಶಿಫಾರಸು ಪತ್ರಗಳನ್ನು ವರ್ಗಾವಣೆಯಲ್ಲಿ ಪರಿಗಣಿಸದೆ, ಫೈಲ್ ಮಾಡಿ ಇಟ್ಟಿದ್ದೇವೆ ಎಂದು ಡಿಡಿಪಿಐ ಹೆಚ್.ಕೆ.ಪಾಂಡು ತಿಳಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಹಿಂದೂಗಳ ಹತ್ಯೆ ಹೆಚ್ಚಳ

● ತಿ.ನರಸೀಪುರದಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ.ರವಿ ಆರೋಪ ● ಮೃತನ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ, ಪತ್ನಿಗೆ ಸರ್ಕಾರಿ ಉದ್ಯೋಗಕ್ಕೆ ಆಗ್ರಹ ● ಬಿಜೆಪಿಯಿಂದ 5 ಲಕ್ಷ ರೂ. ಪರಿಹಾರದ ಚೆಕ್ ವಿತರಣೆ



ತಿ.ನರಸೀಪುರ, ಜು.11– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಿಹಾದಿಗಳ ಮಾನಸಿಕತೆಯಲ್ಲಿ ಉನ್ಮಾದ ತೀವ್ರಗೊಂಡಿದ್ದು, ಸಣ್ಣಪುಟ್ಟ ವಿಷಯಗಳನ್ನು ನೆಪವಾಗಿಟ್ಟುಕೊಂಡು ಹಿಂದೂಗಳ ಹಲ್ಲೆ, ಹತ್ಯೆ ನಡೆಯುತ್ತಿರುವುದು ಹೆಚ್ಚಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ.ರವಿ ಆರೋಪಿಸಿದರು.

ಪಟ್ಟಣದಲ್ಲಿ ಹತ್ಯೆಗೀಡಾದ ಯುವ ಬ್ರಿಗೇಡ್ ಸಂಚಾಲಕ ವೇಣುಗೋಪಾಲ್ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಿಂದೂಗಳ ಮೇಲೆ ನಡೆಯುತ್ತಿರುವ ಹತ್ಯೆಗಳು ಮಿತಿ ಮೀರುತ್ತಿವೆ. 16 ರಿಂದ 17 ಪ್ರಕರಣಗಳಲ್ಲಿ ಹಿಂದೂಗಳ ಮೇಲೆ ಹಲ್ಲೆ ಮತ್ತು ಹತ್ಯೆ ನಡೆಸಲಾಗಿದೆ. 2013 ರಿಂದ 19 ರವರೆಗೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಸರಣಿ ಹತ್ಯೆಗಳು ನಡೆದಿದ್ದವು. ಈಗಲೂ ಸಹ ಅದೇ ಉನ್ಮಾದ ಸ್ಥಿತಿಯಲ್ಲಿರುವ ತಾಲಿಬಾನಿಗಳು ಇದು ನಮ್ಮದೇ ಸರ್ಕಾರ ಎಂಬ ಮನಸ್ಥಿತಿ ಹೊಂದಿವೆ. ಹಾಗಾಗಿ ನಾವು ಗಂಭೀರವಾಗಿ ಸಮಾಜವನ್ನು ಜಾಗೃತಗೊಳಿಸುವಂತಹ ಮತ್ತು ನ್ಯಾಯಕ್ಕಾಗಿ ಹೋರಾಟ ಮಾಡುವಂತಹ ಕೆಲಸ ಮಾಡುತ್ತೇವೆ ಎಂದರು.

ಜು.5ರಂದು ಜೈನಮುನಿ ನಂದಿ ಮಹಾರಾಜರನ್ನು ಬಹಳ ಕ್ರೂರವಾಗಿ ಹತ್ಯೆ ಮಾಡಲಾಗಿದೆ. ಇಲ್ಲಿ ಯುವ ಬ್ರಿಗೇಡ್ ಸಂಚಾಲಕ ವೇಣುಗೋಪಾಲ್ ಹತ್ಯೆಯಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರ ಹತ್ಯೆಯಾಗಿರುವುದು ಗಮನಕ್ಕೆ ಬಂದಿದೆ. ಚುನಾವಣೆ ನಡೆದ ಮರು ದಿನವೇ ಹೊಸಕೋಟೆಯಲ್ಲಿ ಕೃಷ್ಣಪ್ಪ ಎಂಬ ಬಿಜೆಪಿ ಕಾರ್ಯಕರ್ತನ ಹತ್ಯೆ ಮಾಡಲಾಯಿತು. ಧಾರವಾಡದ ವಿಜಯೋತ್ಸವದಲ್ಲಿ ಭರತೇಶ್ ಎಂಬ ಬಿಜೆಪಿ ಕಾರ್ಯಕರ್ತನಿಗೆ ಚೂರಿಯಿಂದ ಇರಿಯಲಾಯಿತು. ಯಾದಗಿರಿಯಲ್ಲಿ ಬಿಜೆಪಿ ಕಾರ್ಯಕರ್ತನ ಹತ್ಯೆ ಮಾಡಲಾಯಿತು. ಬಂಗಾಳ, ಒಡಿಸ್ಸಾ ಮೂಲದ ಮುಸ್ಲಿಂರು ಹತ್ಯೆಯ ಹಿಂದಿದ್ದರು ಎಂದು ಅವರು ಈ ಹಿಂದೆ ಹತ್ಯೆಗಳನ್ನು ವಿವರಿಸಿದರು.

ಮಂಗಳೂರಿನಲ್ಲಿ ಆಸೀಫ್ ಹುಸೇನ್ ಎಂಬಾತ ಗ್ಯಾನ್ ಎಂಬ ಕಾರ್ಮಿಕನನ್ನು ಹತ್ಯೆ ಮಾಡುತ್ತಾನೆ, ನಂತರ ಬೆಳಗಾವಿಯಲ್ಲಿ ಫಲಿತಾಂಶ ಬರುತ್ತಿದ್ದಂತೆ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಲಾಗುತ್ತದೆ, ನಂಜನಗೂಡಿನಲ್ಲಿ ಭಾರತ್ ಮಾತಾಕಿ ಜೈ ಎಂದು ಘೋಷಣೆ ಮಾಡಿದ ಇಬ್ಬರು ಬಿಜೆಪಿ ಕಾರ್ಯಕರ್ತರಿಗೆ ಚೂರಿಯಿಂದ ಇರಿಯಲಾಯಿತು. ಭಟ್ಕಳದ ಮುಸ್ಲಿಂ ಯುವಕ ಹಿಂದೂಗಳ ಹೊ ಎತ್ತಲು ಜನ ಇರಬಾರದು ಎಂಬ ಗೋಡೆ ಬರಹ ಬರೆಯುವಂತದ್ದು, ಸರ್ವಜ್ಞ ನಗರ ಕ್ಷೇತ್ರದಲ್ಲಿ ಪದ್ಮನಾಭರೆಡ್ಡಿ ಸಹೋದರರ ಗ್ಯಾರೇಜಿನಲ್ಲಿದ್ದ ಕಾರು ಮತ್ತು ಬೈಕ್‌ಗೆ ಬೆಂಕಿ ಹಾಕಿದ ಪ್ರಕರಣ,ಹಾಸನದಲ್ಲಿ ಪಿಸ್ತೂಲ್ ಹಿಡಿದು ಓಡಾಡಿ ಭಯ ಹುಟ್ಟಿಸುವಂತಹ ಪ್ರಕರಣಗಳೇ ನಡೆದಿವೆ ಎಂದರು.

ಮಾಜಿ ಉಪಮುಖ್ಯಮಂತ್ರಿ ಅಶ್ವಥ್ ನಾರಾಯಣ್ ಮಾತನಾಡಿ, ಹತ್ಯೆಯಾದ ವೇಣುಗೋಪಾಲ್ ಕುಟುಂಬಕ್ಕೆ ಸರ್ಕಾರ 25 ಲಕ್ಷ ರೂ.ಗಳ ಪರಿಹಾರ ಕೊಡಲು ಅವಕಾಶವಿದೆ. ಸರ್ಕಾರ ಇಂತಹ ಪರಿಸ್ಥಿತಿಯಲ್ಲಿ ಯಾವ ರೀತಿಯ ನಿರ್ಧಾರ ಬೇಕಾದರೂ ತೆಗೆದುಕೊಳ್ಳಬಹುದು. ಬೇರೆ ಬೇರೆ ಸಂದರ್ಭ ಗೋಹತ್ಯೆ ಘಟನೆಯಾದಾಗ ಒಬ್ಬ ವ್ಯಕ್ತಿಗೆ 25 ಲಕ್ಷ ರೂ.ಗಳ ಪರಿಹಾರ ನೀಡಲಾಗಿದೆ.ಕುಟುಂಬದ ಬೇಡಿಕೆಯಂತೆ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಹಿಂದೂಗಳ ಮಾರಣಹೋಮವೇ ನಡೆಯುತ್ತಿದೆ. ಮೃತ ಕುಟುಂಬದ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕು ಎಂದ ಅವರು, ಯಾವುದೇ ಕಾರಣಕ್ಕೂ ಕೊಲೆಗಡುಕರಿಗೆ ಕ್ಷಮೆ ನೀಡಬಾರದು. ಎಲ್ಲರಿಗೂ ನೇಣು ಶಿಕ್ಷೆ ವಿಧಿಸಬೇಕು. ಈ ಸಂಬಂಧ ಸದನದ ಹೊರಗೆ ಮತ್ತು ಒಳಗೆ ಪಕ್ಷ ಹೋರಾಟ ನಡೆಸಲಿದ್ದು, ಮೃತನ ಆತ್ಮಕ್ಕೆ ಶಾಂತಿ ದೊರಕಿಸಿಕೊಡಲಿದೆ ಎಂದರು.

ಇದೇ ವೇಳೆ ಮೃತ ವೇಣುಗೋಪಾಲ್ ಪತ್ನಿ ಪೂರ್ಣಿಮಾರಿಗೆ ಪಕ್ಷದ ವತಿಯಿಂದ 5 ಲಕ್ಷ ರೂ.ಗಳ ಪರಿಹಾರದ ಚೆಕ್ ನೀಡಲಾಯಿತು. ಮೃತನ ಮನೆಗೆ ತೆರಳುವ ಮೊದಲು ಬಿಜೆಪಿ ಮುಖಂಡರು ಕೊಲೆಯಾದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಶಾಸಕ ಶ್ರೀವತ್ಸ, ಮಾಜಿ ಸಚಿವ ಎನ್.ಮಹೇಶ್, ಮೇಯರ್ ಶಿವಕುಮಾರ್, ಬಿಜೆಪಿ ಮುಖಂಡ ಡಾ.ರೇವಣ್ಣ ಸಾಮ್ರಾಟ್ ಸುಂದರೇಶನ್, ಕ್ಷೇತ್ರಾಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಾಜಿ ವಿಧಾನಪರಿಷತ್ ಸದಸ್ಯ ಪ್ರೊ. ಮಲ್ಲಿಕಾರ್ಜುನಪ್ಪ. ವೈ.ವಿ. ರವಿಶಂಕರ್, ಅಪ್ಪಣ್ಣ, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಎನ್.ಲೋಕೇಶ್, ಹಿರಿಯೂರು ಪರಶಿವಮೂರ್ತಿ, ಚೌಹಳ್ಳಿ ಸಿದ್ದರಾಜು, ಇಂದ್ರೇಶ್ ಗೌಡ, ತಾ.ಪಂ.ಮಾಜಿ ಸದಸ್ಯ ಬಸವರಾಜು, ಬೈರಾಪುರ ಬಾಲು, ಲೋಕೇಶ್ ಗೌಡ, ಕೆಬ್ಬೆಹುಂಡಿ ಶಿವಕುಮಾರ್, ಕೊತ್ತೇಗಾಲ ಕುಮಾರ್ (ಕಿಟ್ಟಿ), ತೋಂಟೇಶ್ ಸೇರಿದಂತೆ ಯುವ ಬ್ರಿಗೇಡ್‌ನ ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ರಕರಣದ A4 ಆರೋಪಿ ಮೈಸೂರು ಬಿಜೆಪಿ ಕಾರ್ಪೊರೇಟರ್ ಸಹೋದರ

ವೈಯಕ್ತಿಕ ವಿಚಾರಕ್ಕೆ ಮಾಡುವ ಕೊಲೆಗೆ ಒಬ್ಬ ವ್ಯಕ್ತಿ ಅಥವಾ ಪಕ್ಷ ಹೇಗೆ ಹೊಣೆಗಾರರಾಗುತ್ತಾರೆ. ವೈಯಕ್ತಿಕ ಗಲಭೆಗಳು, ಕೃತ್ಯಗಳಿಗೆ ನಾವು ಹೊಣೆಗಾರರಾಗಲು ಸಾಧ್ಯವಿಲ್ಲ. ಬಿಜೆಪಿ ಕಾರ್ಯಕರ್ತನೊಬ್ಬ ಈ ರೀತಿ ಘಟನೆಯಲ್ಲಿ ಭಾಗಿಯಾದ್ರೆ ಅದರ ಹೊಣೆಯನ್ನು ಬಿಜೆಪಿ ಹೊರುತ್ತಾ ? ಇಂತಹ ಸಾವಿನಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎಂದು ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ತಮ್ಮ ಮೇಲಿನ ಆರೋಪಕ್ಕೆ ವಾಗ್ದಾಳಿ ನಡೆಸಿದ್ದಾರೆ.

ಪಕ್ಷದ ಅನೇಕ ಕಾರ್ಯಕರ್ತರು ನಮ್ಮ ಜೊತೆ ಫೋಟೊ ತೆಗೆಸಿಕೊಂಡಿರುತ್ತಾರೆ. ನಾನು ಈ ಭಾಗದ ಮುಖಂಡ. ಅವರು ಮಾಡುವ ವೈಯಕ್ತಿಕ ತಪ್ಪಿಗೆ ನಾವೇಗೆ ಪ್ರೇರಣೆಯಾಗುತ್ತೇವೆ. ಪ್ರಕರಣದ 4ನೇ ಆರೋಪಿ ಮೈಸೂರು ಬಿಜೆಪಿ ಕಾರ್ಪೊರೇಟರ್ ಸಹೋದರನಾಗಿದ್ದಾನೆ. ಇದನ್ನು ನೋಡಿ ಬಿಜೆಪಿಯವರೇ ಹೇಳಿಕೊಟ್ಟಿದ್ದಾರೆ ಎಂದು ನಾನು ಪ್ರಶ್ನಿಸಿದರೆ ಅದು ಹೇಗಿರುತ್ತದೆ ಹೇಳಿ. ಟಿ.ನರಸೀಪುರದಲ್ಲಿ ಬಲಾಢ್ಯ ಇಲ್ಲ ನೀನು ಕೊಲೆ ಮಾಡು, ನಾವು ರಾಜಕಾರಣ ಮಾಡುತ್ತೇವೆ ಎಂದು ಆತನಿಗೆ ಹೇಳಿಕೊಟ್ಟಿದ್ರಾ ಎಂದು ನಾನು ಪ್ರಶ್ನಿಸುತ್ತೇನೆ. ಈ ಪ್ರಶ್ನೆಗೆ ಅವರು ಉತ್ತರಿಸಲು ಸಾಧ್ಯನಾ? ಎಂದು ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಸಾವಿನಲ್ಲಿ ರಾಜಕಾರಣ ಯಾರೂ ಮಾಡಬಾರದು. ಬಿಜೆಪಿಯವರು ಶವದ ಮೇಲೆ ರಾಜಕಾರಣ ಮಾಡಲು ಹೊರಟಿದ್ದಾರೆ. ಬಿಜೆಪಿಗೆ ಸದಾ ಕಾಲ ಇಂಥ ಕೊಲೆ ಗಲಭೆಗಳ ಬಗ್ಗೆ ಆಸಕ್ತಿ. ನಾನು ಈ ಕೊಲೆಯನ್ನ ಖಂಡಿಸುತ್ತೇನೆ. ಸರಿಯಾದ ನಿಟ್ಟಿನಲ್ಲಿ ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ನಮ್ಮ ತಂದೆ ಸೂಚನೆ ನೀಡಿದ್ದಾರೆ ಎಂದು ಸುನೀಲ್ ಬೋಸ್ ಹೇಳಿದರು. ಕ್ಷೇತ್ರದ ಅಧ್ಯಕ್ಷ ಎಂಡಿ ಬಸವರಾಜು, ಟೌನ್ ಅಧ್ಯಕ್ಷ ಅಂದಾನಿಗೌಡ, ಯುವ ಮುಖಂಡ ಇಂದ್ರೇಶ್, ಅನುಪ್ ಗೌಡ, ಜಗದೀಶ್, ರಂಜಿತ್ ಇದ್ದರು

ಸಮಗ್ರ ತನಿಖೆ ನಡೆಸಿ ಶಿಕ್ಷೆ

"ಎಲ್ಲಾ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಜೈನ ಮುನಿ ಹತ್ಯೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸುವ ಅಗತ್ಯವಿಲ್ಲ. ನಮ್ಮ ಪೊಲೀಸರೇ ತನಿಖೆ ನಡೆಸಿ ಆರೋಪಿಗಳಿಗೆ ಶಿಕ್ಷೆ ಕೊಡಿಸುತ್ತಾರೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ (ವಿಧಾನಸಭಾ ಅಧಿವೇಶನದಲ್ಲಿ).

ಆರೋಪಿಗಳು ಮೂರೇ ತಿಂಗಳಲ್ಲಿ ಹೊರಗೆ ಬಂದ್ರೆ ನಾನು, ನನ್ನ ಮಗಳು ಕತ್ತು ಕುಯ್ದುಕೊಂಡು ಸಾಯುತ್ತೇವೆ...

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮುಂದೆ ವೇಣುಗೋಪಾಲ್ ಪತ್ನಿ ಪೂರ್ಣಿಮಾ ಎಚ್ಚರಿಕೆ

ತಿ. ನರಸೀಪುರ ಜು 11– ಆರೋಪಿಗಳಿಗೆ ಗಲ್ಲು ಶಿಕ್ಷೆ ಆಗಬೇಕು. ಮೂರೇ ತಿಂಗಳಿಗೆ ಆರೋಪಿಗಳು ಹೊರಗೆ ಬಂದ್ರೆ ನಾನು ಮತ್ತು ಮಗಳು ಕತ್ತು ಕುಯ್ದುಕೊಂಡು ಸಾಯುತ್ತೇವೆ. ಕೊಲೆಯಾದ ವೇಣುಗೋಪಾಲ್ ಪತ್ನಿ ಪೂರ್ಣಿಮಾ, ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್‌ರಿಗೆ ನೀಡಿದ ಎಚ್ಚರಿಕೆ.

ಇಂದು ಟಿ.ನರಸೀಪುರದ ವೇಣುಗೋಪಾಲ್ ನಿವಾಸಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಸುನೀಲ್ ಬೋಸ್ ಸಾಂತ್ವನ ಹೇಳಿದರು. ಈ ವೇಳೆ ಸುನೀಲ್ ಬೋಸ್ ಮುಂದೆ ಮೃತ ವೇಣುಗೋಪಾಲ್ ಪತ್ನಿ ಅಳಲು ತೋಡಿಕೊಂಡರು. ನಾನು ಕುರುಬ ಸಮುದಾಯಕ್ಕೆ ಸೇರಿದವಳು. ನನ್ನ ಗಂಡ ನಾಯಕ ಸಮುದಾಯಕ್ಕೆ ಸೇರಿದವನು. ಇಬ್ಬರು ಪ್ರೀತಿಸಿ ಮದುವೆ ಆಗಿದ್ದೇವೆ 7 ವರ್ಷ ಜೀವನ ಸಾಗಿಸಿದ್ದೇನೆ ಈಗ ನನಗೆ ಯಾರು ಗತಿ. ಆರೋಪಿಗಳಿಗೆ ಗಲ್ಲು ಶಿಕ್ಷೆ ಆಗಬೇಕು. ಮೂರೇ ತಿಂಗಳಿಗೆ ಆರೋಪಿಗಳು ಹೊರಗೆ ಬಂದ್ರೆ ನಾನು ಮತ್ತು ಮಗಳು ಕತ್ತು ಕುಯ್ದುಕೊಂಡು ಸಾಯುತ್ತೇವೆ. ಹನುಮ ಜಯಂತಿ ನಡೆದ ವೃತ್ತದಲ್ಲೇ ನಮ್ಮ ಸಾವು ಎಂದು ಎಚ್ಚರಿಕೆ ನೀಡಿದರು. ಹಿಂದೂಗಳನ್ನೇ ಮುಗಿಸುತ್ತಿದ್ದಾರಲ್ಲ ಸರ್ ಎಂದು ವೇಣುಗೋಪಾಲ್ ಪತ್ನಿ ಪೂರ್ಣಿಮಾ ಪ್ರಶ್ನಿಸಿದರು. ತಪ್ಪು ಯಾರದ್ದೇ ಆದರೂ ಪ್ರಾಣ ಒಂದೇ ಅಲ್ವೇನಮ್ಮ ಎಂದು ಹೇಳಿ ಸುನೀಲ್ ಬೋಸ್ ಸಮಾಧಾನಿಸಿದರು.



ಬಳಿಕ ಮಾತನಾಡಿದ ಸುನೀಲ್ ಬೋಸ್, ವೇಣುಗೋಪಾಲ್ ಹತ್ಯೆ ಪ್ರಕರಣದಲ್ಲಿ ತಮ್ಮ ಹೆಸರು ಎಳೆದು ತಂದ ಚಕ್ರವರ್ತಿ ಸೂಲಿಬೆಲೆಗೆ ತೀಕ್ಷ್ಣ ತಿರುಗೇಟು ನೀಡಿದರು. ಚಕ್ರವರ್ತಿ ಸೂಲಿಬೆಲೆಗೆ ತಲೆ ಸರಿ ಇಲ್ಲ. ಅವರಿಗೆ ಮೊದಲು ಉತ್ತಮ ಆಸ್ಪತ್ರೆಯಲ್ಲಿ ಚಿಕಿತ್ಸೆಯ ಅಗತ್ಯ ಇದೆ. ಸುಳ್ಳಿನಿಂದಲೇ ಜೀವನ ಕಟ್ಟಿಕೊಂಡಿರುವ ವ್ಯಕ್ತಿ ಅವರು. ಈ ಕೊಲೆ ಪ್ರಕರಣದಲ್ಲೂ ಸುಳ್ಳು ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಕೊಲೆ ವಿಚಾರದಲ್ಲಿ ಸೂಲಿಬೆಲೆಗೆ ಪ್ರಾಥಮಿಕ ಮಾಹಿತಿ ಇಲ್ಲ. ಸತ್ತಿರುವ ಯುವಕ ನಾಯಕ ಸಮುದಾಯದ ವ್ಯಕ್ತಿ. ಆದರೆ ಸೂಲಿಬೆಲೆ, ಅವರನ್ನು ದಲಿತ ಸಮುದಾಯ ಎಂದು ಸುಳ್ಳು ಹೇಳುತ್ತಾರೆ. ಸೂಲಿಬೆಲೆಗೆ ಮೊದಲು ಚಿಕಿತ್ಸೆ ಕೊಡಿಸಿ ಎಂದು ಕಿಡಿಕಾರಿದರು.

ವರ್ಷಾನುಗಟ್ಟಲೇ ದೂರಾಗಿದ್ದ ಸತಿ–ಪತಿ ಒಂದಾದರು

ಲೋಕ ಅದಾಲತ್‌ನಲ್ಲಿ 5934 ಪ್ರಕರಣಗಳ ಇತ್ಯರ್ಥ, 5.36 ಕೋಟಿ ಹಣ ವಸೂಲಿ



ಹುಣಸೂರು, ಜು.11– ಹುಣಸೂರಿನಲ್ಲಿ ನಡೆದ ಮೆಗಾ ಲೋಕ ಅದಾಲತ್‌ನಲ್ಲಿ ಸಾವಿರಾರು ಪ್ರಕರಣಗಳು ಇತ್ಯರ್ಥಗೊಂಡು ಐದೂವರೆ ಕೋಟಿ ರೂ. ಹಣ ವಸೂಲಿ ಹಾಗೂ ಅನೇಕ ವರ್ಷಗಳಿಂದ ದೂರವಾಗಿದ್ದ ದಂಪತಿಗಳು ಒಂದಾದ ಪ್ರಕರಣಗಳು ಯಶಸ್ವಿಯಾಗಿ ನಡೆದವು.

8ನೇ ಜಿಲ್ಲಾ ಸತ್ರ ನ್ಯಾಯಾಧೀಶರಾದ ಮೋಹನ್‌ಕುಮಾರ್ ಭೀಮನಗೌಡ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಹುಣಸೂರಿನ ವಿವಿಧ ನ್ಯಾಯಾಲಯಗಳಲ್ಲಿ ಮೆಗಾ ಲೋಕ ಅದಾಲತ್ ನಡೆಯಿತು ಈ ವೇಳೆ ಬಾಕಿ ಇರುವ 5934 ವಿವಿಧ ಪ್ರಕರಣಗಳು ರಾಜಿಯಾಗಿ 5.36 ಕೋಟಿ ರೂ. ಹಣ ವಸೂಲಾತಿಯಾಯಿತು. ಕಳೆದ 11 ವರ್ಷಗಳಿಂದ ಬೇರೆಯಾಗಿದ್ದ ದಂಪತಿ ಒಂದಾದ ಪ್ರಕರಣ ನಡೆಯಿತು

ಹುಣಸೂರಿನ 8ನೇ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ 1167 ಪ್ರಕರಣಗಳು, ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ 1132, ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ 1222, ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ 1127 ಪ್ರಕರಣಗಳು ಸೇರಿದಂತೆ ಒಟ್ಟು 5934 ಪ್ರಕರಣಗಳು ರಾಜಿಯಾಗುವ ಮೂಲಕ ಇತ್ಯರ್ಥವಾಗಿ 5 ಕೋಟಿ 36 ಲಕ್ಷ ಹಣ ವಸೂಲಿಯಾಗಿವೆ.

11 ವರ್ಷಗಳ ಬಳಿಕ ಒಂದಾದ ದಂಪತಿ: ಕೌಟುಂಬಿಕ ಕಲಹದಿಂದ ಕಳೆದ 11 ವರ್ಷಗಳಿಂದ ದೂರ ಇದ್ದ ದಂಪತಿ ಲೋಕ ಅದಾಲತ್‌ನಲ್ಲಿ ಒಂದಾದ ಘಟನೆ ನಡೆಯಿತು.

ತಾಲೂಕಿನ ಮೂಡಲಕೊಪ್ಪಲಿನ ರವಿಕುಮಾರ್ ಮತ್ತು ಮೋದೂರಿನ ಸವಿತಾ ದಂಪತಿಗೆ ಒಬ್ಬಳು ಹೆಣ್ಣು ಮಗಳಿದ್ದು 6ನೇ ತರಗತಿ ಓದುತ್ತಿದ್ದಾಳೆ. ಆದರೆ ಕೌಟುಂಬಿಕ ಕಲಹದಿಂದ ಕಳೆದ 11 ವರ್ಷಗಳಿಂದ ಈ ದಂಪತಿ ದೂರಾಗಿತ್ತು ಈ ಜೋಡಿಯನ್ನು ಒಂದು ಮಾಡಿಸುವಲ್ಲಿ ಲೋಕ ಅದಾಲತ್ ಯಶಸ್ವಿಯಾಯಿತು.

ಅದೆ ರೀತಿ ತಾಲೂಕಿನ ಹರವೆಲ್ರಾಮೆನಹಳ್ಳಿ ಗ್ರಾಮದ ಮಹದೇವಸ್ವಾಮಿ ಹಾಗೂ ಪಿರಿಯಪಟ್ಟಣ ತಾಲೂಕಿನ ಕೋಣಸೂರು ಗ್ರಾಮದ ದಂಪತಿ ಕೂಡ ಒಂದಾದರು.

ತಾಲೂಕಿನ ಕೆಬ್ಬೆಕೊಪ್ಪಲಿನ ಮೋಹನ್ ಉತ್ತರ ಕರ್ನಾಟಕದ ಸವಿತಾಮೋಹನ್ ಪ್ರೀತಿಸಿ ಮದುವೆಯಾಗಿದ್ದರು. ಕೆಲವು ವರ್ಷಗಳಿಂದ ಕೌಟುಂಬಿಕ ಕಲಹದಿಂದ ದೂರವಿದ್ದರು. ಲೋಕ ಅದಾಲತ್‌ನಲ್ಲಿ ಇಬ್ಬರೂ ಪರಸ್ಪರ ಒಪ್ಪಿಗೆ ಸೂಚಿಸಿ ಒಂದಾದರು.

ದಂಪತಿಗಳ ಈ ಮೂರು ಪ್ರಕರಣಗಳಲ್ಲಿ ಎ.ಪಿ.ಪಿ.ಅರ್ಚನಾ ಸರ್ಕಾರಿ ವಕೀಲರಾಗಿ ಕಾರ್ಯ ನಿರ್ವಹಿಸಿದರು. ಒಂದಾದ ದಂಪತಿಗಳಿಗೆ ವಕೀಲ ಮಹೇಶ್ ಮಂತ್ರ ಮಾಂಗಲ್ಯ ಹೇಳಿ ಹಾರ ಬದಲಾಯಿಸುವಂತೆ ತಿಳಿಸಿದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿರಿನ್ ಜಾವಿದ್ ಅನ್ಸಾರಿ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜೈಬುನ್ನಿಸಾ, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಮಧು, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಪೂಜಾ ಬೆಳಕೆರೆ, ವಕೀಲರಾದ ಎಂ.ವಿ.ಪ್ರಕಾಶ್, ಎಂ.ವಿ.ಮಹೇಶ್, ಶಂಕರೇಗೌಡ, ಮುರಳಿ, ಇದ್ದರು.

'ಶಕ್ತಿ' ಯೋಜನೆಯ ಎಫೆಕ್ಟ್: ನಿಲ್ಲದ ಬಸ್ಸು, ವಿದ್ಯಾರ್ಥಿಗಳಿಂದ ರಸ್ತೆ ಬಂದ್



ಮಲ್ಕುಂಡಿ, ಜು.11– ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಬಸ್ಸುಗಳನ್ನು ನಿಲ್ಲಿಸದಿರುವುದನ್ನು ವಿರೋಧಿಸಿ ದುಗ್ಗಹಳ್ಳಿ ಗ್ರಾಮದ ವಿದ್ಯಾರ್ಥಿಗಳು ಹುರ, ಹುಲ್ಲಹಳ್ಳಿ ರಸ್ತೆಯನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ದುಗ್ಗಹಳ್ಳಿ ಗ್ರಾಮದಿಂದ ನಾವುಗಳು ಹುರ–ಹುಲ್ಲಹಳ್ಳಿ ಮುಖ್ಯ ರಸ್ತೆವರೆಗೂ ನಡೆದುಕೊಂಡು ಬಂದು ಬಸ್ಸಿಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದರೂ ಬಸ್ಸುಗಳನ್ನು ನಿಲ್ಲಿಸುತ್ತಿಲ್ಲ. ನಾವು ಶಾಲಾ ಕಾಲೇಜಿಗೆ ಸರಿಯಾದ ಸಮಯಕ್ಕೆ ಹೋಗದೆ ತುಂಬಾ ತೊಂದರೆಯಾಗಿದೆ. ನಮ್ಮ ಕಷ್ಟಗಳನ್ನು ಯಾರಿಗೆ ಹೇಳಿಕೊಳ್ಳುವುದು ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ ಅವಕಾಶ ಕಲ್ಪಿಸಿದೆ. ಆದ್ದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ಬಸ್ಸುಗಳನ್ನು ನಿಲ್ಲಿಸುತ್ತಿಲ್ಲ. ನಾವು ಶಾಲಾ–ಕಾಲೇಜುಗಳಿಗೆ ತೆರಳಲು ತುಂಬಾ ತೊಂದರೆಯಾಗಿದೆ. ಇದರಿಂದ ನಾವು ತರಗತಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯವಿರುವಷ್ಟು ಬಸ್ಸುಗಳು ಬರುತ್ತಿಲ್ಲ. ಇದರಿಂದ ತುಂಬಾ ತೊಂದರೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಕೆಎಸ್‌ಆರ್‌ಟಿಸಿ ಭದ್ರತಾ ವಿಭಾಗದ ಅಧಿಕಾರಿ ಶಿವರಾಜೇಗೌಡ, ಯೋಜನೆಯಡಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಬಸ್ಸುಗಳು ತುಂಬಿರುವ ಹಿನ್ನೆಲೆಯಲ್ಲಿ ನಿಲ್ಲಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಮುಂದೆ ದುಗ್ಗಹಳ್ಳಿ ಗ್ರಾಮಕ್ಕೆ ಬಸ್ಸಿನ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದ ಮೇಲೆ ವಿದ್ಯಾರ್ಥಿಗಳು ಪ್ರತಿಭಟನೆಯನ್ನು ಕೈಬಿಟ್ಟರು.



ಅವ್ಯವಸ್ಥೆಗಳ ಆಗರ ಬಾಲಕಿಯರ ವಸತಿ ಶಾಲೆ

● ಗಬ್ಬೆದ್ದು ನಾರುವ ಶೌಚಾಲಯ ● ಸ್ನಾನಕ್ಕೆ ಬಿಸಿ ನೀರಿಲ್ಲ, ಒಡೆದ ಕೊಠಡಿಯ ಕಿಟಕಿ ಬಾಗಿಲುಗಳು ● ಬಾಲಕಿಯರ ಗೋಳು ಕೇಳುವವರು ಯಾರು?





ಹೆಚ್.ಡಿ.ಕೋಟೆ, ಜು.11– ಪಟ್ಟಣದ ಬಿಆರ್‌ಸಿ ಕಚೇರಿ ಸಮೀಪವಿರುವ ಕಸ್ತೂರಿ ಬಾ ಗಾಂಧಿ ಬಾಲಕಿಯರ ವಸತಿ ಶಾಲೆಯಲ್ಲಿ ಮೂಲಸೌಕರ್ಯಗಳಿಲ್ಲದೆ ವಿದ್ಯಾರ್ಥಿನಿಯರು ಸಂಕಷ್ಟದಲ್ಲಿ ಸಿಲುಕಿದ್ದಾರೆ.

ಈ ನಿಲಯದಲ್ಲಿ 6ನೇ ತರಗತಿಯಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ಸುಮಾರು 95 ವಿದ್ಯಾರ್ಥಿನಿಯರಿದ್ದು, ಅವರ ಪಾಡು ಹೇಳತೀರದಾಗಿದೆ. ಈ ಹಾಸ್ಟೆಲ್‌ನಲ್ಲಿ ಉತ್ತಮ ಸೌಕರ್ಯವಿದೆ ಎಂದು ಬಡ ವಿದ್ಯಾರ್ಥಿನಿಯರು ಬಂದರೆ, ಮೂಲ ಸೌಕರ್ಯಗಳೇ ಇಲ್ಲದಂತಾಗಿದೆ. ಈ ವಿಚಾರ ಗೊತ್ತಿದ್ದೂ ಗೊತ್ತಿಲ್ಲದ ಹಾಗೆ ಅಧಿಕಾರಿಗಳು ಮೌನ ತಾಳಿದ್ದಾರೆ. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಉದಯಕುಮಾರ್ ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಕೃಷ್ಣಯ್ಯ ಅವರು ಬೇಜವಾಬ್ದಾರಿತನ ತೋರಿಸುತ್ತಿದ್ದಾರೆ ಎಂದು ವಿದ್ಯಾರ್ಥಿನಿಯರು ಆರೋಪ ಮಾಡಿದ್ದಾರೆ

ಸಮಸ್ಯೆಗಳ ಸರಮಾಲೆ: ಈ ವಿದ್ಯಾರ್ಥಿ ನಿಲಯದಲ್ಲಿ ಸ್ನಾನ ಮಾಡಲು ಬಿಸಿ ನೀರಿಲ್ಲ, ಕೊಠಡಿಗಳಲ್ಲಿ ಕಿಟಕಿಗಳ ಗಾಜುಗಳು ಒಡೆದು ಹೋಗಿವೆ, ಶೌಚಾಲಯದ ಬಾಗಿಲುಗಳಿಗೆ ಚಿಲಕ ಇಲ್ಲ, ಶೌಚಾಲಯದಲ್ಲಿ ಸ್ವಚ್ಛತೆಯಂತೂ ಇಲ್ಲದೆ ಗಬ್ಬೆದ್ದು ನಾರುತ್ತಿದೆ. ಅದೆಷ್ಟೋ ದಿನವಾಯಿತೋ ಈ ಶೌಚಾಲಯವನ್ನು ಸ್ವಚ್ಛಗೊಳಿಸಿ. ನಾನು ಶೌಚಾಲಯಕ್ಕೆ ಹೋಗಬೇಕಾದರೆ ನನ್ನ ಸ್ನೇಹಿತರನ್ನು ಶೌಚಾ ಲಯದ ಮುಂದೆ ನಿಲ್ಲಿಸಿ ಶೌಚಾಲಯಕ್ಕೆ ತೆರಳಬೇಕಾದ ಪರಿಸ್ಥಿತಿ ಇದೆ. ಕೊಠಡಿಗಳಲ್ಲಿ ಕಿಟಕಿ ಗಾಜುಗಳು ಒಡೆದು ಹೋಗಿದ್ದು, ಪ್ರತಿದಿನ ಸಮವಸ್ತ್ರಗಳನ್ನು ಬದಲಾಯಿಸಲು ಮುಜುಗರವಾಗುತ್ತದೆ. ಆದ್ದರಿಂದ ನಮ್ಮ ಕೆಲವು ವಸ್ತ್ರಗಳನ್ನೇ ಕಿಟಕಿಗೆ ಮುಚ್ಚಿ ಸಮವಸ್ತ್ರಗಳನ್ನು ಬದಲಾಯಿಸುತ್ತೇವೆ ಎಂದು ಕಣ್ಣೀರಿಡುತ್ತಾರೆ ವಿದ್ಯಾರ್ಥಿನಿ ಐಶ್ವರ್ಯ.

ಹಾಸ್ಟೆಲ್‌ನಲ್ಲಿ ಬಿಸಿ ನೀರೇ ಇಲ್ಲ. ಕುಡಿಯುವುದಕ್ಕೆ ಮಾತ್ರ ಬಿಸಿ ನೀರು ಕೊಡ್ತಾರೆ ಅಷ್ಟೇ. ಸ್ನಾನ ಮಾಡುವುದಕ್ಕೆ ಬಿಸಿ ನೀರಿಲ್ಲ. ಪ್ರತಿದಿನ ತಣ್ಣೀರಿನಲ್ಲಿ ಸ್ನಾನ ಮಾಡುತ್ತೇವೆ. ಕೆಲವರಿಗೆ ತಣ್ಣೀರು ಸ್ನಾನ ಆಗುತ್ತದೆ. ಇನ್ನು ಕೆಲವರಿಗೆ ತಣ್ಣೀರು ಸ್ನಾನ ಆಗದೆ ಎಷ್ಟೋ ಸ್ನೇಹಿತರುಗಳು ಜ್ವರದಿಂದ ನರಳುತ್ತಿದ್ದಾರೆ. ಇನ್ನು ಕೆಲವರು ತಿಂಗಳ ಪಿರಿಯಡ್ಸ್ ಆದವರು, ತಣ್ಣೀರಿನಲ್ಲಿ ಸ್ನಾನ ಮಾಡುವುದಕ್ಕೆ ಆಗದೆ ಸ್ನಾನ ಮಾಡುತ್ತಲೇ ಇಲ್ಲ ನಾವು ಮಲಗುವ ಕೊಠಡಿಗಳಲ್ಲಿ ಕಿಟಕಿ ಗಾಜುಗಳೇ ಇಲ್ಲ. ರಾತ್ರಿ ವೇಳೆ ತುಂಬಾ ಚಳಿ ಆಗುತ್ತಿರುವ ಕಾರಣ ನಮ್ಮ ಬಟ್ಟೆಗಳನ್ನೇ ಕಿಟಕಿಗೆ ಮುಚ್ಚುತ್ತೇವೆ. ಇಷ್ಟೆಲ್ಲಾ ಸಮಸ್ಯೆ ಇದ್ದರೂ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ವಿದ್ಯಾರ್ಥಿನಿ ಸಿಂಚನ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಈ ಸಂದರ್ಭ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಉದಯಕುಮಾರ್, ಈ ಹಾಸ್ಟಲ್‌ನಲ್ಲಿ ಇರುವ ಮಕ್ಕಳಿಗೆ ಯಾವುದೇ ಸಮಸ್ಯೆ ಇಲ್ಲ. ಅಲ್ಲಿ ಸ್ವಲ್ಪ ಬಿಸಿ ನೀರು ಬರುತ್ತಿಲ್ಲ ಅಷ್ಟೇ, ಶೌಚಾಲಯ ಸ್ವಲ್ಪ ಸರಿಯಾಗಿ ಕ್ಲೀನ್ ಮಾಡಿಲ್ಲ ಅಷ್ಟೇ, ಈ ಹಾಸ್ಟೆಲ್ ಜವಾಬ್ದಾರಿಯನ್ನು ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿಗಳಾದ ಕೃಷ್ಣಯ್ಯ ಅವರಿಗೆ ನೀಡಲಾಗಿದ್ದು, ಯಾವುದೇ ಸಮಸ್ಯೆಗಳು ಕಾಣುತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಪೋಷಕರುಗಳು ಮಾತಾಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಉದಯಕುಮಾರ್ ಅವರು ವಿದ್ಯಾರ್ಥಿ ನಿಲಯದಲ್ಲಿ ಯಾವುದೇ ತೊಂದರೆ ಇಲ್ಲ. ಎಲ್ಲಾ ಮೂಲಸೌಕರ್ಯಗಳು ಇದೆ. ಸ್ವಚ್ಛತೆ ಬಹಳ ಚೆನ್ನಾಗಿದೆ ಅಂತ ಹೇಳುತ್ತಾರೆ. ಆದರೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ವಿದ್ಯಾರ್ಥಿ ನಿಲಯದಲ್ಲಿ ಅವರ ಮಕ್ಕಳುಗಳನ್ನು ಒಂದು ವಾರ ಬಿಟ್ಟು ನೋಡಲಿ, ನೋಡೋಣ. ಆಗ ಅವರ ಮಕ್ಕಳು ಈ ಹಾಸ್ಟಲ್ ವ್ಯವಸ್ಥೆ ತುಂಬಾ ಚೆನ್ನಾಗಿದೆ ಎಂದು ಒಪ್ಪಿಕೊಳ್ಳಲಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರದ ಶಾಸಕರಾದ ಅನಿಲ್ ಚಿಕ್ಕಮಾದು ಅವರು ಈ ನಿಲಯಕ್ಕೆ ಭೇಟಿ ನೀಡಿ ಇಲ್ಲಿರುವ ಸಮಸ್ಯೆಗಳನ್ನು ನೋಡಿ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ಉತ್ತಮ ಮೂಲಸೌಕರ್ಯಗಳನ್ನ ಒದಗಿಸಿಕೊಡುತ್ತಾರೆ ಎಂದು ಕಾದು ನೋಡಬೇಕಾಗಿದೆ ಎನ್ನುತ್ತಾರೆ ಪೋಷಕರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ಬಂಪರ್ (ತ): ಮ.1.25ಕ್ಕೆ, ನೀಯತ್ (ಹಿಂ): ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಇನ್ಸಿಡಿಯಸ್ ದಿ ರೆಡ್ ಡೋರ್ (ಇಂ): ಬೆ.11.30ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ನ್ಯಾನೋ ನಾರಾಯಣಪ್ಪ (ಕ): ಮ.1.45ಕ್ಕೆ, ರುದ್ರಾಂಗಿ (ತೆ): ಸಂ.4.30ಕ್ಕೆ.
ಸ್ಕ್ರೀನ್ 3	ರಾಯರು ಬಂದರು ಮಾವನ ಮನೆಗೆ (ಕ): ಬೆ.10.30ಕ್ಕೆ, ಓ ಸಾತಿಯಾ (ತೆ): ಮ.1.15ಕ್ಕೆ, ರಾ.10ಕ್ಕೆ, ಕಬಡಿ ಬ್ರೋ (ತ): ಸಂ.4ಕ್ಕೆ, 72 ಹೂರೇನ್ (ಹಿಂ): ಸಂ.6.25ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಮಧುರ ಮನೋಹರ ಮೋಹನ (ಮ): ಬೆ.10.50ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.1.25ಕ್ಕೆ, ರಾ.9.40ಕ್ಕೆ, ಶ್ರೀ ಪ್ರಸನ್ನ ವೆಂಕಟದಾಸರು (ಕ): ಸಂ.4.30ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬಂಪರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೆಂಗಳೂರು ಬಾಯ್ಸ್ (ಕ)	2 ಪ್ರದರ್ಶನಗಳು
ರಾಯರು ಬಂದರು ಮಾವನ ಮನೆಗೆ (ಕ)	2 ಪ್ರದರ್ಶನ
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹತ್ಯಾ (2023 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾಮನ್ನಾನ್ (ತ)	4 ಪ್ರದರ್ಶನಗಳು
ರಾಜ್‌ಕಮಲ್	
ರುದ್ರಾಂಗಿ (ತೆ)	4 ಪ್ರದರ್ಶನಗಳು
ಸಂಗಂ	
ಹತ್ಯಾ (2023 (ಕ)	4 ಪ್ರದರ್ಶನಗಳು
ಲಿಡೋ	
90 ಬಿಡಿ ಮನೀಗ್ ನಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟಕ್ಕರ್ (ತ)	4 ಪ್ರದರ್ಶನಗಳು
ಪ್ರಭಾ	
ರಾಘವೇಂದ್ರ ಸ್ಟೋರ್ಸ್ (ಕ)	4 ಪ್ರದರ್ಶನಗಳು





ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

14ನೇ ವರ್ಷದ ಸವಿನೆನಪು



ಕೆ.ಎಸ್.ಸುನೀಲ್ ಕುಮಾರ್

ನನ್ನ ಪ್ರೀತಿಯ ಮಗನೇ ನೀನು ನಮ್ಮನ್ನಗಲಿ 14ವರ್ಷ ಕಳೆದರೂ ನಿನ್ನ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.

ದುಃಖತಪ್ತರು: ತಂದೆ ಕೆ.ಎಸ್.ಕೃಷ್ಣಪ್ಪ, ಕೆಎಸ್‌ಕೆ ಸೈಕಲ್ ಶಾಪ್, ಮತ್ತು ನಂದಿನಿ ಮಿಲ್ಕ್ ಡೈರಿ ಸರಸ್ವತಿಪುರಂ ತಾಯಿ: ಯಶೋಧಮ್ಮ, ತಮ್ಮ: ಸಂಜೀವ್, ತಂಗಿ: ಬೃಂದಾ, ಸೊಸೆ: ಲಾವಣ್ಯ, ಮೊಮ್ಮಕ್ಕಳು ಹಾಗೂ ಸ್ನೇಹಿತರುಗಳು

8ನೇ ವರ್ಷದ ಪುಣ್ಯಸ್ಮರಣೆ



ರಂಗಪ್ಪ .ಕೆ

ಮಾಜಿ ಗ್ರಾ.ಪಂ.ಸದಸ್ಯರು, ಹೆಬ್ಬಾಳು

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಶ್ರೀಮತಿ ಜಯಮ್ಮ, ಮಕ್ಕಳು, ಲೋಕೇಶ್ ಆರ್, ಮಂಜು.ಆರ್, ಮಹೇಶ್.ಆರ್, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು ಹಾಗೂ ಕುಂಬಾರಕೊಪ್ಪಲಿನ ಗ್ರಾಮಸ್ಥರು.

